ಭಾನುವಾರ, ಅಕ್ಟೋಬರ್ 12, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 282 | ಪುಟ 20
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

3 ತಿಂಗಳಾದರೂ ಬಾರದ ವೇತನ 6
ಅಫ್ಗನ್ ಸಚಿವರ ಸುದ್ದಿಗೋಷ್ಠಿ: ಪತ್ರಕರ್ತೆಯರಿಗೆ ನಿರ್ಬಂಧ 7

ವೈದ್ಯ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ

ಕೋಲ್ಕತ್ತ (ಪಿಟಿಐ): ಎರಡನೇ ವರ್ಷದ ವೈದ್ಯ ವಿದ್ಯಾರ್ಥಿನಿಯನ್ನು ಅರಣ್ಯ ಪ್ರದೇಶಕ್ಕೆ ಹೊತ್ತುಕೊಂಡು ಹೋಗಿ ಅತ್ಯಾಚಾರ ಎಸಗಿದ ಘಟನೆ ಶುಕ್ರವಾರ ರಾತ್ರಿ ನಡೆದಿದೆ.

'ನನ್ನ ಮಗಳ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ' ಎಂದು ಸಂತ್ರಸ್ತೆಯ ತಾಯಿ ದೂರಿದ್ದಾರೆ. ಪಶ್ಚಿಮ ಬರ್ದ್‌ಮಾನ್ ಜಿಲ್ಲೆಯ ದುರ್ಗಾಪುರದ ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಸಂತ್ರಸ್ತೆ ಒಡಿಶಾದ ಜಲೇಶ್ವರ ಪ್ರದೇಶದವರು. 'ಊಟ ಮಾಡಲು ರಾತ್ರಿ 8ರಿಂದ 8.30ರ ಸುಮಾರಿಗೆ ಮಗಳು ತನ್ನ ಸ್ನೇಹಿತನ ಜೊತೆ ತೆರಳಿದ್ದಳು' ಎಂದು ಸಂತ್ರಸ್ತೆಯ ತಾಯಿ ಹೇಳಿದ್ದಾರೆ.

12

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಭೂಮಾಫಿಯಾದ ಮಾಯಾಜಾಲ

ಬಡವರು, ಹಿರಿಯ ನಾಗರಿಕರ ಭೂಮಿ ಕಬಳಿಕೆ: ಕಾಣದ ಕೈಗಳ 'ಕರಾಳ ಲೋಕ'ಕ್ಕೆ ಅಧಿಕಾರಿಗಳ ಸಹಾಯ ಹಸ್ತ

ಭೂ ಸುರಕ್ಷಾ ಪ್ರಗತಿ ವಿವರ

130 ಕೋಟಿ ರಾಜ್ಯದಲ್ಲಿರುವ ಕಂದಾಯ ಮೂಲ ದಾಖಲೆಗಳ ಪುಟಗಳ ಸಂಖ್ಯೆ

45.80 ಕೋಟಿ ಸ್ಕ್ಯಾನಿಂಗ್ ಮಾಡಿ, ಭೂ ಸುರಕ್ಷಾ ಪೋರ್ಟಲ್‌ಗೆ ಅಪ್‌ಲೋಡ್ ಆಗಿರುವ ಪುಟಗಳ ಸಂಖ್ಯೆ

• ಜಯಸಿಂಹ ಆರ್.

ಬೆಂಗಳೂರು: ಮೈಚಾಚುತ್ತಲೇ ಇರುವ ಮಹಾನಗರ, ಆಕಾಶವನ್ನೇ ಚುಂಬಿಸುವಂತೆ ಮೇಲೇಳುತ್ತಿರುವ ಕಟ್ಟಡಗಳು, ಚಿನ್ನವನ್ನೇ ಉದುರಿಸುವಂತಹ ಬಾಡಿಗೆ ತರುವ ವಾಣಿಜ್ಯ ಸಂಕೀರ್ಣ ನಿರ್ಮಾಣ... ಹೀಗೆಲ್ಲ ಕಾರಣಗಳಿಂದಾಗಿ ಭೂಮಿಯ ಬೆಲೆ ಹಳದಿ ಲೋಹವನ್ನು ಮೀರಿಸುವತ್ತ ಸಾಗುತ್ತಿದೆ. ಇದರ ಬೆನ್ನಲ್ಲೇ, ಮುಗ್ಧರು, ಅಸಹಾಯಕರು, ಹಿರಿಯ ನಾಗರಿಕರ ಹಾಗೂ ಸರ್ಕಾರಿ ಭೂಮಿಯನ್ನು ಕಬಳಿಸುವ ವ್ಯವಸ್ಥಿತ ಜಾಲವೂ ಬೆಳೆಯುತ್ತಿದೆ. ಭೂಗಳ್ಳತನ ತಡೆಗೆ ಸರ್ಕಾರ ನಾನಾ ಸುಧಾರಣೆಗಳನ್ನು ತಂದಿದ್ದರೂ ಪ್ರಭಾವಿ ರಾಜಕಾರಣಿಗಳು, ಅಧಿಕಾರಿಗಳು, ವಕೀಲರು, ಭೂಗತ ಜಗತ್ತಿನ ನಂಟುಳ್ಳವರ 'ಕಾರ್ಯಪಡೆ' ಭೂಗಳ್ಳತನದ ಬಲೆಯನ್ನು ಬೀಸುತ್ತಲೇ ಇದೆ.

ಕಾನೂನಿನ ಕುಣಿಕೆಗೆ ಸಿಲುಕದಂತೆ, ಅಕಸ್ಮಾತ್ ಸಿಲುಕಿದರೂ ನುಣುಚಿಕೊಂಡು ಪಾರಾಗುವಂತೆ ತಂತ್ರಗಾರಿಕೆಗಳನ್ನು ಹೊಸೆಯಬಲ್ಲ ಚಾತುರ್ಯ ಹೊಂದಿದ 'ಭೂಗಳ್ಳರ ಕೂಟ' ಪಾಲು ಬಿದ್ದ ಖಾಲಿ ಭೂಮಿ, ಅನಾಥ ಜಾಗ ಕಂಡರೆ ಭೂ ಬಕಾಸುರನಾಗಿ ಬೆಳೆಯತೊಡಗುತ್ತದೆ.

4

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಕೆರೆಕತ್ತಿಗನೂರು ಗ್ರಾಮದ, ನಾಗಯ್ಯ ಮತ್ತು ನಿಂಗಯ್ಯ ಕುಟುಂಬದವರ ಮಧ್ಯೆ ಭೂ ವ್ಯಾಜ್ಯಕ್ಕೆ ಗುರಿಯಾಗಿದ್ದ ಜಮೀನಿನ ಪಕ್ಷಿನೋಟ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

'ಭೂ ಸುರಕ್ಷೆ: ಜನರಿಗೆ ಶ್ರೀರಕ್ಷೆ'



'ಮೂಲ ದಾಖಲೆ ಪತ್ರಗಳನ್ನು ಸ್ಕ್ಯಾನ್ ಮಾಡಿ, ಅಪ್‌ಲೋಡ್ ಮಾಡುವ ಮೂಲಕ ಕಂದಾಯ ಇಲಾಖೆಯ ಎಲ್ಲ ವ್ಯವಹಾರಗಳೂ ಡಿಜಿಟಲ್ ರೂಪದಲ್ಲೇ ನಡೆಯಲಿವೆ. ತಿರುಚಿದ, ತಿದ್ದಿದ, ನಕಲಿ ದಾಖಲೆಗಳಿಗೆ ಕಡಿವಾಣ ಬೀಳಲಿದೆ. ಇವುಗಳ ಕಾರಣದಿಂದ ಭೂಮಿ ಕಳೆದುಕೊಂಡ ಜನರಿಗೆ ನೆರವಾಗಲು ಸರ್ಕಾರವು 'ಭೂ ಸುರಕ್ಷಾ' ಯೋಜನೆಯನ್ನು ರೂಪಿಸಿದೆ' ಎನ್ನುತ್ತಾರೆ ಕಂದಾಯ ಸಚಿವ ಕೃಷ್ಣ ಬೈರೇಗೌಡ.

'ಭೂ ದಾಖಲೆಗಳ ದೃಢೀಕೃತ ಪ್ರತಿಯನ್ನು ಪಡೆದುಕೊಳ್ಳಲು ಜನರು ಅರ್ಜಿ ಸಲ್ಲಿಸಿದರೆ, ಅದು ಸಿಕ್ಕೇ ಸಿಗುತ್ತದೆ ಎಂಬುದು ಖಚಿತವಿರಲಿಲ್ಲ. ಕೆಲ ಅಧಿಕಾರಿಗಳು ಯಾವುದೋ ನೆಪವೊಡ್ಡಿ, ದಾಖಲೆಗಳು ಸಿಗುತ್ತಿಲ್ಲ ಎಂದು ಹಿಂಬರಹ ನೀಡಿ ಸಾಗಹಾಕುತ್ತಿದ್ದರು' ಎಂದು ಅವರು ಹೇಳಿದ್ದಾರೆ.

4

ಒಳನೋಟ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

₹350 ಕೋಟಿ ಆಸ್ತಿಗೆ ಕನ್ನ: ಐಎಎಸ್ ಅಧಿಕಾರಿಯೇ ಭಾಗಿ

ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಜಮೀನನ್ನು ಕಬಳಿಸುವುದು ಒಂದು ರೀತಿಯ ವಂಚನೆ. ಸರ್ಕಾರಿ ಅಧಿಕಾರಿಯೇ ಭಾಗಿಯಾದ ತಾಜಾ ಉದಾಹರಣೆ ಇದು. ನಕಲಿ ದಾಖಲೆಗಳನ್ನು ಸೃಷ್ಟಿಸಿ ಅರ್ಜಿ ಸಲ್ಲಿಸಿದ್ದ ನಾಲ್ವರು ಖಾಸಗಿ ವ್ಯಕ್ತಿಗಳಿಗೆ, ಬೆಂಗಳೂರಿನ ಹಿಂದಿನ ವಿಶೇಷ ಜಿಲ್ಲಾಧಿಕಾರಿಯಾಗಿದ್ದ ಬಿ.ವಿ.ವಾಸಂತಿ ಅಮರ್ ಅವರು 14 ಎಕರೆ ಸರ್ಕಾರಿ ಜಮೀನನ್ನು ಪರಭಾರೆ ಮಾಡಿದ ಪ್ರಕರಣವಿದು.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಕೊಡಿಗೆಹಳ್ಳಿಯ ಹಳೆಯ ಸರ್ವೆ ನಂಬರ್ 86ರ ಈ ಜಮೀನು, ನೈಸ್ ರಸ್ತೆಗೆ ಹೊಂದಿಕೊಂಡಂತೆಯೇ ಇದೆ. ಸುಮಾರು ₹350 ಕೋಟಿ ಮಾರುಕಟ್ಟೆ ಮೌಲ್ಯದ ಈ ಜಮೀನಿಗೆ ಸಂಬಂಧಿಸಿದಂತೆ ಪುಟ್ಟಮ್ಮ, ಎಚ್.ಬಿ.ಶ್ರೀಧರ್, ಕೆ.ವಿ.ಚಂದ್ರನ್ ಮತ್ತು ಪುಟ್ಟಗೌರಮ್ಮ ಅವರು 2007ರಲ್ಲಿ ರಾಜ್ಯ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

'ಸರ್ವೆ ಸಂಖ್ಯೆ: 86ರ (ಹೊಸ ಸರ್ವೆ ಸಂಖ್ಯೆ 143, 144, 145 ಮತ್ತು 147) ಸುಮಾರು 14 ಎಕರೆ ಜಮೀನು ನಮಗೆ 1954ರಲ್ಲೇ ಸರ್ಕಾರದಿಂದ ಮಂಜೂರಾಗಿದೆ. ಅಂದಿನಿಂದ 1995ರವರೆಗೂ ಪಹಣಿಯಲ್ಲಿ ನಮ್ಮ ಹೆಸರು ಇದ್ದು, 1995ರ ನಂತರ ಪಹಣಿಯಿಂದ ನಮ್ಮ ಹೆಸರು ಕೈಬಿಡಲಾಗಿದೆ. ಕಂದಾಯ ದಾಖಲೆಗಳಿಗೆ ನಮ್ಮ ಹೆಸರು ಸೇರ್ಪಡೆ ಮಾಡಲು ತಹಶೀಲ್ದಾರರಿಗೆ ನಿರ್ದೇಶನ ನೀಡಿ' ಎಂದು ಹೈಕೋರ್ಟ್ ಅನ್ನು ಕೋರಿದ್ದರು.

ವಾಸಂತಿ ಅಮರ್

4

ಯಾವ ಸಂಪುಟ ವಿಸ್ತರಣೆಯೂ ಇಲ್ಲ, ಎಲ್ಲಾ ಗಾಳಿಸುದ್ದಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವ ಸಂಪುಟ ವಿಸ್ತರಣೆಯೂ ಇಲ್ಲ, ಎಂಥದೂ ಇಲ್ಲ. ಮಾಧ್ಯಮಗಳು ಗಾಳಿ ಸುದ್ದಿ ಪ್ರಕಟಿಸುತ್ತಿವೆ. ಏನೇ ಇದ್ದರೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಸಚಿವ ಸಂಪುಟ ವಿಸ್ತರಣೆ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ಮುಖ್ಯಮಂತ್ರಿ ಅಥವಾ ನಾನು ಪ್ರಸ್ತಾಪ ಮಾಡಬೇಕು. ನಾವಿಬ್ಬರೂ ಪ್ರಸ್ತಾಪ ಮಾಡಲಿಲ್ಲ ಎಂದಾದರೆ ಅದು ಗಾಳಿ ಸುದ್ದಿ. ಆತುರದಲ್ಲಿರುವವರು, ಮಾಧ್ಯಮಗಳ ಮುಂದೆ ಮಾತನಾಡುತ್ತಾರೆ' ಎಂದರು.

'ಮುಖ್ಯಮಂತ್ರಿ ಆಗುವ ಕಾಲ ಹತ್ತಿರ ಬಂದಿದೆ ಎಂದು ನಾನು ಹೇಳಿಲ್ಲ, ಕೆಲವು ಮಾಧ್ಯಮಗಳು ಸುದ್ದಿ ತಿರುಚಿ ವಿವಾದ ಸೃಷ್ಟಿಸುತ್ತಿವೆ. ಇದೇ ರೀತಿ ನನ್ನ ವಿಚಾರದಲ್ಲಿ ಸುಳ್ಳು ಸುದ್ದಿ ಹಾಕಿ, ದಾರಿ ತಪ್ಪಿಸುವ ಪ್ರಯತ್ನ ಮಾಡಿದರೆ ಮಾನನಷ್ಟ ಮೊಕದ್ದಮೆ ಹಾಕಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

'ನಾನು ಮುಖ್ಯಮಂತ್ರಿ ಹುದ್ದೆ ಅಲಂಕರಿಸಲು ಆತುರದಲ್ಲಿ ಇಲ್ಲ. ಜನರ ಸೇವೆ ಮಾಡಲು ಹಗಲು ರಾತ್ರಿ ತಿರುಗುತ್ತಿದ್ದೇನೆ' ಎಂದರು.

6

ಅನುದಾನಿತ ಶಾಲೆಗೆ 'ಅತಿಥಿ'ಗಳ ನೇಮಕಕ್ಕೆ ಸರ್ಕಾರದ ನಿರ್ಧಾರ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಕನ್ನಡ ಮಾಧ್ಯಮ ಶಿಕ್ಷಣದ ಅನುದಾನಿತ ಶಾಲೆಗಳಲ್ಲಿ ಖಾಲಿ ಹುದ್ದೆಗಳಿಗೆ ಸರ್ಕಾರದಿಂದಲೇ ಅತಿಥಿ ಶಿಕ್ಷಕರನ್ನು ನೇಮಕ ಮಾಡಲು ನಿರ್ಧರಿಸಲಾಗಿದೆ' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಇಲ್ಲಿ ಹೇಳಿದರು.

ಮಧು ಬಂಗಾರಪ್ಪ

ಪ್ರೆಸ್ ಟ್ರಸ್ಟ್ ಶನಿವಾರ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, 'ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಲು ಸರ್ಕಾರ ಈ ನಿರ್ಧಾರ ಕೈಗೊಂಡಿದೆ' ಎಂದರು.

'ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ 4,000ದಿಂದ 5,000 ಹುದ್ದೆಗಳಿಗೆ ಅತಿಥಿ ಶಿಕ್ಷಕರ ನೇಮಕಕ್ಕೆ ಆಯಾ ಶಿಕ್ಷಣ ಸಂಸ್ಥೆಗಳಿಗೆ ಅವಕಾಶ ಕಲ್ಪಿಸಲಿದ್ದು, ಸರ್ಕಾರವೇ ಗೌರವಧನ ಪಾವತಿಸಲಿದೆ. ಇದರ ಹೊರತಾಗಿ ಸರ್ಕಾರಿ ಶಾಲೆಗಳ 12,000 ಹಾಗೂ ಅನುದಾನಿತ ಶಾಲೆಗಳ 6,000 ಸೇರಿದಂತೆ 18,000 ಶಿಕ್ಷಕರ ನೇಮಕಕ್ಕೆ ಶೀಘ್ರ ಅಧಿಸೂಚನೆ ಹೊರಡಿಸಲಾಗುತ್ತಿದೆ' ಎಂದು ತಿಳಿಸಿದರು.

6

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆಯಿದೆ

ಲಾಲ್‌ಬಾಗ್ ಪ್ರಗತಿಗೆ ₹10 ಕೋಟಿ

‘ಬೆಂಗಳೂರು ನಡಿಗೆ’ ನಡೆಸಿ ಜನರ ಅಹವಾಲು ಸ್ವೀಕರಿಸಿದ ಉಪಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಾರ್ವಜನಿಕರು ಬಯಸಿದಂತೆ ಅಭಿವೃದ್ಧಿ
- ಲಾಲ್‌ಬಾಗ್ ಉಳಿಸಲು ಎಲ್ಲ ರೀತಿಯ ಕ್ರಮ
- ನಗರದಲ್ಲಿ ಲಾಲ್‌ಬಾಗ್ ಮಾದರಿಯಲ್ಲಿ ವೃಕ್ಷವನ

ಬೆಂಗಳೂರು: ‘ಸಾರ್ವಜನಿಕರು ಬಯಸಿದಂತೆ ಲಾಲ್‌ಬಾಗ್ ಅಭಿವೃದ್ಧಿಗೆ ಜಿಬಿಎ ವತಿಯಿಂದ ₹10 ಕೋಟಿ ಅನುದಾನ ನೀಡಲಾಗುವುದು. ಸುರಂಗ ರಸ್ತೆಗೆ ಲಾಲ್‌ಬಾಗ್ ಬಂಡೆಯ ಪಕ್ಕದಲ್ಲಿ ಪ್ರವೇಶ ನೀಡಲು ಅಧಿಕಾರಿಗಳು ಯೋಜನೆ ರೂಪಿಸಿದ್ದಾರೆ. ಆ ಜಾಗವನ್ನು ಪರಿಶೀಲಿಸಿ, ಅಗತ್ಯವಿದ್ದರೆ ಯೋಜನೆಯಲ್ಲಿ ಮಾರ್ಪಾಡು ಮಾಡಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶನಿವಾರ ಮುಂಜಾನೆ ಲಾಲ್‌ಬಾಗ್ ಉದ್ಯಾನದಲ್ಲಿ ‘ಬೆಂಗಳೂರು ನಡಿಗೆ’ ನಡೆಸಿ ಜನರ ಅಹವಾಲು, ಸಲಹೆಗಳನ್ನು ಸ್ವೀಕರಿಸಿ, ಸುರಂಗ ರಸ್ತೆಗೆ ಪ್ರವೇಶ ಸ್ಥಳವನ್ನು ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

‘ಲಾಲ್‌ಬಾಗ್ ಸಾರ್ವಜನಿಕರ ಆಸ್ತಿ. ಅದನ್ನು ಉಳಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳುತ್ತೇವೆ. ಆರು ಎಕರೆ ಭೂಮಿ ವಶಪಡಿಸಿಕೊಳ್ಳುವ ಅಗತ್ಯವಿಲ್ಲ. ಅರ್ಧ ಎಕರೆ ಪ್ರದೇಶದಲ್ಲಿ ಅಶೋಕ ಪಿಲ್ಲರ್ ಕಡೆ ಸುರಂಗ ರಸ್ತೆಗೆ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶ ಕಲ್ಪಿಸಲಾಗುವುದು. ಪಾರ್ಕಿಂಗ್‌ಗಾಗಿ ಇರುವ ಜಾಗದಲ್ಲಿ ಒಂದು ಎಕರೆ ಜಾಗವನ್ನು ಸ್ಟೋರೇಜ್‌ಗೆ ಬಳಸಿಕೊಳ್ಳುತ್ತೇವೆ. ನಂತರ ಅದನ್ನು ತೆರವುಗೊಳಿಸಿ ಲಾಲ್‌ಬಾಗ್‌ಗೆ ನೀಡಲಾಗುವುದು. ಸಣ್ಣ ಗಿಡಗಳನ್ನು ತೆರವುಗೊಳಿಸಿ, ಮತ್ತೆ ಗಿಡ ನೆಡುತ್ತೇವೆ. ಉಳಿದಂತೆ ಲಾಲ್‌ಬಾಗ್ ಉದ್ಯಾನಕ್ಕೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ’ ಎಂದು ತಿಳಿಸಿದರು.

‘ಬೆಂಗಳೂರಿನಲ್ಲಿ ಅವಕಾಶ ಇರುವೆಡೆ ಲಾಲ್‌ಬಾಗ್ ಮಾದರಿಯಲ್ಲಿ ವೃಕ್ಷವನ ಮಾಡಲು ಅರಣ್ಯ ಇಲಾಖೆ ಜೊತೆ ಚರ್ಚೆ ಮಾಡುತ್ತೇನೆ. ಅದಕ್ಕೆ ಆರ್ಥಿಕ ಬೆಂಬಲವನ್ನು ನೀಡಲಾಗುವುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಲಹೆ: ಸುರಂಗ ರಸ್ತೆ ಯೋಜನೆಯಿಂದ ಲಾಲ್‌ಬಾಗ್ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಒಸಿ, ಸಿಸಿ ಸಮಸ್ಯೆ, ಕಸದ ಸಮಸ್ಯೆ ನಿವಾರಿಸಬೇಕು. ಶಾಲಾ ಮುಂಭಾಗದ ರಸ್ತೆಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಬೇಕು ಎಂಬುದು ಸೇರಿದಂತೆ ಅನೇಕ ಸಲಹೆಗಳನ್ನು ಆರ್.ಸಿ. ಜಗನ್ನಾಥ್, ಕಾರ್ತಿಕ್ ಕುಮಾರ್ ಸಹಿತ ಅನೇಕರು ನೀಡಿದರು.

ಸಾರ್ವಜನಿಕರ ಸಲಹೆ, ಮನವಿ ಹಾಗೂ ಅವರ ಹೆಸರು ಮತ್ತು ಮೊಬೈಲ್ ಸಂಖ್ಯೆಯನ್ನು ಬೆಂಗಳೂರು ಕೇಂದ್ರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ದಾಖಲು ಮಾಡಿಕೊಂಡರು.

ನಗರದ ರಸ್ತೆಗಳಲ್ಲಿ ಮೆಟ್ರೊ ಅಥವಾ ಯಾವುದೇ ಕಾಮಗಾರಿ ನಡೆದರೂ ಆ ಭಾಗದ ರಸ್ತೆಯನ್ನು ಯೋಜನೆ ಆರಂಭದಿಂದ ಅಂತ್ಯದವರೆಗೆ ಗುತ್ತಿಗೆದಾರರೇ ನಿರ್ವಹಣೆ ಮಾಡುವಂತೆ ನೋಡಿಕೊಳ್ಳಬೇಕು. ರಸ್ತೆ ಗುಂಡಿ ಬಿದ್ದರೂ ಅವರೇ ಮುಚ್ಚಿ ನಿರ್ವಹಣೆ ಮಾಡಬೇಕು ಎಂದು ರಾಜಾರಾಂ ಸಲಹೆ ನೀಡಿದರು.

ಜಯನಗರ 7 ‘ಬಿ’ ರಸ್ತೆಯಲ್ಲಿ ಬೀದಿದೀಪ ಇಲ್ಲದಿರುವ ಬಗ್ಗೆ ಸ್ಥಳೀಯ ನಿವಾಸಿ ಗಮನ ಸೆಳೆದರು. ಸೇಂಟ್ ಫ್ರಾನ್ಸಿಸ್ ಶಾಲೆ ಬಳಿಯ ರಸ್ತೆಯಲ್ಲಿ ಸಾರ್ವಜನಿಕರು ಕಸ ಸುರಿಯುತ್ತಿರುವ ಬಗ್ಗೆ, ರಸ್ತೆ ಹದಗೆಟ್ಟಿರುವ ಬಗ್ಗೆ ಶಿಕ್ಷಕಿ ಮಾಹಿತಿ ನೀಡಿದರು. ಸಮಸ್ಯೆ ಪರಿಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಉಪಮುಖ್ಯಮಂತ್ರಿ ಭರವಸೆ ನೀಡಿದರು.

‘ನಾಗರಿಕರ ಸಲಹೆಗಳನ್ನು ಸ್ವೀಕರಿಸಲು, ಐದೂ ನಗರ ಪಾಲಿಕೆಗಳ ಉದ್ಯಾನಗಳಲ್ಲಿ ವಾರಾಂತ್ಯದಲ್ಲಿ ನಡಿಗೆ ಕಾರ್ಯಕ್ರಮವನ್ನು ನಡೆಸಲಿದ್ದೇನೆ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರು ನಡಿಗೆ ಕಾರ್ಯಕ್ರಮದ ಅಂಗವಾಗಿ ಡಿ. ಕೆ. ಶಿವಕುಮಾರ್ ಅವರು ಶನಿವಾರ ಬೆಳಗ್ಗೆ ಲಾಲ್ ಬಾಗ್ ಉದ್ಯಾನದಲ್ಲಿ ಜನಸಾಮಾನ್ಯರ ಜತೆ ಸಂವಾದ ನಡೆಸಿದರು

ನಾರಾಯಣಸ್ವಾಮಿ, ಜಯಲಕ್ಷ್ಮಿಗೆ ಪ್ರಶಸ್ತಿ

ನಾರಾಯಣ ಸ್ವಾಮಿ

ಜಯಲಕ್ಷ್ಮಿ ಪಾಟೀಲ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ ‘ಕನ್ನಡ ಕಟ್ಟಾಳು’ ಪ್ರಶಸ್ತಿಗೆ ಕನ್ನಡ ಕಾರ್ಯಕರ್ತ ಬಿ.ಎಂ. ನಾರಾಯಣಸ್ವಾಮಿ ಹಾಗೂ ‘ನಿಸ್ಸೀಮ ಕನ್ನಡತಿ’ ಪ್ರಶಸ್ತಿಗೆ ಲೇಖಕಿಯೂ ಆಗಿರುವ ಕಲಾವಿದೆ ಜಯಲಕ್ಷ್ಮಿ ಪಾಟೀಲ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ಸ್ಮರಣಿಕೆ ಹಾಗೂ ತಲಾ ₹ 11 ಸಾವಿರ ನಗದು ಒಳಗೊಂಡಿದೆ. ಇದೇ 31ರಂದು ಸಂಜೆ 4.30ಕ್ಕೆ ಎನ್.ಆರ್.ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಕಲಾಭವನದಲ್ಲಿ ಸಮಿತಿಯ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮವನ್ನು ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ರಾಮಣ್ಣ ಎಚ್. ಕೋಡಿಹೊಸಹಳ್ಳಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಬಿಜೆಪಿಯವರು ಅಭಿವೃದ್ಧಿ ವಿರೋಧಿಗಳು: ಸಿಎಂ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಸಭೆಗೆ ಗೈರಾಗಿರುವ ಬಿಜೆಪಿಗರು ಬೆಂಗಳೂರು ಅಭಿವೃದ್ಧಿಯ ವಿರೋಧಿಗಳು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ಸಭೆಗೆ ಹಾಜರಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದಾಗಿದ್ದರೂ ಅವರು ಹಾಜರಾಗಲಿಲ್ಲ. ತಾವು ಬೆಂಗಳೂರಿನ ಅಭಿವೃದ್ಧಿಯ ವಿರೋಧಿಗಳೆಂದು ನಿರೂಪಿಸಿದ್ದಾರೆ. ಬೆಂಗಳೂರಿನ ಬಗ್ಗೆ ಕಳಕಳಿಯಿದ್ದರೆ ಜಿಬಿಎ ಸಭೆಗೆ ಗೈರಾಗುತ್ತಿರಲಿಲ್ಲ’ ಎಂದರು.

‘ಬೆಂಗಳೂರು ಬೃಹತ್ ಆಗಿ ಬೆಳೆದಿದ್ದು, ಇಲ್ಲಿನ ಜನರಿಗೆ ಉತ್ತಮ ಆಡಳಿತ, ಸೌಲಭ್ಯಗಳನ್ನು ನೀಡಲು ನಗರವನ್ನು ವಿಭಜಿಸಲೇಬೇಕೆಂಬ ನಿಲುವನ್ನು ಪ್ರಥಮವಾಗಿ ಬಿಜೆಪಿಯವರೇ ಹೊಂದಿದ್ದರು. ಆದರೆ, ಈಗ ವಿರೋಧ ವ್ಯಕ್ತಪಡಿಸುತ್ತಿದ್ದಾರೆ’ ಎಂದು ಹೇಳಿದರು.

ಜಿಬಿಎ: 10.54 ಲಕ್ಷ ಮನೆಗಳ ಸಮೀಕ್ಷೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಶನಿವಾರದ ಅಂತ್ಯಕ್ಕೆ 10.54 ಲಕ್ಷ ಮನೆಗಳಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ-ಗತಿ ಸಮೀಕ್ಷೆ ಪೂರ್ಣಗೊಂಡಿದೆ.

ಕೇಂದ್ರ ನಗರ ಪಾಲಿಕೆಯಲ್ಲಿ 1,34,950, ಪೂರ್ವ ನಗರ ಪಾಲಿಕೆಯಲ್ಲಿ 1,53,107, ಉತ್ತರ ನಗರ ಪಾಲಿಕೆಯಲ್ಲಿ 2,59,148, ದಕ್ಷಿಣ ನಗರ ಪಾಲಿಕೆಯಲ್ಲಿ 1,83,110, ಪಶ್ಚಿಮ ನಗರ ಪಾಲಿಕೆಯಲ್ಲಿ 3,24,444 ಮನೆಗಳಲ್ಲಿ ಸಮೀಕ್ಷೆ ನಡೆಸಲಾಗಿದೆ.

‘ಹೊಸಕೆರೆಹಳ್ಳಿ ಮೇಲ್ಸೇತುವೆ ಪೂರ್ಣಗೊಳಿಸಿ’

ಬೆಂಗಳೂರು: ಹೊಸಕೆರೆಹಳ್ಳಿ ಜಂಕ್ಷನ್ ಮೇಲ್ಸೇತುವೆ ಬಾಕಿ ಕಾಮಗಾರಿಯನ್ನು 15 ದಿನಗಳಲ್ಲಿ ಪೂರ್ಣಗೊಳಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಹೊಸಕೆರೆಹಳ್ಳಿ ಜಂಕ್ಷನ್‌ನಲ್ಲಿನ 500 ಮೀಟರ್ ಉದ್ದದ ಮೇಲ್ಸೇತುವೆ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು, ಒಂದು ಭಾಗದಲ್ಲಿ ಡೌನ್ ರ್‍ಯಾಂಪ್‌ಗೆ ವೆಟ್ ಮಿಕ್ಸ್ ಹಾಕಿದ್ದು, ಡಾಂಬರೀಕರಣ ಮಾಡುವ ಕೆಲಸ ಬಾಕಿಯಿದೆ. ಮತ್ತೊಂದು ಬದಿ ವೆಟ್ ಮಿಕ್ಸ್ ಹಾಕಿ ಡಾಂಬರೀಕರಣ ಮಾಡಬೇಕಿದೆ. ಮಳೆಯಿಂದ ವಿಳಂಬವಾಗಿದ್ದು, ಕೂಡಲೇ ಪೂರ್ಣಗೊಳಿಸಬೇಕು ಎಂದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, ‘ಮೇಲ್ಸೇತುವೆಯ ಎರಡೂ ಬದಿಯ ಸರ್ವೀಸ್ ರಸ್ತೆಯಲ್ಲಿ ಹಾಳಾದ ಭಾಗಗಳನ್ನು ಕೂಡಲೇ ದುರಸ್ತಿಪಡಿಸಿ’ ಎಂದರು.

ರೈಲ್ವೆ ನೇಮಕಾತಿ ಕೋಶ
ಈಶಾನ್ಯ ರೈಲ್ವೆ, ಗೋರಖ್‌ಪುರ

2025–26ನೇ ಸಾಲಿನ ಕ್ರೀಡಾ ಕೋಟಾ ಅಡಿಯಲ್ಲಿ ನೇಮಕಾತಿ

ಎಂಪ್ಲಾಯ್‌ಮೆಂಟ್ ನೋಟಿಸ್ ನಂ. ಎನ್‌ಇಆರ್/ಆರ್‌ಆರ್‌ಸಿ/ಎಸ್‌ಕ್ಯೂ/2025–26 ದಿನಾಂಕ: 09.10.2025

ಆನ್‌ಲೈನ್ ಅರ್ಜಿ ಆರಂಭಿಕ ದಿನಾಂಕ ಮತ್ತು ಸಮಯ	11.10.2025 10:00 ಗಂಟೆ
ಆನ್‌ಲೈನ್ ಅರ್ಜಿ ಮುಕ್ತಾಯ ದಿನಾಂಕ ಮತ್ತು ಸಮಯ	10.11.2025 18:00 ಗಂಟೆ

ಈಶಾನ್ಯ ರೈಲ್ವೆಯಲ್ಲಿ ಲಭ್ಯವಿರುವ ಸನ್ 2025–26ನೇ ಸಾಲಿನ ಕ್ರೀಡಾ ಕೋಟಾ ಅಡಿಯಲ್ಲಿನ (ಬಹಿರಂಗ ಜಾಹೀರಾತು) 21 ಲೆವೆಲ್–2/3/4/5 (ಗ್ರೂಪ್ ಸಿ) ಹುದ್ದೆಗಳಿಗಾಗಿ ಮತ್ತು 28 ಲೆವೆಲ್–1 (ಹಿಂದಿನ ಗ್ರೂಪ್ ಡಿ) ಹುದ್ದೆಗಳಿಗಾಗಿ, ವಿವಿಧ ಕ್ರೀಡಾ ವಿಭಾಗಗಳ ಅಡಿಯಲ್ಲಿ, ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಈಶಾನ್ಯ ರೈಲ್ವೆಯ www.ner.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಚೇರ್ಮನ್,
ರೈಲ್ವೆ ನೇಮಕಾತಿ ಕೋಶ, ಗೋರಖ್‌ಪುರ

CPRO/RRC-03

ಛಾವಣಿ ಮತ್ತು ಮೆಟ್ಟಿಲುಗಳ ಮೇಲೆ ಪ್ರಯಾಣಿಸದಿರಿ

ವೈ.ಎಸ್.ವಿ. ದತ್ತಗೆ ಜೆ.ಪಿ. ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಶಾಸಕ ವೈ.ಎಸ್.ವಿ. ದತ್ತ ಅವರು ಕೇವಲ ಗಣಿತ ಮೇಷ್ಟ್ರು ಅಲ್ಲ, ರಾಜಕೀಯದ ಮೇಷ್ಟ್ರು ಸಹ ಹೌದು. ರಾಜಕಾರಣದಲ್ಲಿ ಶುದ್ಧ, ಸರಳ ಹಾಗೂ ನಿಷ್ಠುರವಾಗಿ ಇರಬೇಕು ಎನ್ನುವುದಕ್ಕೆ ದತ್ತ ಒಂದು ರೂಪಕ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಭಾರತ ಯಾತ್ರಾ ಕೇಂದ್ರ ಹಾಗೂ ಲೋಕನಾಯಕ ಜೆ.ಪಿ. ವಿಚಾರ ವೇದಿಕೆ ಶನಿವಾರ ಆಯೋಜಿಸಿದ್ದ ‘ಜಯಪ್ರಕಾಶ್ ನಾರಾಯಣ್–124’ ಕಾರ್ಯಕ್ರಮದಲ್ಲಿ ವೈ.ಎಸ್.ವಿ.ದತ್ತ ಅವರಿಗೆ ಜೆ.ಪಿ.ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬರಗೂರು ರಾಮಚಂದ್ರಪ್ಪ, ‘ಮೇಷ್ಟ್ರು ಮೇಲೆ ಇರುವ ಪ್ರೀತಿ ಪ್ರಾಧ್ಯಾಪಕರ ಮೇಲೆ ಇರುವುದಿಲ್ಲ. ನಿಜವಾದ ಮೇಷ್ಟ್ರುಗಳು ಸಮಾಜ, ಮನಸ್ಸು ಹಾಗೂ ಕನಸು ಕಟ್ಟುವ ಕೆಲಸ ಮಾಡುತ್ತಾರೆ. ಸಮಾಜಕ್ಕೆ ಉಪಯೋಗ ಆಗುವುದನ್ನು ಹೇಳುತ್ತಾರೆ. ಹಾಗಾಗಿ ದತ್ತ ಅವರು ಎಲ್ಲಿಯೇ ಹೋದರು ನಮಗೆ ಮೇಷ್ಟ್ರೇ. ಕೇವಲ ಪ್ರಶಸ್ತಿ ಬಂದಿದೆ ಎಂಬ ಕಾರಣಕ್ಕೆ ಈ ಮಾತು ಹೇಳುತ್ತಿಲ್ಲ. ಅವರನ್ನು ಹತ್ತಿರದಿಂದ ನೋಡಿದ್ದೇನೆ. ರಾಜಾಜಿ ನಗರದಲ್ಲಿರುವ ರಾಮಮಂದಿರಕ್ಕೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಸ್ಪರ್ಶ ನೀಡಿದರು’ ಎಂದು ನುಡಿದರು.

‘ದತ್ತ ಅಧ್ಯಯನಶೀಲರು, ಅದೇ ಕಾರಣಕ್ಕೆ ಪತ್ರಿಕೆಗಳಲ್ಲಿ ಲೇಖನ ಬರೆಯುತ್ತಿದ್ದಾರೆ. ಸರಳ ಮತ್ತು ಸಜ್ಜನಿಕೆಗೆ ಹೆಸರುವಾಸಿ’ ಎಂದು ತಿಳಿಸಿದರು.

ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, ಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಮ್, ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ವೈ.ಎಸ್.ವಿ.ದತ್ತ, ವಿಧಾನ ಪರಿಷತ್ ಮಾಜಿ ಸದಸ್ಯ ಮೋಹನ್ ಕೊಂಡಜ್ಜಿ ಮಾತನಾಡಿದರು. ಭಾರತ ಯಾತ್ರಾ ಕೇಂದ್ರದ ಪ್ರದಾನ ಕಾರ್ಯದರ್ಶಿ ಕೆ.ವಿ. ನಾಗರಾಜಮೂರ್ತಿ, ಲೋಕನಾಯಕ ಜೆ.ಪಿ.ವಿಚಾರ ವೇದಿಕೆ ಅಧ್ಯಕ್ಷ ಆರ್.ದಯಾನಂದ್ ಕೋಲಾರ, ಸಂಯೋಜಕರಾದ ಕೆ.ಎಸ್.ನಾಗರಾಜ್, ಪಿ.ವಿಜಯ್ ಕುಮಾರ್ ಆಲಿಬಾಬ ಹಾಜರಿದ್ದರು.

ವೈ.ಎಸ್.ವಿ.ದತ್ತ ಅವರಿಗೆ ಜಯಪ್ರಕಾಶ್ ನಾರಾಯಣ್ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಟಿ.ಎನ್. ಸೀತಾರಾಮ್, ಬರಗೂರು ರಾಮಚಂದ್ರಪ್ಪ, ಬಿ.ಎಲ್. ಶಂಕರ್, ಮೋಹನ್ ಕೊಂಡಜ್ಜಿ, ಆರ್. ದಯಾನಂದ ಕೋಲಾರ ಮತ್ತು ಬಿ.ಆರ್. ಪಾಟೀಲ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ಬದಲಾವಣೆ ಬಯಸಿದ ಹಂಪನಾ’

ವೀರಲೋಕ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಿ.ಎಂ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೀವನದುದ್ದಕ್ಕೂ ಸಾಹಿತ್ಯ ಸೃಷ್ಟಿಸಿದ ಹಂಪ ನಾಗರಾಜಯ್ಯ ಅವರು, ಸಮಾಜದಲ್ಲಿ ಬದಲಾವಣೆ ಬಯಸಿದ ಸಾಹಿತಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ವೀರಲೋಕ ಸಂಸ್ಥೆ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹಂಪನಾ @90 ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಹಂಪನಾ ಅವರು ಸಮಾಜಮುಖಿ ಆಗುವ ಮೂಲಕ ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಅವರು ಕನ್ನಡಿಗರ ಹೆಮ್ಮೆಯಾಗಿದ್ದು, ಅವರ ಬದುಕು, ಬರಹ ಹಾಗೂ ಸಾರ್ಥಕತೆ ಇಡೀ ಸಮಾಜಕ್ಕೆ ಮಾರ್ಗದರ್ಶನ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಕನ್ನಡ ಕಟ್ಟುವ ಕೆಲಸ ಮಾಡಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಭಾಷಾ ಶಾಸ್ತ್ರ, ಸಂಶೋಧನೆ, ಮಕ್ಕಳ ಸಾಹಿತ್ಯ, ವಿಮರ್ಶೆ ಸೇರಿ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಬೆರಗು ಮೂಡಿಸುವ ಕೆಲಸ ಮಾಡಿದ್ದಾರೆ. ಗ್ರಾಮೀಣ ಭಾಗದಿಂದ ಬಂದ ಅವರು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಸಾಧನೆ ಸಾಮಾನ್ಯದ್ದಲ್ಲ. ನಾನು ಸಾಹಿತ್ಯ ವಿದ್ಯಾರ್ಥಿಯಲ್ಲವಾದರೂ ಸಾಹಿತ್ಯ ವಲಯದ ಒಡನಾಟ ಹೊಂದಿದ್ದೇನೆ. ಅವರ ಅಪಾರ ಅಭಿಮಾನಿಗಳಲ್ಲಿ ನಾನು ಕೂಡ ಒಬ್ಬನಾಗಿದ್ದೇನೆ’ ಎಂದು ಹೇಳಿದರು.

ವೀರಲೋಕ ಸಂಸ್ಥೆಯ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ, ‘ಕನ್ನಡ ಪುಸ್ತಕಗಳಿಗೆ ಅಪಾರ ಓದುಗರಿದ್ದಾರೆ. ಆದರೆ, ಪುಸ್ತಕಗಳನ್ನು ತಲುಪಿಸುವ ಕೆಲಸ ವಾಗುತ್ತಿಲ್ಲ. ಆದ್ದರಿಂದ ಕನ್ನಡಿಗರು ಇರುವ ಕಡೆ ಪುಸ್ತಕ ತಲುಪಿಸುವ ಕೆಲಸ ಮಾಡುತ್ತಿದ್ದೇವೆ. ಜಯನಗರದಲ್ಲಿ ನಡೆದ ಎರಡನೇ ಪುಸ್ತಕ ಸಂತೆಗೆ 2 ಲಕ್ಷ ಜನ ಭೇಟಿ ನೀಡಿದ್ದರು. ಮೂರು ಕೋಟಿ ರೂಪಾಯಿ ವಹಿವಾಟು ನಡೆದಿತ್ತು. ನ.14ರಿಂದ ಮೂರನೇ ಪುಸ್ತಕ ಸಂತೆ ನಡೆಯಲಿದೆ’ ಎಂದರು.

ಸಾಹಿತ್ಯ ಕ್ಷೇತ್ರದ ಪ್ರಮುಖರಾದ ಜಿ.ಎನ್. ಮೋಹನ್, ಪ್ರತಿಭಾ ನಂದಕುಮಾರ್, ಅಗ್ರಹಾರ ಕೃಷ್ಣಮೂರ್ತಿ, ಎಂ.ಎಸ್. ಆಶಾದೇವಿ ಹಾಗೂ ಆರತಿ ಎಚ್.ಎನ್. ಅವರು ಹಂಪ ನಾಗರಾಜಯ್ಯ ಅವರ ಸಾಹಿತ್ಯದ ಬಗ್ಗೆ ಅವಲೋಕನ ಮಾಡಿದರು. ಇದಕ್ಕೂ ಮೊದಲು ಜರ್ಮನ್ ಕನ್ನಡ ತಂಡದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು.

ಸಿದ್ದರಾಮಯ್ಯ ಅವರು ಹಂಪ ನಾಗರಾಜಯ್ಯ ಅವರಿಗೆ ಚಿನ್ನದ ಕಡಗ ಹಾಕಿ ಶುಭಹಾರೈಸಿದರು. ಹಂಪ ನಾಗರಾಜಯ್ಯ ಅವರ ಪುತ್ರ ಹರ್ಷ ಮತ್ತು ಪುತ್ರಿ ಎಚ್.ಎನ್. ಆರತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

5 ಸಾವಿರ ಸಂಚಿಕೆ ಕಾರ್ಯಕ್ರಮಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಜ್ಞಾನ ಮತ್ತು ಜ್ಞಾಪಕ ಶಕ್ತಿಯ ಸಮ್ಮಿಲನವಾಗಿರುವ ರಸಪ್ರಶ್ನೆ ಸ್ಪರ್ಧೆಯು ಮನುಷ್ಯನ ಬುದ್ಧಿ ಮತ್ತು ಭಾವಕ್ಕೆ ಕಸರತ್ತು ನೀಡುತ್ತದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆಯಲ್ಲಿ ಶನಿವಾರ ಚಂದನವಾಹಿಯಲ್ಲಿ ಪ್ರಸಾರವಾಗುವ ‘ಥಟ್ ಅಂತ ಹೇಳಿ’ ರಸಪ್ರಶ್ನೆ ಕಾರ್ಯಕ್ರಮದ 5000 ಸಂಚಿಕೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮಾಹಿತಿ ಮತ್ತು ಮನೋರಂಜನೆ ನೀಡುತ್ತಿರುವ ಈ ಕಾರ್ಯಕ್ರಮ ಜ್ಞಾನ ಮತ್ತು ಜ್ಞಾಪಕ ಶಕ್ತಿಯ ಸಮ್ಮಿಲನದ ರಸಪ್ರಶ್ನೆಯಾಗಿದೆ. 23 ವರ್ಷಗಳಿಂದ ವೀಕ್ಷಕರ ಜ್ಞಾನದಾಹ ತಣಿಸುತ್ತಿದ್ದು, ಅದರ ನಿರೂಪಕ ಡಾ. ನಾ.ಸೋಮೇಶ್ವರ್ ಅಭಿನಂದನಾರ್ಹರು ಎಂದು ಪ್ರಶಂಸಿಸಿದರು.

ಕಲ್ಬುರ್ಗಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶಶಿಕಾಂತ್ ಉಡಿಕೇರಿ, ವಿದುಷಿ ರೇವತಿ ಕಾಮತ್, ದೂರದರ್ಶನ ಕೇಂದ್ರ ದಕ್ಷಿಣ ವಲಯದ ಉಪ ಮಹಾನಿರ್ದೇಶಕರಾದ ಭಾಗ್ಯವಾನ್, ಕಾರ್ಯಕ್ರಮದ ನಿರ್ವಾಹಕರಾದ ಎಚ್.ಎನ್.ಆರತಿ, ನಿರ್ಮಾಪಕರಾದ ಚಂದ್ರಕಲಾ ಉಪಸ್ಥಿತರಿದ್ದರು.

ಅಪಾರ ಜನ ಸಮೂಹದ ನಡುವೆ 5 ಸಾವಿರದ ಸಂಚಿಕೆಯನ್ನು ಚಿತ್ರೀಕರಿಸಲಾಯಿತು. ಅ.13ರಂದು ಸೋಮವಾರ ಈ ಮೈಲಿಗಲ್ಲಿನ ಕಾರ್ಯಕ್ರಮ ಪ್ರಸಾರವಾಗಲಿದೆ.

ಚಂದನವಾಹಿನಿಯಲ್ಲಿ ಪ್ರಸಾರವಾಗುವ ‘ಥಟ್ ಅಂತ ಹೇಳಿ’ ರಸಪ್ರಶ್ನೆ ಕಾರ್ಯಕ್ರಮದ 5 ಸಾವಿರ ಸಂಚಿಕೆಗೆ ಸಚಿವ ಈಶ್ವರ್ ಖಂಡ್ರೆ ಅವರು ಶನಿವಾರ ಚಾಲನೆ ನೀಡಿದರು. ಪ್ರೊ.ಹಂಪ ನಾಗರಾಜಯ್ಯ, ವೂಡೇ.ಪಿ.ಕೃಷ್ಣ, ಡಾ.ಎಸ್.ವಿ.ಸುರೇಶ, ಡಾ.ನಾ.ಸೋಮೇಶ್ವರ್ ಉಪಸ್ಥಿತರಿದ್ದರು

ಕಲಾಪ್ರೇಮಿಗಳ ಸೆಳೆದ ‘ಇಂಡಿಯನ್ ಆರ್ಟಿಸನ್ಸ್ ಹಾಟ್’ ವಸ್ತುಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ಎಂ.ಜಿ.ರಸ್ತೆಯ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ‘ದಿ ಇಂಡಿಯನ್ ಆರ್ಟಿಸನ್ಸ್ ಹಾಟ್’ ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ವಿಶೇಷ ಆಕರ್ಷಣೆ ಉಂಟು ಮಾಡಿದೆ. ಅ.19ರವರೆಗೆ ಈ ಪ್ರದರ್ಶನ ಮುಂದುವರಿಯಲಿದೆ.

ದೀಪಾವಳಿ ಪ್ರಯುಕ್ತ ಈ ಪ್ರದರ್ಶನವನ್ನು ಆಯೋಜಿಸಲಾಗಿದೆ. ಕೈಮಗ್ಗ, ಹಸ್ತಶಿಲ್ಪ ಮತ್ತು ಪರಂಪರಾತ್ಮಕ ಕಲೆಗಳನ್ನು ಈ ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾಗಿದೆ. ದೇಶದ ವಿವಿಧ ಭಾಗಗಳ ಕಲಾವಿದರು ಈ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ. ತಾವು ತಯಾರಿಸಿದ ಕಲಾತ್ಮಕ ಉತ್ಪನ್ನಗಳನ್ನು ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ, ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ. ದೇಶೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವುದು ಹಾಗೂ ಹೊಸ ಪೀಳಿಗೆಗೆ ಸಾಂಪ್ರದಾಯಿಕ ಕಲಾ ಪ್ರಕಾರಗಳನ್ನು ಪರಿಚಯಿಸುವುದು ಈ ಪ್ರದರ್ಶನದ ಉದ್ದೇಶವಾಗಿದೆ.

ಚನ್ನಪಟ್ಟಣದ ಆಟಿಕೆಗಳು, ಉತ್ತರ ಪ್ರದೇಶದ ಖುರ್ಜಾದ ಮಣ್ಣಿನ ಪಾತ್ರೆ ಹಾಗೂ ಅಲಂಕಾರಿಕ ವಸ್ತುಗಳು, ಒಡಿಶಾದ ಡೋಕ್ರಾ ಕಲೆ ಹಾಗೂ ಮರದ ಆಟಿಕೆಗಳು, ವರ್ಣಚಿತ್ರಗಳು, ಆಭರಣಗಳು, ಮನೆ ಅಲಂಕಾರಿಕ ವಸ್ತುಗಳು ಸೇರಿ ಹಲವು ವೈವಿಧ್ಯ ಸಾಂಪ್ರದಾಯಿಕ ಉತ್ಪನ್ನಗಳು ಒಂದೇ ಸೂರಿನಡಿ ಲಭ್ಯವಿವೆ.

ತಮಿಳುನಾಡು, ಮಹಾರಾಷ್ಟ್ರ, ಮಣಿಪುರ, ರಾಜಸ್ಥಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಸೇರಿ ದೇಶದ ವಿವಿಧ ರಾಜ್ಯಗಳಿಂದ ಕಲಾವಿದರು ತಾವು ತಯಾರಿಸಿದ ಉತ್ಪನ್ನಗಳನ್ನು ತಂದಿದ್ದಾರೆ. ವಿವಿಧ ಬಗೆಯ ಸೀರೆಗಳು, ಪಿಠೋಪಕರಣ, ಬ್ಯಾಗ್‌ಗಳು, ಖಾದಿ ಬಟ್ಟೆಗಳೂ ದೊರೆಯುತ್ತಿವೆ ಎಂದು ಆಯೋಜಕರು ತಿಳಿಸಿದ್ದಾರೆ.

ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿರುವ ‘ಇಂಡಿಯನ್ ಆರ್ಟಿಸನ್ಸ್ ಹಾಟ್’ ಪ್ರದರ್ಶನದಲ್ಲಿ ಕಲಾಕೃತಿಗಳನ್ನು ವೀಕ್ಷಿಸುತ್ತಿರುವ ಯುವತಿ ಪ್ರಜಾವಾಣಿ ಚಿತ್ರ

ಪ್ರಜಾವಾಣಿ | DH
Presents
ದಿ ಇಂಡಿಯನ್ ಆರ್ಟಿಸನ್ಸ್ ಹಾಟ್
THE INDIAN ARTISANS HAAT

ಬಿಎಂಟಿಸಿ ಡಿಕ್ಕಿ: ವಿದ್ಯಾರ್ಥಿನಿ ಸಾವು

ಬಸ್ ಚಾಲಕನ ನಿರ್ಲಕ್ಷ್ಯದಿಂದ ಅವಘಡ ಸ್ಥಳೀಯರ ಆರೋಪ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಟ್ಯೂಷನ್ ಮುಗಿಸಿಕೊಂಡು ತನ್ನ ಸಹೋದರಿ ಮತ್ತು ಸ್ನೇಹಿತೆಯರ ಜತೆಗೆ ಮನೆಗೆ ತೆರಳುತ್ತಿದ್ದ ವಿದ್ಯಾರ್ಥಿನಿಗೆ ಬಿಎಂಟಿಸಿ ಬಸ್ ಡಿಕ್ಕಿಯಾಗಿ ವಿದ್ಯಾರ್ಥಿನಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

ಭುವನಾ (9) ಮೃತ ವಿದ್ಯಾರ್ಥಿ. ಬಿಎಂಟಿಸಿ ಬಸ್ ಚಾಲಕನ ನಿರ್ಲಕ್ಷ್ಯದಿಂದ ಘಟನೆ ನಡೆದಿದೆ ಎಂದು ಸ್ಥಳೀಯರು ದೂರಿದ್ದಾರೆ. ರಾಜಾಜಿನಗರ 1ನೇ ಹಂತದಲ್ಲಿ ಶನಿವಾರ ಬೆಳಿಗ್ಗೆ 11.30ರ ಸುಮಾರಿಗೆ ಘಟನೆ ನಡೆದಿದೆ.

ಮಹಾಲಕ್ಷ್ಮಿ ಲೇಔಟ್‌ನ ಭೋವಿಪಾಳ್ಯದಲ್ಲಿ ಪೋಷಕರೊಂದಿಗೆ ಭುವನಾ ವಾಸವಿದ್ದಳು. ಪಾಂಚಜನ್ಯ ವಿದ್ಯಾಪೀಠ ಶಾಲೆಯಲ್ಲಿ ಓದುತ್ತಿದ್ದಳು.

ಕುಟುಂಬಸ್ಥರ ಆಕ್ರಂದನ: ಕಣ್ಣ ಮುಂದೆಯೇ ಭುವನಾ ಮೃತಪಟ್ಟಿದ್ದನ್ನು ಕಂಡು ಸಹೋದರಿ ಹಾಗೂ ಸ್ನೇಹಿತರು ಕಣ್ಣೀರು ಹಾಕಿದರು. ಅಪಘಾತದ ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಪೋಷಕರು ಆಕ್ರಂದನ ಮುಗಿಲುಮುಟ್ಟಿತ್ತು.

ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಸ್ಥಳದಲ್ಲೇ ಬಸ್ ಬಿಟ್ಟು ಚಾಲಕ ಪರಾರಿ ಆಗಿದ್ದಾನೆ ಎಂದು ಮೂಲಗಳು ತಿಳಿಸಿವೆ.

ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

9 ವಾಹನಗಳಿಗೆ ಡಿಕ್ಕಿ: ಬಿಎಂಟಿಸಿ ಬಸ್‌ನಿಂದ ಸರಣಿ ಅಪಘಾತ ಸಂಭವಿಸಿದ ಘಟನೆ ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ 9ನೇ ಗೇಟ್ ಬಳಿ ಶನಿವಾರ ನಡೆದಿದೆ. ಅಪಘಾತದಿಂದ ಆಟೊ ಚಾಲಕರೊಬ್ಬರು ಗಾಯಗೊಂಡಿದ್ದಾರೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಬನಶಂಕರಿ ನಡುವಿನ ಸಂಚರಿಸುವ ಬಸ್ ವೇಗವಾಗಿ ಬಂದು 9 ವಾಹನಗಳಿಗೆ ಡಿಕ್ಕಿ ಹೊಡೆದಿದೆ.

ಬಸ್ ಚಾಲಕನಿಗೆ ದಿಢೀರನೇ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಅವಘಡ ಸಂಭವಿಸಿದೆ. ಬಸ್ ಜಪ್ತಿ ಮಾಡಲಾಗಿದೆ. ಚಾಲಕನನ್ನು ವಿಚಾರಣೆ ನಡೆಸಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಕಬ್ಬನ್‌ಪಾರ್ಕ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಸರಣಿ ಅಪಘಾತದಿಂದ ನಜ್ಜುಗುಜ್ಜಾದ ಆಟೊ

ಕಾರು ಡಿಕ್ಕಿ: ಮಹಿಳೆ ಸಾವು

ಕಾರು ಡಿಕ್ಕಿ ಹೊಡೆದ ಪರಿಣಾಮ ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ಅಶೋಕನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಕಾಡುಗೋಡಿ ನಿವಾಸಿ ಭಾಗ್ಯವತಿ(50) ಮೃತ ಮಹಿಳೆ.

ರಿಚ್ಮಂಡ್ ವೃತ್ತದ ಬಳಿಯ ಲಾಂಗ್‌ಫೋರ್ಡ್ ಗಾರ್ಡನ್ ರಸ್ತೆಯಲ್ಲಿ ಶುಕ್ರವಾರ ಸಂಜೆ ದುರ್ಘಟನೆ ನಡೆದಿದೆ. ಕಾರು ಚಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ನಗರದ ನಂಜಪ್ಪ ವೃತ್ತದ ಬಳಿ ಇರುವ ಸಹೋದರಿ ನೋಡಲು ರಿಚ್ಮಂಡ್ ಸರ್ಕಲ್ ಬಳಿ ಬಂದು ಬಸ್ ನಿಲ್ದಾಣಕ್ಕೆ ನಡೆದುಕೊಂಡು ಹೋಗುತ್ತಿದ್ದರು. ಆಗ ವೇಗವಾಗಿ ಬಂದ ಕಾರೊಂದು ಭಾಗ್ಯವತಿ ಅವರಿಗೆ ಡಿಕ್ಕಿ ಹೊಡೆದು, ಕಾರಿನ ಚಕ್ರಗಳು ಮಹಿಳೆ ಮೇಲೆ ಹರಿದಿದೆ. ಪರಿಣಾಮ ತೀವ್ರ ರಕ್ತಸ್ರಾವ ಉಂಟಾಗಿ ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು. ಅಶೋಕನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಟ್ಟಡದಿಂದ ಬಿದ್ದು ಇಬ್ಬರ ಸಾವು

ಬೆಂಗಳೂರು: ನಿರ್ಮಾಣ ಹಂತದ ಅಪಾರ್ಟ್‌ಮೆಂಟ್‌ವೊಂದರ 13ನೇ ಮಹಡಿಯಿಂದ ಬಿದ್ದು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ.

ಪಶ್ಚಿಮ ಬಂಗಾಳದ ಸೋನ್‌ಪುರ್ ಮೂಲದ ಅಮೀರ್ ಹುಸೇನ್ (33) ಹಾಗೂ ಮುಮ್ತಾಜ್ ಅಲಿ (28) ಮೃತರು. ಶುಕ್ರವಾರ ಬೆಳ್ಳಂದೂರು ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಖಾಸಗಿ ಕಂಪನಿಯೊಂದರ ಅಪಾರ್ಟ್‌ಮೆಂಟ್ ನಿರ್ಮಾಣ ಕೆಲಸವನ್ನು ಇಂಪೀರಿಯಲ್ ಬಿಲ್ಡ್ ಟೆಕ್ ಪ್ರೈವೇಟ್ ಲಿಮಿಟೆಡ್‌ಗೆ ಗುತ್ತಿಗೆಗೆ ವಹಿಸಲಾಗಿತ್ತು. ಶುಕ್ರವಾರ ಮಧ್ಯಾಹ್ನ ಕಟ್ಟಡದ 13ನೇ ಮಹಡಿಯ ಬಾಲ್ಕನಿಯಲ್ಲಿ ನಿಂತು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈ ವೇಳೆ ಏಕಾಏಕಿ ಬಾಲ್ಕನಿ ಕುಸಿದ ಪರಿಣಾಮ ಇಬ್ಬರೂ ಕೆಳಕ್ಕೆ ಬಿದ್ದು ಮೃತಪಟ್ಟಿದ್ದಾರೆ.

ಗುತ್ತಿಗೆದಾರರು ಹಾಗೂ ಸೈಟ್ ಎಂಜಿನಿಯರ್ ವಿರುದ್ಧ ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರು ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ದೋಷಾರೋಪ ಪಟ್ಟಿ ಸಲ್ಲಿಕೆ

ರಮ್ಯಾಗೆ ಬೆದರಿಕೆ ಪ್ರಕರಣ: 11 ಮಂದಿ ವಿರುದ್ಧ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಸಂದೇಶ ಕಳುಹಿಸಿದ್ದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಸಿಸಿಬಿ ಪೊಲೀಸರು, 11 ಮಂದಿ ವಿರುದ್ಧ ನಗರದ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ರಮ್ಯಾ

ಪ್ರಕರಣ ದಾಖಲಾದ ಬಳಿಕ ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಕಾರ್ಯಾಚರಣೆ ನಡೆಸಿ ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ, ನಟ ದರ್ಶನ್ ಅಭಿಮಾನಿಗಳನ್ನು ಬಂಧಿಸಲಾಗಿತ್ತು.

ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ 180 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಸಿಸಿಬಿ ಮೂಲಗಳ ತಿಳಿಸಿವೆ.

'ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸಲಾಗಿತ್ತು. ಆರೋಪಿಗಳ ಮೊಬೈಲ್ ಜಪ್ತಿ ಮಾಡಿಕೊಂಡು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿತ್ತು. ಆ ವರದಿ ಬಂದಮೇಲೆ ಅದನ್ನೂ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ಸಿಸಿಬಿ ಮೂಲಗಳ ತಿಳಿಸಿವೆ.

'ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಇನ್ನೂ ಕೆಲವರ ಪತ್ತೆ ಕಾರ್ಯ ನಡೆಯುತ್ತಿದೆ. ಅವರ ಬಂಧನದ ಬಳಿಕ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶಗಳನ್ನು ಹಾಕಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ರಮ್ಯಾ ಅವರು ಜುಲೈ 28ರಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರಿಗೆ ಲಿಖಿತ ದೂರು ಸಲ್ಲಿಸಿದ್ದರು. 43 ಖಾತೆಗಳನ್ನು ಉಲ್ಲೇಖಿಸಿ ದೂರು ನೀಡಿ ಕ್ರಮಕ್ಕೆ ಕೋರಿದ್ದರು. ದೂರಿನ ಪ್ರತಿಯನ್ನು ಸೈಬರ್ ಠಾಣೆಗೆ ವರ್ಗಾವಣೆ ಮಾಡಿದ್ದ ಕಮಿಷನರ್ ತನಿಖೆಗೆ ಸೂಚಿಸಿದ್ದರು.

ಕೊಲೆ ಪ್ರಕರಣದಲ್ಲಿ ದರ್ಶನ್ ಅವರಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ರದ್ದು ಪಡಿಸಿತ್ತು. ಬಳಿಕ ರಮ್ಯಾ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ 'ಭಾರತದ ಸಾಮಾನ್ಯ ಜನರಿಗೆ ಸುಪ್ರೀಂ ಕೋರ್ಟ್ ಒಂದು ಭರವಸೆಯ ಕಿರಣ ಇದ್ದಂತೆ. ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿ' ಎಂದು ಪೋಸ್ಟ್ ಮಾಡಿದ್ದರು.

ರಮ್ಯಾ ಅವರು ಆ ಪೋಸ್ಟ್ ಹಾಕಿದ ಬಳಿಕ ಇನ್‌ಸ್ಟಾಗ್ರಾಂ ಖಾತೆಗಳಿಗೆ ಅವಹೇಳನಕಾರಿ ಸಂದೇಶಗಳು ಬಂದಿದ್ದವು.

ಐದು ಖಾತೆಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿಯಾಗಿ ಕಾಮೆಂಟ್ ಮಾಡಿದ್ದ ಐದು ಖಾತೆಗಳ ವಿರುದ್ಧ ನಗರದ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೇಸರಿ ನಂದನ್, ಶ್ರೀಧರ್ ಕುಮಾರ್, ನಾಗೇಂದ್ರ ಪ್ರಸಾದ್, ರಮೇಶ್ ನಾಯ್ಕ್ ಹಾಗೂ ಎಂ.ಸಿ. ಮಂಜು ಹೆಸರಿನ ಖಾತೆಗಳ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್‌ಗಳಾದ 67, 66 ಹಾಗೂ 66(ಸಿ) ಹಾಗೂ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 352ರ ಅಡಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪ್ರಕರಣವೊಂದರ ಕುರಿತು ಪೋಸ್ಟ್‌ಗೆ ಪ್ರತಿಕ್ರಿಯಿಸಿದ್ದ ಆರೋಪಿಗಳು, ಸುಪ್ರೀಂ ಕೋರ್ಟ್ ಸಿಜೆಐ ಕುರಿತು ಕೆಟ್ಟದಾಗಿ ಹಾಗೂ ಬೆದರಿಕೆ ಒಡ್ಡುವಂತಹ ಕಾಮೆಂಟ್ ಪ್ರಕಟಿಸಿದ್ದರು. ಇದನ್ನು ಗಮನಿಸಿದ್ದ ಸೈಬರ್ ಅಪರಾಧ ಸಾಮಾಜಿಕ ಜಾಲತಾಣ ವಿಭಾಗದ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಎಂಬುದು ಗೊತ್ತಾಗಿದೆ.

ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದ ಪ್ರಕರಣದಲ್ಲಿ ವಕೀಲ ರಾಕೇಶ್ ಕಿಶೋರ್ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಇತ್ತೀಚೆಗೆ ಎಫ್‌ಐಆರ್ ದಾಖಲಾಗಿತ್ತು. ವಕೀಲ ಭಕ್ತವತ್ಸಲ ಅವರು ದೂರು ನೀಡಿದ್ದರು.

'ಘನತ್ಯಾಜ್ಯ ವಾಹನಗಳ ಚಾಲಕರನ್ನು ಕಾಯಂಗೊಳಿಸಿ'

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಘನತ್ಯಾಜ್ಯ ವಾಹನಗಳ ಚಾಲಕರು, ಸಹಾಯಕರು, ಲೋಡರ್ಸ್‌ಗಳನ್ನು ಕೂಡಲೇ ಕಾಯಂಗೊಳಿಸಬೇಕು' ಎಂದು ಮಾಜಿ ಕೇಂದ್ರ ಸಚಿವ ಸಿ.ಎಂ. ಇಬ್ರಾಹಿಂ ಆಗ್ರಹಿಸಿದರು.

ಶನಿವಾರ ಮಾತನಾಡಿದ ಅವರು, 'ಸುಮಾರು 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಘನತ್ಯಜ್ಯ ವಾಹನಗಳ ಚಾಲಕರು, ಸಹಾಯಕರು ಲೋಡರ್ಸ್ ಸಿಬ್ಬಂದಿಯನ್ನು ಗುತ್ತಿಗೆ ಪದ್ಧತಿಗೆ ಒಳಪಡಿಸುವ ಮೂಲಕ ಅನ್ಯಾಯ ಮಾಡಲಾಗುತ್ತಿದೆ. ಒಂದು ತಿಂಗಳ ಒಳಗೆ ಇವರನ್ನು ಕಾಯಂಗೊಳಿಸುವ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

ಕೃತ್ಯ ನಡೆದ 12 ತಾಸಿನಲ್ಲೇ ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದುವೆ ಮಾಡಿಕೊಡಲು ನಿರಾಕರಿಸಿದ್ದರು ಎನ್ನುವ ಕಾರಣಕ್ಕೆ ಸಿ.ಎ (ಚಾರ್ಟರ್ಡ್ ಅಕೌಂಟೆಂಟ್) ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿನಿಯನ್ನು ಅಪಹರಿಸಿದ್ದ ಐವರು ಆರೋಪಿಗಳನ್ನು ಸುಬ್ರಮಣ್ಯಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬೈಕ್ ಮೆಕಾನಿಕ್ ಕೆಲಸ ಮಾಡುತ್ತಿದ್ದ ಹೊಸಕೆರೆಹಳ್ಳಿಯ ನಿವಾಸಿ ರಂಗ(23), ಬನಶಂಕರಿಯ ಎರಡನೇ ಹಂತದ ನಿವಾಸಿ, ಆಟೊ ಚಾಲಕ ರಾಜೇಶ್ (26), ತ್ಯಾಗರಾಜನಗರದ ನಿವಾಸಿ, ಸ್ಕಾರಿ ಬಾಕ್ಸ್ ಮೇಕರ್ ಕೆಲಸ ಮಾಡುತ್ತಿದ್ದ ಚಂದನ್, ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದ ಎಸ್.ಶ್ರೇಯಸ್, ಸ್ಟೀಲ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್ ಬಂಧಿತರು.

ಚಿಕ್ಕಸಲ್ಲಂದ್ರದ ಸಿಂಹಾದ್ರಿ ಲೇಔಟ್‌ನ ನಿವಾಸಿ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಯಶಸ್ವಿನಿ ಕಾಲೇಜಿನ ಸಿ.ಎ ವ್ಯಾಸಂಗ ಮಾಡುತ್ತಿದ್ದ 19 ವರ್ಷದ ಹೇಮಾ ಬಿಂದು ಅವರನ್ನು ಮದುವೆ ಮಾಡಿಕೊಡುವಂತೆ ಅವರ ತಾಯಿ ಬಳಿ ಆರೋಪಿ ರಂಗ ಕೇಳಿಕೊಂಡಿದ್ದ. ಎರಡು ಬಾರಿ ಮನೆಗೂ ಬಂದು ಮನವಿ ಮಾಡಿದ್ದ. ಕೊಲೆ ಪ್ರಕರಣವೊಂದರಲ್ಲಿ ರಂಗ ಜೈಲಿಗೆ ಹೋಗಿದ್ದ. ಇದೇ ಕಾರಣಕ್ಕೆ ಮಗಳನ್ನು ಮದುವೆ ಮಾಡಿಕೊಡಲು ಹೇಮಾ ಅವರ ತಾಯಿ ನಿರಾಕರಿಸಿದ್ದರು. ಅ.8ರಂದು ಟೀ ಕುಡಿಯುತ್ತಾ ಇರುವಾಗ ರಾಜೇಶ್, ದರ್ಶನ್, ಚಂದನ್, ಶ್ರೇಯಸ್ ಹಾಗೂ ಯೋಗೇಶ್ ಹಾಗೂ ಮಂಜುನಾಥ್ ಅವರೊಂದಿಗೆ ಬಂದಿದ್ದ ರಂಗ, ಹೇಮಾ ಅವರನ್ನು ಕಾರಿನಲ್ಲಿ ಅಪಹರಿಸಿಕೊಂಡು ಹೋಗಿದ್ದ' ಎಂದು ಪೊಲೀಸರು ಹೇಳಿದರು.

ಎರಡು ತಂಡ ರಚನೆ: ವಿದ್ಯಾರ್ಥಿನಿ ತಾಯಿ ನೀಡಿದ ದೂರು ಆಧರಿಸಿ ಆರೋಪಿಗಳ ಪತ್ತೆಗೆ ಎರಡು ತಂಡಗಳನ್ನು ರಚಿಸಲಾಗಿತ್ತು. ತಾಂತ್ರಿಕ ಸಾಕ್ಷ್ಯಾಧಾರ ಆಧರಿಸಿ ಘಟನೆ ನಡೆದು 12 ತಾಸಿನ ಒಳಗಾಗಿ ಆರೋಪಿಗಳನ್ನು ಬಂಧಿಸುವಲ್ಲಿ ಸುಬ್ರಮಣ್ಯಪುರ ಠಾಣೆಯ ಪೊಲೀಸರು ಯಶಸ್ವಿ ಆಗಿದ್ದಾರೆ.

ಬಾಲಕಿಗೆ ಲೈಂಗಿಕ ದೌರ್ಜನ್ಯ: ಆರೋಪಿ ಸೆರೆ

ಬೆಂಗಳೂರು: ಅಪಾರ್ಟ್‌ಮೆಂಟ್‌ವೊಂದರ ಫ್ಲ್ಯಾಟ್‌ನಲ್ಲಿ ಬಾಲಕಿಗೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಯುವಕನನ್ನು ಕುಂಬಳಗೋಡು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರ್ಯನ್ ಕುಮಾರ್ (25) ಬಂಧಿತ ಆರೋಪಿ. ಬಾಲಕಿ ಹಾಗೂ ಆರೋಪಿ ಒಂದೇ ಅಪಾರ್ಟ್‌ಮೆಂಟ್‌ನಲ್ಲಿ ಬೇರೆ ಬೇರೆ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಆರೋಪಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಪೋಷಕರು ಇಲ್ಲದ ಸಂದರ್ಭದಲ್ಲಿ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಇದೆ. ಬಾಲಕಿ ಪೋಷಕರು ನೀಡಿದ ದೂರು ಆಧರಿಸಿ ಪೋಕ್ಸೊ(ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಹಯಾ'ವೇ ಜೀವನ ಅಭಿಯಾನ ಇಂದಿನಿಂದ

ಬೆಂಗಳೂರು: ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾದಿಂದ (ಎಸ್‌ಐಒ) ಅಕ್ಟೋಬರ್ 12ರಿಂದ ನವೆಂಬರ್ 10ರವರೆಗೆ 'ಹಯಾ'ವೇ ಜೀವನ–ಅರ್ಥ, ನೈತಿಕತೆ ಮತ್ತು ಪ್ರಶಾಂತತೆ' ಎಂಬ ಶೀರ್ಷಿಕೆ ಅಡಿಯಲ್ಲಿ ರಾಜ್ಯದಾದ್ಯಂತ ಅಭಿಯಾನ ಹಮ್ಮಿಕೊಂಡಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಐಒ ರಾಜ್ಯ ಕಾರ್ಯದರ್ಶಿ ಮೊಹಮ್ಮದ್ ಹಯ್ಯಾನ್, 'ಯುವಜನರು ಎದುರಿಸುತ್ತಿರುವ ಗಂಭೀರ ನೈತಿಕ ಮತ್ತು ಮಾನಸಿಕ ಬಿಕ್ಕಟ್ಟನ್ನು ಪರಿಹರಿಸುವ ಉದ್ದೇಶದಿಂದ ಈ ಅಭಿಯಾನ ಆಯೋಜಿಸಲಾಗುತ್ತಿದೆ. ಹಯಾ ಎಂದರೆ ಲಜ್ಜೆ, ಘನತೆ ಎಂದರ್ಥ' ಎಂದು ತಿಳಿಸಿದರು.

'ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಉಪನ್ಯಾಸಗಳು, ಮಸೀದಿಗಳಲ್ಲಿ ವಿಶೇಷ ಪ್ರವಚನಗಳು ನಡೆಯಲಿವೆ. ಯುವಜನರ ಎದುರಿಸುತ್ತಿರುವ ಸಮಸ್ಯೆಗಳು, ಸವಾಲುಗಳಿಗೆ ಪರಿಹಾರಗಳ ಕಂಡುಕೊಳ್ಳಲು ಈ ಅಭಿಯಾನ ಸಹಾಯಕವಾಗಲಿದೆ' ಎಂದು ಭರವಸೆ ವ್ಯಕ್ತಪಡಿಸಿದರು.

ನಗರದಲ್ಲಿ ಇಂದು

ಹಿಂದೂಸ್ತಾನಿ ಸಂಗೀತ ಕಛೇರಿ: ಗಾಯನ: ಅಂಬಯ್ಯ ನುಲಿ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 7

ವುಮೆನ್ ಬೈಕಥಾನ್ 'ಸ್ತನ ಕ್ಯಾನ್ಸರ್' ಕುರಿತು ಜಾಗೃತಿ: ಆಯೋಜನೆ ಮತ್ತು ಸ್ಥಳ: ಎಚ್‌ಸಿಜಿ ಕ್ಯಾನ್ಸರ್ ಸೆಂಟರ್ ಕೆ.ಆರ್. ರಸ್ತೆ, ಬೆಳಿಗ್ಗೆ 7

ಭಾರತೀಯ ಸಂಗೀತ ಉತ್ಸವ: ಭಾಗವತ ಸಂಕೀರ್ತನ, ಶುಭಾರಂಭ: ಅತಿಥಿ: ಅ.ನ. ಯಲ್ಲಪ್ಪರೆಡ್ಡಿ, ಸುಮಾ ಸುಧೀಂದ್ರ, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್ತು, ರಾಜರಾಜೇಶ್ವರಿ ಕಲಾನಿಕೇತನ, ಬೆಂಗಳೂರು ಪರಿಸರ ಟ್ರಸ್ಟ್, ಸ್ಥಳ: ಡಾ.ಎಚ್. ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 8ರಿಂದ

ಅ.ನ. ಯಲ್ಲಪ್ಪರೆಡ್ಡಿ

'ಸಂಸ್ಕೃತೋತ್ಸವ–2025' ಪ್ರತಿಭಾ ಪುರಸ್ಕಾರ ಮತ್ತು ಸಂಸ್ಕೃತ ಸೇವಾವ್ರತಿ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಬಸವರಮಾನಂದ ಸ್ವಾಮೀಜಿ, ಪ್ರಶಸ್ತಿ ಸ್ವೀಕರಿಸುವವರು: ವನಿತಾ ರಾಮಸ್ವಾಮಿ, ಅಧ್ಯಕ್ಷತೆ: ವಿ. ಬಾಲಸುಬ್ರಹ್ಮಣ್ಯಂ, ಮುಖ್ಯ ಭಾಷಣಕಾರರು: ಆಚಾರ್ಯ ಕೃಷ್ಣರಾಜ ಕುತ್ಪಾಡಿ, ಪ್ರಾಸ್ತಾವಿಕ ನುಡಿ: ಕೃಷ್ಣಮೂರ್ತಿ ಬಿ., ಆಯೋಜನೆ: ಸಮ್ಯಕ ಪ್ರತಿಷ್ಠಾನಮ್, ಸ್ಥಳ: ಜವಾಹರ ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 9

ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ 'ವಿಷ್ಣು ಸಹಸ್ರನಾಮ ಹವನ', ಧಾರ್ಮಿಕ ಸಭೆ: ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಯೋಗಾನಂದ ಸರಸ್ವತೀ ಸ್ವಾಮೀಜಿ, ಅಧ್ಯಕ್ಷತೆ: ಶ್ರೀಪಾದ ಯಸ್ಸೋ ನಾಯಕ್, ಉದ್ಘಾಟನೆ: ವಿ. ಸೋಮಣ್ಣ, ಕನ್ನಡಕ, ಸ್ವದೇಶಿ ವಸ್ತುಗಳ ಸಾಂಕೇತಿಕ ವಿತರಣೆ: ಎಲ್. ಮುರುಗನ್, ಅತಿಥಿಗಳು: ಪಿ.ಸಿ. ಮೋಹನ್, ಜಗ್ಗೇಶ್, ಕೆ.ಸಿ. ರಾಮಮೂರ್ತಿ, ಎನ್. ರವಿಕುಮಾರ್, ಆಯೋಜನೆ: ಶ್ರೀ ನಿತ್ಯಾನಂದ ಯೋಗಾಶ್ರಮ ಕೊಡವೂರು ಮಠ, ಬೆಂಗಳೂರು ಸಮಿತಿ, ಸ್ಥಳ: ಬೆಂಗಳೂರು ದೇವಾಂಗ ಸಂಘ, ದೇವಾಂಗ ಹಾಸ್ಟೆಲ್ ರಸ್ತೆ, ಬೆಳಿಗ್ಗೆ 9.30

ಬುದ್ಧಘೋಷ್ ದೇವೇಂದ್ರ ಹೆಗ್ಗಡೆ, ಮೊಗಳ್ಳಿ ಗಣೇಶ್ ಅವರಿಗೆ ನುಡಿ ನಮನ: ಭಾಗವಹಿಸುವವರು: ಮಾವಳ್ಳಿ ಶಂಕರ್, ಗುರು ಪ್ರಸಾದ್ ಕೆರಗೋಡು, ಎಲ್. ಎನ್. ಮುಕುಂದರಾಜ್, ವಿ. ನಾಗರಾಜ್, ಮೂಡ್ನಾಕೂಡು ಚಿನ್ನಸ್ವಾಮಿ, ಇಂದೂಧರ ಹೊನ್ನಾಪುರ, ಕೋಟಿಗಾನಹಳ್ಳಿ ರಾಮಯ್ಯ, ನಂಜುಂಡೇಗೌಡ, ಇಂದಿರಾ ಕೃಷ್ಣಪ್ಪ, ದು. ಸರಸ್ವತಿ, ಆಯೋಜನೆ: ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಬೆಂಗಳೂರು ನಗರ ವಿಶ್ವವಿದ್ಯಾಲಯ, ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10

'ಕಿಶೋರ ಕನಕ ಕಾವ್ಯ ಗಮಕ ಸ್ಪರ್ಧೆ': ಆಯೋಜನೆ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಕಲಾರ್ಪಣ–7: ಅತಿಥಿಗಳು: ಜ್ಯೋತ್ಸ್ನಾ ಶ್ರೀಕಾಂತ್, ಸಿದ್ಧು ಯಪ್ಪಲಪರ್ವಿ, ಆಯೋಜನೆ: ಅಂಜಲಿ ಸ್ಕೂಲ್ ಆಫ್ ಡಾನ್ಸ್ ಆ್ಯಂಡ್ ಮ್ಯೂಸಿಕ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ತಿಂಗಳ ಕವಿಗೋಷ್ಠಿ, ಗೀತ ಗಾಯನ, ಪ್ರಶಸ್ತಿ ಪ್ರದಾನ: ಅಂಬುಜಾಕ್ಷಿ ಬೀರೇಶ್, ಅಧ್ಯಕ್ಷತೆ: ಶಿವಪ್ರಸಾದ್ ಆರಾಧ್ಯ ಮಲ್ಲರಬಾಣವಾಡಿ, ಅತಿಥಿ: ವಿ. ಮಲ್ಲಿಕಾರ್ಜುನಯ್ಯ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

'ಕೆ.ವಿ. ಶಂಕರಗೌಡ ಪ್ರಶಸ್ತಿ' ಪ್ರದಾನ: ಕೆ. ಮೋಹನ್ ದೇವ್ ಆಳ್ವ, ಪ್ರಶಸ್ತಿ ಪಡೆಯುವವರು: ಕೆ.ವಿ. ನಾಗರಾಜಮೂರ್ತಿ, ಅತಿಥಿ: ರಾಣಾ ಸನೀಲ್ ಕುಮಾರ್ ಸಿಂಗ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ರಾಷ್ಟ್ರೀಯ ಸಂಗೀತ ನೃತ್ಯ ಮಹೋತ್ಸವ: ಉದ್ಘಾಟನೆ: ಶಿವರಾಜ ತಂಗಡಗಿ, ಅತಿಥಿಗಳು: ವೆಂಕಟೇಶ ಎಂ.ವಿ., ಕೆ.ಎಂ. ಗಾಯತ್ರಿ, ಅಧ್ಯಕ್ಷತೆ: ಶುಭ ಧನಂಜಯ, 'ಕವಿಯ ನೋಡಿ ಕವಿತೆ ಕೇಳಿ' ಉದ್ಘಾಟನೆ: ನಾಗತಿಹಳ್ಳಿ ಚಂದ್ರಶೇಖರ್, ನಾ. ದಾಮೋದರ ಶೆಟ್ಟಿ, ಉಪಸ್ಥಿತಿ: ವೈ.ಕೆ. ಮುದ್ದುಕೃಷ್ಣ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

ನಾಗತಿಹಳ್ಳಿ ಚಂದ್ರಶೇಖರ್

125ನೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಅತಿಥಿಗಳು: ಸಿ. ಸೋಮಶೇಖರ್, ಅಲೋಕ್ ಕುಮಾರ್ ಚತುರ್ವೇದಿ, ಪಂಕಜ್ ಕುಮಾರ್, ಎಂ.ಎಸ್. ನರಸಿಂಹಮೂರ್ತಿ, ಅಧ್ಯಕ್ಷತೆ: ಕೆ.ಎನ್. ಶ್ರೀನಿವಾಸ ರಾವ್, ಆಯೋಜನೆ: ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೆನ್ಷನರ್ಸ್ ಕಮ್ಯೂನ್ ಬೆಂಗಳೂರು, ಸ್ಥಳ: ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಳಿಗ್ಗೆ 11

ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಸನ್ಮಾನಿತರು: ಶ್ರೀನಗರ ಕಿಟ್ಟಿ, ರಿತುಪರ್ಣ ಕೆ.ಎಸ್., ಬಿ.ಎಸ್. ಭೀಮೇಗೌಡ, ಸಿ. ಪುಟ್ಟಸ್ವಾಮಿ, ಮಾಗಡಿ ಆರ್. ಗುರುದೇವ್, ಉದ್ಘಾಟನೆ: ಜಯಪ್ರಕಾಶ್ ಗೌಡ, ಬಿ. ಕೆಂಚಪ್ಪಗೌಡ, ಆಯೋಜನೆ: ರಾಜ್ಯ ಒಕ್ಕಲಿಗರ ಸಂಘ, ಸ್ಥಳ: ಕುವೆಂಪು ಕಲಾಕ್ಷೇತ್ರ, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿಶ್ವೇಶ್ವರಪುರ, ಬೆಳಿಗ್ಗೆ 11

ಟ್ರಸ್ಟ್‌ನ ವಾರ್ಷಿಕೋತ್ಸವ, 'ಆದರ್ಶ ಜೈನ ಮಹಿಳಾ ರತ್ನ' ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಪ್ರದಾನ: ಉದ್ಘಾಟನೆ: ಸುರೇಂದ್ರ ಕುಮಾರ್, ಪ್ರಶಸ್ತಿ ಪ್ರದಾನ: ಅನಿತಾ ಸುರೇಂದ್ರ ಕುಮಾರ್, ಪ್ರಶಸ್ತಿ ಸ್ವೀಕರಿಸುವವರು: ಜಲಜಾ ಜೈನ್, ಅಧ್ಯಕ್ಷತೆ: ಎಸ್. ಜಿತೇಂದ್ರ ಕುಮಾರ್, ಆಯೋಜನೆ: ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್, ಸ್ಥಳ: ಕರ್ನಾಟಕ ಜೈನ್ ಭವನ, ಕೆ.ಆರ್. ರಸ್ತೆ, ಶಂಕರಪುರ, ಮಧ್ಯಾಹ್ನ 2.30

23ನೇ ಸಂಗೀತೋತ್ಸವ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಪದ್ಮಿನಿ ಅಚ್ಚಿ, ಪ್ರಶಸ್ತಿ ಪ್ರದಾನ: ಮನು ಬಳಿಗಾರ್, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಅತಿಥಿಗಳು: ತ್ರಿವೇಣಿ ಹರೀಶ್, ಗಿರಿಧರ ಭಂಡಿವಾಡ, ಆಯೋಜನೆ: ಶ್ರೀಗುರು ಸಮರ್ಥ ಸಂಗೀತ ವಿದ್ಯಾಲಯ ಟ್ರಸ್ಟ್, ಸ್ಥಳ: ಶ್ರೀಜಯರಾಮ ಸೇವಾ ಮಂಡಳಿ, ಜಯನಗರ, ಮಧ್ಯಾಹ್ನ 3.30

ಎಂಟನೇ ವಾರ್ಷಿಕೋತ್ಸವ, 'ಮಲೆನಾಡು ರತ್ನ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ವಿನಯ್ ಗುರೂಜಿ, ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಅಜಿತ್ ಡಿ. ಕಲ್ಕುಳಿ, ಅತಿಥಿಗಳು: ರಾಜೇಗೌಡ, ಆರಗ ಜ್ಞಾನೇಂದ್ರ, ಕೆ. ಗೋಪಾಲಯ್ಯ, ಪ್ರಶಸ್ತಿ ಸ್ವೀಕರಿಸುವವರು: ಆರತಿ ಕೃಷ್ಣ, ವಿಜಯದೇವ್ ಬಸವಾನಿ, ವಿಶ್ವನಾಥ್ ಗದ್ದೆಮನೆ, 'ಶಿವದೂತ ಗುಳಿಗ' ಕಾರ್ಯಕ್ರಮ, ಆಯೋಜನೆ: ಮಲೆನಾಡು ಹಿತರಕ್ಷಣಾ ವೇದಿಕೆ, ಸ್ಥಳ: ಡಾ. ರಾಜ್‌ಕುಮಾರ್ ಸಭಾಂಗಣ, ಗೆಳೆಯರ ಬಳಗ, ಮಹಾಲಕ್ಷ್ಮಿಪುರ, ಸಂಜೆ 4

'ಕಾಳಿಂಗ ನಾವಡ ಪ್ರಶಸ್ತಿ' ಪ್ರದಾನ: ಅತಿಥಿಗಳು: ತಲ್ಲೂರು ಶಿವರಾಮ್ ಶೆಟ್ಟಿ, ಕೆ.ಇ. ರಾಧಾಕೃಷ್ಣ, ಆನಂದರಾಮ ಉಪಾಧ್ಯ, ಕೃಷ್ಣಮೂರ್ತಿ ಅಡಿಗ, ಪ್ರಕಾಶ್ ಭಟ್, ನರಸಿಂಹ ಸೋಮಯಾಜಿ ಯುಎಸ್‌ಎ, ಗಣಪಯ್ಯ ನಾವಡ, ರಾಧಾಕೃಷ್ಣ ಉರಾಳ, ಪ್ರಶಸ್ತಿ ಸ್ವೀಕರಿಸುವವರು: ರಾಘವೇಂದ್ರ ಮಯ್ಯ ಹಾಲಾಡಿ, 'ಬಾವ–ಗಾನ–ಯಾನ', 'ಅಂಧಕ ಮೋಕ್ಷ' ಯಕ್ಷಗಾನ ಪ್ರದರ್ಶನ, ಆಯೋಜನೆ: ಕಲಾಕದಂಬ ಆರ್ಟ್ ಸೆಂಟರ್, ಸ್ಥಳ: ಪರಂಪರಾ ಸಭಾಂಗಣ, ಚೆನ್ನಮ್ಮನ ಕೆರೆ ಅಚ್ಚುಕಟ್ಟು, ಕತ್ರಿಗುಪ್ಪೆ, ಸಂಜೆ 4

'ಆದಿಕವಿ ಮತ್ತು ವಾಗ್ದೇವಿ ಪುರಸ್ಕಾರ' ಪ್ರದಾನ: ಅಧ್ಯಕ್ಷತೆ: ಎಸ್.ಜಿ. ಕೋಟಿ, ರಮೇಶ ಭಟ್ ಬೆಳಗೋಡು, ಪ್ರಸ್ತಾವಿಕ ನುಡಿ: ರಘುನಂದನ ಭಟ್, 'ಆದಿಕವಿ' ಪುರಸ್ಕಾರ ಸ್ವೀಕರಿಸುವವರು: ಎಸ್.ವಿ. ಶಾಂತಾಕುಮಾರಿ, 'ವಾಗ್ದೇವಿ' ಪುರಸ್ಕಾರ ಸ್ವೀಕರಿಸುವವರು: ಅರಬಗಟ್ಟೆ ಅಣ್ಣಪ್ಪ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ಬಾಪೂ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಭುವಿ ಎಚ್. ಡಿ., ಅತಿಥಿಗಳು: ನಿರಂಜನ ವಾನಳ್ಳಿ, ಶುಭ ಧನಂಜಯ್, ಎಂ.ಆರ್. ಕಮಲಾ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಮಾಧುರಿ ಕೌಶಿಕ್, ಪಿಟೀಲು: ಸಿ.ವಿ. ಶ್ರುತಿ, ಮೃದಂಗ: ಕೌಶಿಕ್ ಶ್ರೀಧರ್, ಘಟ: ಶ್ರೀನಿಧಿ ಆರ್. ಕೌಂಡಿನ್ಯ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

'ರಾಕ್ಷಸ ತಂಗಡಿ' ನಾಟಕ ಪ್ರದರ್ಶನ: ರಚನೆ: ಗಿರೀಶ್ ಕರ್ನಾಡ್, ನಿರ್ದೇಶನ: ಗಗನ್ ಪ್ರಸಾದ್, ಆಯೋಜನೆ: ಸ್ಪಷ್ಟ ಥಿಯೇಟರ್, ದಿ ಕಲಾಪ್ರೇಮಿ ಫೌಂಡೇಷನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಪ್ರೇಯಸಿಗೆ ಆಭರಣ ಮಾಡಿಸಲು ಸಂಬಂಧಿ ಮನೆಯಲ್ಲಿ ಕಳ್ಳತನ

ಬೆಂಗಳೂರು: ಪ್ರೇಯಸಿಗೆ ಚಿನ್ನಾಭರಣ ಮಾಡಿಸಲು ಸಂಬಂಧಿಕರೊಬ್ಬರ ಮನೆಯಲ್ಲೇ ನಗದು ಮತ್ತು ಆಭರಣ ಕಳವು ಮಾಡಿದ್ದ ಆರೋಪಿ, ಗಟ್ಟಹಳ್ಳಿ ನಿವಾಸಿ ಶ್ರೇಯಸ್ (23) ಎಂಬಾತನನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತನಿಂದ ₹56.17 ಲಕ್ಷ ಮೌಲ್ಯದ 502 ಗ್ರಾಂ ಚಿನ್ನಾಭರಣ ಮತ್ತು ₹3.46 ಲಕ್ಷ ನಗದು ಜಪ್ತಿ ಮಾಡಲಾಗಿದೆ.

ಆರೋಪಿ ಸೆ.15ರಂದು ತನ್ನ ಸಂಬಂಧಿ ಹರೀಶ್ ಎಂಬುವವರ ಮನೆಯ ಬೀಗ ಒಡೆದು ಚಿನ್ನಾಭರಣ ಮತ್ತು ನಗದು ಕಳವು ಮಾಡಿದ್ದ. ಹರೀಶ್ ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಆರೋಪಿ ಕೋಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ಸಂಬಂಧಿ ಹರೀಶ್ ಅವರ ಮನೆಗೆ ಆಗಾಗ್ಗೆ ಹೋಗಿ ಬರುತ್ತಿದ್ದ. ಆಗ ಅವರ ಮನೆಯಲ್ಲಿರುವ ನಗದು, ಚಿನ್ನಾಭರಣದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದ. ಈ ಮಧ್ಯೆ ಬನ್ನೇರುಘಟ್ಟ ನಿವಾಸಿ, ಕೌಟುಂಬಿಕ ಕಾರಣಗಳಿಗೆ ಪತಿಯಿಂದ ವಿಚ್ಛೇದನ ಪಡೆದುಕೊಂಡಿದ್ದ ಶಾಲಾ ಸ್ನೇಹಿತೆಯನ್ನು ಪ್ರೀತಿಸುತ್ತಿದ್ದ. ಆಕೆಯ ಆರ್ಥಿಕ ಸ್ಥಿತಿ ಸುಧಾರಿಸಲು ಮತ್ತು ಆಕೆಗೆ ಚಿನ್ನಾಭರಣ ಮಾಡಿಸಲು ಹಣ ಹೊಂದಿಸುತ್ತಿದ್ದ. ಆದರೆ, ತನ್ನ ಸಂಬಳದ ಹಣದಲ್ಲಿ ಕಷ್ಟವಾಗಿತ್ತು. ಹೀಗಾಗಿ, ಕಳ್ಳತನ ಹಾದಿ ಹಿಡಿದಿದ್ದಾನೆ ಎಂದು ಪೊಲೀಸರು ಹೇಳಿದರು.

ಆರು ತಿಂಗಳ ಹಿಂದೆಯೂ ದೂರುದಾರ ಹರೀಶ್ ಅವರ ಮನೆಯಲ್ಲೇ ಕಳ್ಳತನ ಮಾಡಿದ್ದ. ಆದರೆ, ಕಡಿಮೆ ಮೊತ್ತದ ಚಿನ್ನ, ನಗದು ಕಳುವಾಗಿದ್ದರಿಂದ ಅವರು ದೂರು ನೀಡಿರಲಿಲ್ಲ. ಅದನ್ನೇ ದುರುಪಯೋಗ ಪಡಿಸಿಕೊಂಡ ಆರೋಪಿ, ಕಳೆದ ತಿಂಗಳು ಹರೀಶ್ ಅವರ ಕುಟುಂಬ ಮನೆಗೆ ಬೀಗ ಹಾಕಿಕೊಂಡು ಸಮೀಪದಲ್ಲಿ ಇರುವ ಸಂಬಂಧಿ ಮನೆಗೆ ಹೋಗಿದ್ದರು. ಆ ಸಂದರ್ಭದಲ್ಲಿ ಮನೆಗೆ ಬಂದು ಕಳ್ಳತನ ಮಾಡಿದ್ದ ಎಂದರು.

ಕಾರು ಹತ್ತಿಸಲು ಯತ್ನ: ಬಂಧನ

ಮಿಲ್ಕ್ ಪಾರ್ಲರ್ ಮಾಲೀಕನ ಪತ್ನಿ ಮೇಲೆ ಹಲ್ಲೆ ನಡೆಸಿ ಅಸಭ್ಯವಾಗಿ ವರ್ತಿಸಿ, ಕಾರು ಹತ್ತಿಸಲು ಯತ್ನಿಸಿದ ರೌಡಿಶೀಟರ್‌ನನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅನಂತನಗರ ನಿವಾಸಿ ತರುಣ್ ಚೌಧರಿ(36) ಬಂಧಿತ.

ಅ.9ರಂದು ರಾತ್ರಿ ಠಾಣೆ ವ್ಯಾಪ್ತಿಯ ಅನಂತನಗರದ ಎರಡನೇ 2ನೇ ಹಂತದಲ್ಲಿರುವ ಮಿಲ್ಕ್ ಪಾರ್ಲರ್‌ವೊಂದರ ಮಾಲೀಕ ಮೇಲೆ ಹಲ್ಲೆ ನಡೆಸಿದ್ದ. ಅದನ್ನು ತಡೆಯಲು ಬಂದ ಅವರ ಪತ್ನಿಯ ಬಟ್ಟೆ ಹಿಡಿದು ಎಳೆದಾಡಿ ಅಸಭ್ಯವಾಗಿ ವರ್ತಿಸಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಕೇವಲ ಎರಡು ಗಂಟೆಯಲ್ಲಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

Prestige®

ಕುಕ್ಕಿಂಗನ್ನು ಪ್ರೀತಿಸುವವರು,
ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ.

ಅಭಿಮಾನಕ್ಕೆ ಯೋಗ್ಯವಾದ ನಾವೀನ್ಯತೆಗಳು ಈಗ ಸಂಭ್ರಮಪಡುವ ಬೆಲೆಗಳಲ್ಲಿ

ಶುಭ ಉಳಿತಾಯ (GST ಬೆಲೆ ಇಳಿಕೆ) ಮತ್ತು ಶುಭ ಉತ್ಸವದ ಕೊಡುಗೆಗಳೊಂದಿಗೆ ಸಂಭ್ರಮವನ್ನು ದ್ವಿಗುಣಗೊಳಿಸಿ

75 Years of Prestige

ಖರೀದಿಸಿ*
ಸ್ವಚ್ಛ್ ಟ್ರೈ-ಪ್ಲೈ 3ಲೀ ಕುಕ್ಕರ್
ಎಂಆರ್‌ಪಿ: ₹3 810.00
(GST ಇಳಿಕೆ ಬಳಿಕದ ಬೆಲೆ)

ಪ್ರೆಸ್ಟೀಜ್ ಶುಭ ಉತ್ಸವ

10 ಸೆಪ್ಟೆಂಬರ್ - 31 ಅಕ್ಟೋಬರ್, 2025

₹1 530.00 ಮೌಲ್ಯದ ಸ್ವಚ್ಛ್ ಟ್ರೈ-ಪ್ಲೈ ಕುಕ್ಕರ್ ಜೊತೆಗೆ ಸ್ಟೇಯಿನ್‌ಲೆಸ್ ಸ್ಟೀಲ್ ಕಡಾಯಿ 24 ಸೆಂ.ಮೀ
ಉಚಿತ*

ಖರೀದಿಸಿ
ಟ್ರೈ-ಪ್ಲೈ 3 ಪೀಸ್ ಕುಕ್‌ವೇರ್ ಸೆಟ್*
(ಕಡಾಯಿ, ಫ್ರೈ ಪ್ಯಾನ್, ಸಾಸ್ ಪ್ಯಾನ್)
ಎಂಆರ್‌ಪಿ: ₹4 990.00
(GST ಇಳಿಕೆ ಬಳಿಕದ ಬೆಲೆ)
ಮತ್ತು **ಪಡೆಯಿರಿ**
₹3 440.00 ಮೌಲ್ಯದ ಸ್ವಚ್ಛ್ ಟ್ರೈ-ಪ್ಲೈ ಕುಕ್ಕರ್ 2ಲೀ
ಉಚಿತ*

ಖರೀದಿಸಿ
ಮ್ಯಾಜಿಕ್ ಬೇಸ್ ಪ್ರೀಮಿಯಂ ಸ್ಟೇಯಿನ್‌ಲೆಸ್ ಸ್ಟೀಲ್ ಕ್ಯಾಸರೋಲ್ 24 ಸೆಂಮೀ
ಎಂಆರ್‌ಪಿ: ₹6 080.00
(GST ಇಳಿಕೆ ಬಳಿಕದ ಬೆಲೆ)
ಮತ್ತು **ಪಡೆಯಿರಿ**
₹2 870.00 ಮೌಲ್ಯದ ಡೀಲಕ್ಸ್ ಆಲ್ಫಾ ಸ್ವಚ್ಛ್ ಕುಕ್ಕರ್ 3ಲೀ
ಉಚಿತ*

ಖರೀದಿಸಿ
ಸ್ಟೇಯಿನ್‌ಲೆಸ್ ಸ್ಟೀಲ್ ಪ್ಲಾಟಿನಾ 3 ಪೀಸ್ ಕುಕ್‌ವೇರ್ ಸೆಟ್*
(ಕಡಾಯಿ, ಫ್ರೈ ಪ್ಯಾನ್, ಸಾಸ್ ಪ್ಯಾನ್)
ಎಂಆರ್‌ಪಿ: ₹3 730.00
(GST ಇಳಿಕೆ ಬಳಿಕದ ಬೆಲೆ)
ಮತ್ತು **ಪಡೆಯಿರಿ**
₹2 380.00 ಮೌಲ್ಯದ ಸ್ಟೇಯಿನ್‌ಲೆಸ್ ಸ್ಟೀಲ್ ಪಾಪ್ಯುಲರ್ ಸ್ವಚ್ಛ್ ಕುಕ್ಕರ್ 3ಲೀ
ಉಚಿತ*

ಎಲ್ಲಾ ಬೆಲೆ ಇಳಿಕೆಗಾಗಿ QR ಕೋಡ್ ಸ್ಕ್ಯಾನ್ ಮಾಡಿ

CUSTOMER CARE NO 080-60004411 | Scan to find Prestige Xclusive stores | Shop Online on shop.ttkprestige.com | ttk

ಪರಿಷ್ಕೃತ GST ದರಗಳು 22 ಸೆಪ್ಟೆಂಬರ್ ನಿಂದ ಜಾರಿಯಾಗುತ್ತವೆ.
*ನಿಯಮಗಳು ಮತ್ತು ಶರತ್ತುಗಳು: ಉಲ್ಲೇಖಿಸಿರುವ ಬೆಲೆಗಳು ಎಲ್ಲಾ ತೆರಿಗೆಗಳು ಸೇರಿರುವ MRP ಆಗಿದ್ದು ಇದು ಒಂದು ಯೂನಿಟ್‌ನ ನಿವ್ವಳ ಪ್ರಮಾಣಕ್ಕೆ ಆಗಿರುತ್ತದೆ. ಡಿಸ್ಕೌಂಟ್‌ಗಳು MRP ಮೇಲೆ ಮಾತ್ರ ಅನ್ವಯವಾಗುತ್ತವೆ ಮತ್ತು ಎರಡು ಆಫರ್‌ಗಳನ್ನು ಒಟ್ಟುಗೂಡಿಸುವ ಅವಕಾಶ ಇರುವುದಿಲ್ಲ. ಪ್ರತಿಯೊಂದು ಆಫರ್, ಖರೀದಿಸಿದ ಒಂದು ಯೂನಿಟ್ ಮೇಲೆ ಮಾತ್ರ ಅನ್ವಯವಾಗುತ್ತದೆ, ಜೊತೆಗೆ ಅರ್ಹ ಖರೀದಿಗೆ ಒಂದು ಉಚಿತ ಯೂನಿಟ್ಅನ್ನು ನೀಡಲಾಗುತ್ತದೆ. ಆಯ್ದ ಮಾಡೆಲ್‌ಗಳ ಮೇಲೆ, ಆಯ್ದ ಸ್ಟೋರ್‌ಗಳಲ್ಲಿ ಮತ್ತು ಸ್ಟಾಕ್‌ಗಳು ಮುಗಿಯುವತನಕ ಮಾತ್ರ ಆಫರ್ ಅನ್ವಯವಾಗುತ್ತದೆ. ಸ್ವಚ್ಛ್ ಟ್ರೈ-ಪ್ಲೈ 3ಲೀ ಕುಕ್ಕರ್‌ನ ಒಂದು ಯುನಿಟ್‌ನ ಖರೀದಿಯ ಮೇಲೆ, ಗ್ರಾಹಕರು ಒಂದು ಯುನಿಟ್ SS ಕಡಾಯಿ 24ಸೆಂಮೀ ಉಚಿತವಾಗಿ ಪಡೆಯುತ್ತಾರೆ. ಟ್ರೈ-ಪ್ಲೈ 3-ಪೀಸ್ ಕುಕ್‌ವೇರ್ ಸೆಟ್‌ನಲ್ಲಿ ಫ್ರೈ ಪ್ಯಾನ್ 24 ಸೆಂಮೀ, SS ಲಿಡ್‌ನೊಂದಿಗೆ ಕಡಾಯಿ 24 ಸೆಂಮೀ ಮತ್ತು ಸಾಸ್‌ಪ್ಯಾನ್ 16 ಸೆಂಮೀ ಇರುತ್ತದೆ, ಹಾಗೆಯೇ SS ಪ್ಲಾಟಿನಾ 3-ಪೀಸ್ ಕುಕ್‌ವೇರ್ ಸೆಟ್‌ನಲ್ಲಿ ಫ್ರೈ ಪ್ಯಾನ್ 22 ಸೆಂಮೀ, ಗ್ಲಾಸ್ ಲಿಡ್ ನೊಂದಿಗೆ ಕಡಾಯಿ 22 ಸೆಂಮೀ ಮತ್ತು ಗ್ಲಾಸ್ ಲಿಡ್ ನೊಂದಿಗೆ ಸಾಸ್‌ಪ್ಯಾನ್ 16 ಸೆಂಮೀ ಇರುತ್ತದೆ. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ನಿಯಮಗಳು ಮತ್ತು ಷರತ್ತುಗಳನ್ನು ವಿವರವಾಗಿ ತಿಳಿಯಲು ನಿಮ್ಮ ಸಮೀಪದ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್ /ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ.

Prestige® Xclusive **Outer Ring Road: Hennur Coco:** Ph: 7204250679; **Tumkur Rd. 8th Mile T.Dasarahalli:** Ph: 9972541116; **Koramangala:** Ph: 9663515616, **Tumkur:** Ph: 9164853121; **Bull Temple Rd:** Ph: 26609012; **Malleswaram:** Ph: 9448282470; **Rt Nagar Main Rd:** Ph: 41698761; **Ganganagar Cbi Rd:** Ph: 43705914; **Wheeler Rd:** Ph: 25803080; **Kattriguppe Circle:** Ph: 40900685; **Vijayanagar:** Ph: 9739004750; **Hsr Bda Complex:** Ph: 25726991; **Marathahalli:** Ph: 42197088; **Sanjaynagar,** Ph: 41258300; **Banaswadi Ring Rd:** Ph: 41634115; **Jayanagar:** Ph: 9845066549; **J.P.Nagar:** Ph: 41122235; **Rajarajeshwaringr:** Ph: 28603540, 9008418800; **Kengeri Stl Town,** Ph: 28485296; **Rajajinagar:** Ph: 41731224; **B.T.M.Layout:** Ph: 40939168; **Sarjapura Rd:** Ph: 42038646; **Konankunte Cross:** Ph: 9845057728; **Nagharabhavi Bda Cmplx:** Ph: 9739004750; **Begur:** Ph: 8970366139; **Vidyaranayapura:** Ph: 9845518824; **Wilson Garden:** Ph:9480010720; **Brookefield:** Ph: 28541555; **Ramamurthynagar:** Ph: 08042049545; **Kr Puram:** Ph: 8861494277;**Cambridge Layout,** Ph: 42074468; **Kaggadaspura:** Ph: 7306666610; **Kammanahalli:** Ph:41606044; **Whitefield:** Ph: 40907273;**Chandapura:** Ph: 9036190725; **Dommasandra:** Ph: 9611423555; **Hesarghatta Road:** Ph: 28370400; **Uttarahalli:** Ph: 9986879095; **Anjananagr Magadi Rd:** Ph: 23281206; **Kadugodi:** Ph: 8123042234; **Hosur Rd Huskur Gate:** Ph: 9606406009; **Yelahanka Newtown:** Ph: 8668034376; **Jayamahal Ext,** Ph: 41616484; **Mahalakshmi Lyt:** Ph: 23572233; **Jpnagar 7th Phase, Puttenahalli:** Ph: 41465855; **Kumaraswamy Lyt:** Ph: 8618517716; **Chandra Lyt:** Ph: 9739004750; **Channasandra:** Ph: 9986369569; **Sheshadripuram:** Ph: 8711090976; **Kasturinagar:** Ph: 08049923166; **Attibele:** Ph: 9341221525; **Jigani:** Ph: 8762069852; **Sarjapura Town:** Ph: 9036373175; **Hosa Rd Junction:** Ph: 9845597099; **Mathikere:** Ph: 6366636592; **Basaveshwaranagar:** Ph: 9739591008; **Thalagatapura:** Ph: 9964116888; **Hegganahalli:** Ph: 28360289; **Gottigere:** Ph: 8431241099; **Ullal:** Ph: 9686646565; **Jayanagar 4th Block East Extension:** Ph: 9945446335; **Nelamangala:** Ph: 9632356627; **Kolar:** Ph: 9738882584; **Channapatna:** Ph: 9686661294; **Madhugiri:** Ph: 9611552805; **Gauribidanur:** Ph: 8317399465; **Gubbi: Ph:** 9035195120/8095459040; **Banshankari Stage 2, Bda Complex:** Ph: 49890679, 9740677740; **Vijayabank Colony, Bilekahalli:** Ph: 8970366139; **Whitefield:** Ph: 08040907273; **Malur:** Ph: 9845028859; **Kumbalagodu:** Ph: 9845014860; **Devanahalli:** Ph: 9845737576; **Thanisandra:** Ph: 9686340159; **Hulimavu:** Ph: 8904654433; **Singanayakanahalli:** Ph: 9151717779; **Anekal:** Ph: 8660070202; **Tiptur,** Ph: 9164688773; **Bhyadarahalli:** Ph: 9845982089; **Hennur Bande:** Ph: 9980097982; **Tc Palya Road:** Ph: 9148775224; **Chikkajaala:** Ph: 9036202892; **Mutthanallur:** Ph: 8970736606; **Madnayakhalli:** Ph: 9886230009; **Hoskote:** Ph: 9845028859; **Sira:** Ph: 8310660400. **For Franchisee Enquiry Contact: Ayush Kumar Sahu, Ph: 9993010283.**

Also Available At: Jayanagar: Sarathy, Ph: 41210047; Vishaals, Ph: 08022447285; Royal Mart, Ph: 8790311104; Anjana Superstores, Ph: 41301836; Kitchenmart, Ph: 26652885; Aravinda, Ph: 41301989;**Bankcolony:**Vardhaman Ind, Ph: 22428300;**Banashankari:**Varada Glass & Crky, Ph: 9980949316; Patel Agn, Ph: 26714285;Patel Ktchen Apl, Ph: 9079061706; Chamundi Ind, Ph: 26712633;**Bilekhalli:**Sree Pooja Ha, Ph: 9036919084; **Bommanahalli:**Sri Durga Ha, Ph: 9900674018;**Chamarjpet:**Vadirajstores, Ph: 41517646;**Devarachikkanahalli:**Sapna Ha, Ph: 9738732036;**Electronic City:**Dream Mart Hm, Ph: 9148934858;**Hosa Rd:**Maharaja Kw-9036400829;**Hosakota:**Dream Mart Hm-9964744480;**Isro Layout:**Bhumi Kitchen, Ph: 9916830850; **Jp Nagar:** Surya Kitchen World, Ph: 9449762988;**Kanakapura Rd:** Royal Mart, Ph: 28425777;**Padmanabnagar:**Royalmart, Ph: 9886088993;**Uthrahalli:**Royalmart, Ph: 26394114;Rme Super Market, Ph: 9964228208;**Mysore Road:**The Karnataka Metal Industry, Ph: 9449342727;**Ayyappanagar:**Top Mart Sm, Ph: 7204448111; **Babusapalya:**Karnataka Ha, Ph: 8105754544;**Basaveshwarnagar:**Bigday Hm, Ph: 9972517344; Mahaveer Ha, Ph: 9844173501; Modern Colln, Ph: 23583440;Aadhinath Kitchen Gal, Ph: 41220555;**Gayathri Ngr:**J.K.Steel, Ph: 23320853;**Giri Nagar:**Vidya Ent, Ph: 9449988650;Matahji Ha, Ph: 7019385120; **Bagalgunte:**Royal Mart, Ph: 9538000072;**Chandra Layout:**Rajguru Kw, Ph: 9513034351; Pavan Kw, Ph: 8618028319;**Ganganagar:**Salemindustries, Ph: 41284470;Patel Ind, Ph: 8050899296;**Hesargatta Main Rd:**Royal Mart, Ph: 28398200;**Horamavu:**Mamtha Ha, Ph: 8880050050;**Hrbr Layout:**Bhavani Ha, Ph: 9845916164;**Harlurur:** Vinayaka Ha, Ph: 7760531454:**Katriguppe:**Mk Metal Mart, Ph: 9035779199;**Kr Puram:**Srm Elect, Ph: 9845445748; Pooja Ele, Ph: 9738850503; **Boodhigere Rd:**New Royal Fresh, Ph: 9538038885; **Kamanhalli:**Ramdev Steel, Ph: 7259575732 ;Hm Traders, Ph: 9964797616;**Kasavanahalli:**Mathaji Ha, Ph: 8880796036;**Kunadanahalli:** New Prakash Ha, Ph: 7090444111; **Kengeri:**Falcon Hm, Ph: 7829999066;**Koramangala:**Sowbhagya Traders, Ph: 7337733887;**Kmr Swy Layout:**Patel Ha, Ph: 8951979665;**Laggere:**Top Mart, Ph: 9110246047;**Lnpura:**Arihanth Ent, Ph: 7899633338;**Malleshwaram:**Deviprasad Ha, Ph: 23564536;Bright Novelty, Ph: 23343505;**Mathikere:**M.Bhawarlals Inc, Ph: 41724740; Maharaja Agency, Ph: 41278050; **Kadugodi:**Little Wonder, Ph: 9961224224;**Madiwala:**Surya Ha, Ph: 9449635332;**Malleshpalya:**Bajrang Ha, Ph: 9449526463;New Bheru Ha, Ph: 9448680738;Ramdev Ha, Ph: 9035175860;Sri Bhagawathi Ha, Ph: 9590575427; Maa Ambe Ha, Ph: 8884198322; **Magadiroad:**Royal Mart, Ph: 23584498;**Annaporneshwari Nagar:**Deepak Ha, Ph: 9148912736;**M S Palya:**Royal Mart, Ph: 8147014079;**B Narayanpura:** Ph: Mart; Ph: 7676726487;**Rajajinagar:** R S Mart, Ph: 6363602929; Mahalakshmi Metal House, Ph: 23355994; Rathna Sales, Ph: 23375566; Dhanalakshmi Kitchen World, Ph: 41285801;Jayalakshmi Kw, Ph: 9844755146; Pooja Stl Cent, Ph: 23327014; **Rr Nagar:**Milan Ha, Ph: 28605619;Pavan Kg, Ph: 9739207043;**Tavarakere:**Mytri Mart Sm, Ph: 7996598838;**T C Palya:**Rhk Super Mkt, Ph: 9731668995; Big Day Sm, Ph: 8867604818; Karnataka Ha, Ph: 8105754544;**Tipsandra:**Pawar Ha, Ph: 9980517021;Milan Ha, Ph: 9986196375;Ramdev Ha, Ph: 7406901545;**Ulsoor:**Aishwaryapranam Ha, Ph: 9902788429;Pranam Steel Center, Ph: 9448053781;**Udaynagar:**Mother India-9036189765;**Venkatapura:**Pooja Kg-9900426176;**Vijayanagar:**Vijaylaxmi Kw, Ph: 9845022284; Mahendras, Ph: 23141126;Maruthi Ha, Ph: 8904689155;**Vidyarnapura:**Praksh Kw, Ph: 8050620877,Mahalakshmi Steel House, Ph: 9663375159;All Seasons Hm, Ph: 9946728736;**Whitefield:**Rolla Hm, Ph: 9148003448;Loyalcity, Ph: 7892565797;Royal Mart, Ph: 7079734574;**Yelahanka:**Royalmart, Ph: 41705760;Mutha Electricals, Ph: 22971920;Sai Kitchen World Ph: 9632811797; **Btm Layout:** Patel Agencies, Ph: 9482853401;**Tumkur:**N.R Metal Agency, Ph: 0816-2275003; Kavitha Kitchen Ware; Ph: 9538537166;Surya Metal Store, Ph: 9731351050;Tumkur Trade Centre, Ph: 9901432287; Dharshan Ha, Ph: 9632132567; Sudha Ha, Ph: 9964011253; **Gubbi:**Keerthi Gas Stove, Ph: 9686004169; **Tiptur:** Sri Sai Electronics, Ph: 8861432166;Srirama-Ent, Ph: 9880362018; Kumar And Kumar, Ph: 9141609900;**Turuvekere:**Sri Sai Electronics, Ph: 8861432166; **Pavgada:**Shivanagere Ha, Ph: 9880768236; Meenakshi Appl, Ph: 9880360326; **Sira:**Swamy Ent, Ph: 9741561491; Lakshmi Sreel, Ph: 9060434807; Mallikarjuna Ha, Ph: 8123206930; **Madhugiri:**Akshya Ha, Ph: 9141786066; Vinayaka Store, Ph: 9900219291; **Kunigal:**Karnataka Metal Stores, Ph: 9448550390; New Karnataka Steel Centre, Ph: 08132221548; Karnataka Ha, Ph: 8892197645; **Kgf**-Prakash Ha, Ph: 9845113454;**Bangarpet:** Kumar Stores, Ph: 9845935240; **Gauribidanur:**Sri Raju Ha, Ph: 9448249527; Dhighvijaya Elec, Ph: 7204757456;**Kanakapura:**Sri Kabbalamma Ha, Ph: 9880835508;**Kolar:**Reddy Ele, Ph: 9844472531;Rakesh Ele, Ph: 9880634555;Naveenprakash Ha, Ph: 9844997787;**Malur:**Srm Elec, Ph: 9845445748; Reddy Ele, Ph: 9844435121;**Vijayapura:** Rmcity, Ph: 9845164990;Reddy Ele, Ph: 9900336061;**Devanahalli:**New Sowmya Ele, Ph: 9141335210;**Chintamani:**Great India Ele, Ph: 9742963551;Lavanya Stores, Ph: 9242498294.

Available at: Pai INTERNATIONAL

ಹುಷಾರು, ನಿಮ್ಮ ಮನೆಯನ್ನೂ ಕಸಿದಾರು

ಬೆಂಗಳೂರು: ನೀವು ಕಷ್ಟಪಟ್ಟು ದುಡಿದು ಹಣ ಉಳಿಸಿ ಕಟ್ಟಿದ ಮನೆ ನಾಳೆ ಇನ್ಯಾರದೋ ಆಗಬಹುದು. ನ್ಯಾಯಾಲಯದ ಆದೇಶ ಪಡೆದು, ಪೊಲೀಸರ ಭದ್ರತೆಯೊಂದಿಗೆ ಬಂದು ನಿಮ್ಮ ಸ್ವಂತದ ಮನೆಯನ್ನು ಖಾಲಿ ಮಾಡಿಸಬಹುದು. ಇವೆಲ್ಲಾ ಸಾಧ್ಯವೇ ಇಲ್ಲ ಎಂದು ನೀವು ಅಂದುಕೊಂಡರೆ, ಅದು ಸುಳ್ಳಾದೀತು. ಜನ ಸಾಮಾನ್ಯರ ಜಮೀನು, ನಿವೇಶನ, ಮನೆ, ವಾಣಿಜ್ಯ ಸಂಕೀರ್ಣವನ್ನು ಅವರ ಗಮನಕ್ಕೆ ಬರದೇ ಇರುವ ರೀತಿಯಲ್ಲಿ ಕಬಳಿಸಿದ ನೂರಾರು ಉದಾಹರಣೆಗಳು ನಮ್ಮೆದುರು ಇದೆ. ನಾಲ್ಕೈದು ಮಂದಿಯ ಸಣ್ಣ ಜಾಲವೊಂದು ಬೆಂಗಳೂರಿನಲ್ಲೇ ಹೀಗೆ 117 ನಿವೇಶನ ಮತ್ತು ಕಟ್ಟಡಗಳನ್ನು ಕಬಳಿಸಿತ್ತು. 118ನೇ ನಿವೇಶನವನ್ನು ಕಬಳಿಸುವ ವೇಳೆ ಈ ಜಾಲ ಸಿಕ್ಕಿಬಿದ್ದಿತು.

ಶಾ ಹರಿಲಾಲ್ ಬಿಖಾಬಾಯ್ ಆ್ಯಂಡ್ ಕಂಪನಿಯು 1954ರಲ್ಲಿ, ನಗರದ ಯಶವಂತಪುರ ಬಳಿಯ ಗೋಕುಲ ರಸ್ತೆಯಲ್ಲಿ ನಿವೇಶನವೊಂದನ್ನು ಖರೀದಿಸಿತ್ತು. ಅಲ್ಲಿ ಸಣ್ಣ ಶೆಡ್ ಹೊರತುಪಡಿಸಿ, ನಿವೇಶನದ ಬಹುಪಾಲು ಖಾಲಿಯೇ ಇತ್ತು. ಅಂದಿನಿಂದಲೂ ನಿವೇಶನ ಆ ಕಂಪನಿಯ ಸುಪರ್ದಿಯಲ್ಲಿಯೇ ಇತ್ತು. ಕಂಪನಿಯ ಪ್ರವರ್ತಕ ಹರಿಲಾಲ್ ಮತ್ತು ಪಾಲುದಾರ ರವೀಂದ್ರ ಶಾ ಅವರು 2019–20ನೇ ಆರ್ಥಿಕ ಸಾಲಿನವರೆಗೆ ಬಿಬಿಎಂಪಿಗೆ ಆಸ್ತಿ ತೆರಿಗೆಯನ್ನೂ ಪಾವತಿಸಿದ್ದರು.

2020ರ ಒಂದು ದಿನ, ಆ ನಿವೇಶನವನ್ನು ತೆರವು ಮಾಡಿಸಲು ಇಬ್ಬರು ವ್ಯಕ್ತಿಗಳು ಜೆಸಿಬಿಯೊಂದಿಗೆ ಬಂದರು. ಆ ಇಬ್ಬರ ಭದ್ರತೆಗೆ ಪೊಲೀಸರೂ ಬಂದಿದ್ದರು. ಅದನ್ನು ಪ್ರಶ್ನಿಸಿದ ರವೀಂದ್ರ ಅವರ ಕೈಗೆ, ಸೆಂದಿಲ್ ಕುಮಾರ್ ಎಂಬುವವರು ಬೆಂಗಳೂರಿನ ಸಣ್ಣ ವ್ಯಾಜ್ಯಗಳ ನ್ಯಾಯಾಲಯದ ಆದೇಶದ ಪ್ರತಿಯೊಂದನ್ನು ನೀಡಿದ್ದರು.

ಸುಮಾರು 65 ವರ್ಷಗಳಿಂದ ತಮ್ಮ ಸುಪರ್ದಿಯಲ್ಲಿರುವ ಕಂಪನಿಯ ಕಟ್ಟಡ ಮತ್ತು ನಿವೇಶನ ಇನ್ಯಾರದ್ದೋ ಎಂದು ನ್ಯಾಯಾಲಯ ಆದೇಶ ನೀಡಿರುವುದನ್ನು ನೋಡಿ ರವೀಂದ್ರ ದಿಕ್ಕೆಟ್ಟರು. ಅವರು, ತಡ ಮಾಡದೆ ಕರ್ನಾಟಕ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದರು. ಇಂತಹ ಕಬಳಿಕೆ ಹಿಂದೆ ದೊಡ್ಡ ಜಾಲವೇ ಇದೆ ಎಂಬುದು ಅರ್ಜಿಯ ವಿಚಾರಣೆ ವೇಳೆ ಪತ್ತೆಯಾಯಿತು.

ಗೋಕುಲ ರಸ್ತೆಯಂತಹ ವಾಣಿಜ್ಯ ಕೇಂದ್ರದಲ್ಲಿ ಹಲವು ದಶಕಗಳಿಂದ ಖಾಲಿ ಇದ್ದ ನಿವೇಶನವು, ಭೂ ಮಾಫಿಯಾದವರ ಕಣ್ಸೆಳೆಯುವಂತಿತ್ತು. ವಕೀಲರಾದ ಬಿ. ಮಣಿ, ನಗರದ ಸಣ್ಣ ವ್ಯಾಜ್ಯಗಳ ನ್ಯಾಯಾಲಯದಲ್ಲಿ 2018ರ ಏಪ್ರಿಲ್ 26ರಂದು ಒಂದು ಅರ್ಜಿ (ಎಸ್‌.ಸಿ.678/2028) ಸಲ್ಲಿಸಿದ್ದರು. 'ಸದರಿ ನಿವೇಶನವು ನನ್ನ ಕಕ್ಷಿದಾರ ಸೆಂದಿಲ್ ಕುಮಾರ್ ಅವರಿಗೆ ಸೇರಿದ್ದು, ಜಿಪಿಎ ಮೂಲಕ ಅವರು ಅದನ್ನು ಪಡೆದುಕೊಂಡಿದ್ದರು. ಈ ನಿವೇಶನವನ್ನು ಅರುಣ ಎಂಬುವವರಿಗೆ ಬಾಡಿಗೆ ಕರಾರಿನ ಮೇಲೆ ನೀಡಲಾಗಿತ್ತು. ಅವರು ಕರಾರಿನ ಷರತ್ತುಗಳನ್ನು ಉಲ್ಲಂಘಿಸಿದ್ದು, ನಿವೇಶನ ಖಾಲಿ ಮಾಡಿಸಿಕೊಡಬೇಕು' ಎಂದು ಕೋರಿದ್ದರು. ನ್ಯಾಯಾಲಯದಲ್ಲಿ ಅರ್ಜಿಯನ್ನು ವಿಚಾರಣೆಗೆ ನಿಗದಿ ಮಾಡಲಾಯಿತು.

ತಿಂಗಳೊಂದರಲ್ಲೇ (2018ರ ಮೇ 31ರಂದು) ನ್ಯಾಯಾಲಯಕ್ಕೆ ಮಣಿ ಪ್ರಮಾಣ ಪತ್ರ ಸಲ್ಲಿಸಿ, 'ನನ್ನ ಕಕ್ಷಿದಾರ ಸೆಂದಿಲ್ ಕುಮಾರ್ ಮತ್ತು ಪ್ರತಿವಾದಿ ಅರುಣ ರಾಜಿ ಮಾಡಿಕೊಂಡಿದ್ದಾರೆ. ನಿವೇಶನ ತೆರವಿಗೆ ಅವಕಾಶ ಮಾಡಿಕೊಡಬೇಕು' ಎಂದು ಅರಿಕೆ ಮಾಡಿಕೊಂಡಿದ್ದರು. ಅರುಣ ಪರ ವಕೀಲ ವೆಂಕಟೇಶ ಎಂಬುವವರೂ ಇದೇ ತರನಾದ ಪ್ರಮಾಣ ಪತ್ರ ಸಲ್ಲಿಸಿದ್ದರು. ರಾಜಿಯನ್ನು ಒಪ್ಪಿಕೊಂಡ ನ್ಯಾಯಾಲಯ ಅರ್ಜಿಯನ್ನು ವಿಲೇವಾರಿ ಮಾಡಿತ್ತು. ರಾಜಿ ಪ್ರಮಾಣ ಪತ್ರದ ಆಧಾರದಲ್ಲಿ ನಿವೇಶನ ತೆರವಿಗೆ ಸೆಂದಿಲ್ ಕುಮಾರ್ ಆದೇಶ ಪಡೆದುಕೊಂಡಿದ್ದರು.

ರವೀಂದ್ರ ಅವರ ರಿಟ್ ಅರ್ಜಿಯ ವಿಚಾರಣೆ ವೇಳೆ ಅವರ ವಕೀಲರು, ಸೆಂದಿಲ್ ಕುಮಾರ್ ಹೆಸರಿನಲ್ಲಿನ ಜಿಪಿಎ ಮತ್ತು ಅರುಣ ಹೆಸರಿನಲ್ಲಿನ ಬಾಡಿಗೆ ಕರಾರು ಪತ್ರ ನಕಲಿ ಎಂದು ವಾದ ಮಂಡಿಸಿದರು. ಈ ಪತ್ರಗಳ ನೈಜತೆಯನ್ನು ಪರಿಶೀಲಿಸಲು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು ಸಣ್ಣ ವ್ಯಾಜ್ಯಗಳ ನ್ಯಾಯಾಲಯಗಳ ರಿಜಿಸ್ಟ್ರಾರ್‌ಗೆ ಸೂಚಿಸಿದರು. ಅವು ನಕಲಿ ಎಂದು ವರದಿ ಬಂದ ನಂತರ, ಸೆಂದಿಲ್ ಕುಮಾರ್‌ಗೆ ನೋಟಿಸ್ ನೀಡಲಾಯಿತು. ಆದರೆ ಸೆಂದಿಲ್ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಮತ್ತು ತಲೆಮರೆಸಿಕೊಂಡರು.

ಇವೆಲ್ಲವನ್ನೂ ಪರಿಗಣಿಸಿದ ಹೈಕೋರ್ಟ್ ಪೀಠವು, 'ಪ್ರತಿವಾದಿ ಸೆಂದಿಲ್ ಕುಮಾರ್ ತಲೆಮರೆಸಿಕೊಂಡಿರುವುದನ್ನು ಗಮನಿಸಿದರೆ ಇಲ್ಲಿ ವಂಚನೆ ನಡೆದಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಹೀಗಾಗಿ ರವೀಂದ್ರ ಅವರ ಸುಪರ್ದಿಗೇ ನಿವೇಶನವನ್ನು ಮರಳಿಸಬೇಕು' ಎಂದು ತೀರ್ಪು ನೀಡಿತ್ತು. ಈ ತೀರ್ಪಿನ ಜತೆಗೆ 'ಅಧೀನ ನ್ಯಾಯಾಲಯದಲ್ಲಿ ಅತ್ಯಂತ ತ್ವರಿತವಾಗಿ ಆದೇಶ ಪಡೆದಿರುವುದೂ ಅನುಮಾನಕ್ಕೆ ಎಡೆಮಾಡಿದೆ. ಹೀಗಾಗಿ ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಸಣ್ಣ ವ್ಯಾಜ್ಯಗಳ ನ್ಯಾಯಾಲಯಗಳ ರಿಜಿಸ್ಟ್ರಾರ್‌ಗೆ ಸೂಚಿಸಿತ್ತು.

2016–2019ರ ಮಧ್ಯೆ, ಇದೇ ರೀತಿಯಲ್ಲಿ ನಿವೇಶನ/ಕಟ್ಟಡ ಕಬಳಿಸುವ 117 ಪ್ರಕರಣಗಳು ನಡೆದಿರುವುದು ತನಿಖೆಯಲ್ಲಿ ಪತ್ತೆಯಾಯಿತು. ಇವುಗಳಲ್ಲಿ 71 ಪ್ರಕರಣಗಳಲ್ಲಿ ಇದೇ ಸೆಂದಿಲ್ ಕುಮಾರ್, ಮಣಿ ಬಿ., ಅರುಣ ಮತ್ತು ವೆಂಕಟೇಶ್ ವಾದಿ–ಪ್ರತಿವಾದಿಗಳಾಗಿ ನ್ಯಾಯಾಲಯಕ್ಕೆ ದಾವೆ ಹೂಡಿರುವುದು ಮತ್ತು ರಾಜಿ ಪ್ರಮಾಣ ಪತ್ರ ಸಲ್ಲಿಸಿ ತಮ್ಮ ಪರವಾಗಿ ಆದೇಶ ಪಡೆದಿರುವುದು ಪತ್ತೆಯಾಯಿತು. 22 ಪ್ರಕರಣಗಳಲ್ಲಿ ಸೆಂದಿಲ್ ಅರ್ಜಿದಾರನಾಗಿದ್ದರೆ, 31 ಪ್ರಕರಣಗಳಲ್ಲಿ ಅರುಣ ಅರ್ಜಿದಾರನಾಗಿದ್ದರು. ಈ ಎಲ್ಲ ಪ್ರಕರಣಗಳನ್ನೂ ಒಳಗೊಂಡಂತೆ 100ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಮಣಿ ಇಲ್ಲವೇ ವೆಂಕಟೇಶ್ ವಕಾಲತ್ತು ವಹಿಸಿದ್ದರು ಎಂಬುದು ತನಿಖೆಯಲ್ಲಿ ಗೊತ್ತಾಯಿತು.


IN THE HIGH COURT OF KARNATAKA AT BENGALURU
DATED THIS THE 4th DAY OF NOVEMBER, 2020
BEFORE
THE HON'BLE MR. JUSTICE KRISHNA S.DIXIT
WRIT PETITION NO.7711 OF 2020 (GM-CPC)
BETWEEN:
SHAH HARILAL BHIKHABHAI & COMPANY,
...
affidavit and the accompanying documents remains unrebutted.
(b) In respect of subject property the suit in S.C.No.678/2018 was filed by 1st respondent-Mr.B.Mani represented by 3rd respondent-GPA Holder Mr.Sendil Kumar against the 2nd respondent-Mr.Arun on 26.04.2018; strangely a compromise decree has been obtained on 31.05.2018, absolutely without any explanation for this rocket speed, even when the ink on the pleadings had not yet dried up; what intrigues the mind of this court is that the learned Judge of the Court below has not given a thought to this doubtful swiftness with which the parties to the suit have acted.
(c) Apparently, petitioner a registered partnership ... stakeholder in the matter and that he has ... the suit.

ಹರಿಲಾಲ್ ಬಿಖಾಬಾಯ್ ಕಂಪನಿಯ ನಿವೇಶನಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿದ್ದ ತೀರ್ಪಿನಲ್ಲಿ, ಅಧೀನ ನ್ಯಾಯಾಲಯಗಳಲ್ಲಿ ಅತ್ಯಂತ ಕ್ಷಿಪ್ರವಾಗಿ ಆದೇಶ ನೀಡಲಾಗಿದೆ ಎಂಬುದರ ಬಗ್ಗೆ ಅನುಮಾನ ವ್ಯಕ್ತಪಡಿಸಿತ್ತು

ಸರ್ಕಾರಿ ಸಿಬ್ಬಂದಿಯೂ ಭಾಗಿ

ಇನ್ನೂ 14 ಮಂದಿ ಈ ಜಾಲದಲ್ಲಿ ಭಾಗಿಯಾಗಿದ್ದರು. ಹಿಂದಿನ ಬಿಬಿಎಂಪಿ, ಬಿಡಿಎ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು, ನ್ಯಾಯಾಲಯದ ಸಿಬ್ಬಂದಿಯೂ ಈ ವಂಚನೆಯಲ್ಲಿ ಭಾಗಿಯಾಗಿದ್ದರು ಎಂಬುದನ್ನು ಸಿಐಡಿ ಪತ್ತೆ ಮಾಡಿತ್ತು.

ಈ 117 ಪ್ರಕರಣಗಳಲ್ಲೂ ಮೂಲ ದಾಖಲೆಗಳನ್ನು ಮರೆಮಾಚಿ, ನ್ಯಾಯಾಲಯದಿಂದ ಆದೇಶ ಪಡೆದುಕೊಳ್ಳಲಾಗಿತ್ತು. ಮೂಲ ದಾಖಲೆಗಳನ್ನು ನೀಡಿ ಎಂದು ಸಂಬಂಧಿತ ಇಲಾಖೆ ಅಥವಾ ಪ್ರಾಧಿಕಾರವನ್ನು ನ್ಯಾಯಾಲಯ ಕೋರಿದಾಗ, 'ದಾಖಲೆ ಲಭ್ಯವಿಲ್ಲ' ಎಂದೇ ಬಹುತೇಕ ಪ್ರಕರಣಗಳಲ್ಲಿ ಉತ್ತರ ಬಂದಿತ್ತು. ಈ ಜಾಲದಲ್ಲಿ ಭಾಗಿಯಾಗಿದ್ದ ಅಧಿಕಾರಿಗಳು ಉದ್ದೇಶಪೂರ್ವಕವಾಗಿಯೇ ಈ ರೀತಿ ಉತ್ತರ ನೀಡಿದ್ದರು ಎಂದು ಸಿಐಡಿ ಹೇಳಿತ್ತು.

ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಪ್ರಕರಣದ ತನಿಖೆ ನಡೆಯುತ್ತಿದ್ದು, ಈವರೆಗೆ 18 ಮಂದಿಯನ್ನು ಸಿಐಡಿ ಬಂಧಿಸಿದೆ. 51 ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಆರೋಪ ಪಟ್ಟಿಯನ್ನೂ ಸಲ್ಲಿಸಿದೆ. ಈ ಜಾಲ ಎಷ್ಟು ಪ್ರಬಲವಾಗಿ ಇದೆಯೆಂದರೆ, ತನಿಖೆಯ ಯಾವ ಅಂಶವೂ ಮಾಧ್ಯಮಗಳಿಗೆ ಸೋರಿಕೆಯಾಗದ ರೀತಿಯಲ್ಲಿ ತಡೆಯಾಜ್ಞೆ ತಂದಿದೆ. ಪರಿಣಾಮವಾಗಿ ಸಿಐಡಿಯು 51 ಪ್ರಕರಣಗಳಲ್ಲೂ ಆರೋಪ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದೆ.

ನಾಗಯ್ಯ ಆಸ್ತಿ ನಿಂಗಯ್ಯಗೆ ಹೋಯ್ತು!

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಕೆರೆಕತ್ತಿಗನೂರು ಗ್ರಾಮದ ಜಮೀನೊಂದಕ್ಕೆ ಸಂಬಂಧಿಸಿದ ಪ್ರಕರಣವಿದು. ಅಣ್ಣತಮ್ಮಂದಿರಾದ ನಾಗಯ್ಯ ಮತ್ತು ನಿಂಗಯ್ಯ ಅವರು ತಮಗೆ ಪಿತ್ರಾರ್ಜಿತವಾಗಿ ಬಂದಿದ್ದ ಜಮೀನೀನ ಪೈಕಿ ತಲಾ 6 ಎಕರೆ 30 ಗುಂಟೆಯಂತೆ ವಿಭಾಗ ಪತ್ರ ಮಾಡಿಕೊಂಡಿದ್ದರು. ಅಣ್ಣ ನಾಗಯ್ಯ ಮತ್ತು ಅವರ ಪತ್ನಿ ಅಕಾಲಿಕವಾಗಿ ಮೃತಪಟ್ಟಿದ್ದರು ಮತ್ತು ಅವರ 12 ವರ್ಷದ ಮಗಳು ಕಲಾ ಒಬ್ಬರಷ್ಟೇ ಉಳಿದಿದ್ದರು. ಆಕೆಗೆ ಸುಮಾರು 20 ವರ್ಷವಾದಾಗ ಜಮೀನನ್ನು ತನ್ನ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಿದ್ದರು. ಆದರೆ ನಾಗಯ್ಯ ಅವರ ಹೆಸರಿನಲ್ಲಿ ಯಾವ ಜಮೀನೂ ಇಲ್ಲ ಎಂದು ತಹಶೀಲ್ದಾರರು ಹಿಂಬರಹ ನೀಡಿದ್ದರು. ಜತೆಗೆ ತಾವು ಉಲ್ಲೇಖಿಸಿರುವ ಜಮೀನು ನಿಂಗಯ್ಯ ಎಂಬುವವರ ಹೆಸರಿನಲ್ಲಿದೆ ಎಂಬುದನ್ನು ತಿಳಿಸಿದ್ದರು.

ಕಲಾ ಅವರು ತಹಶೀಲ್ದಾರರ ನ್ಯಾಯಾಲಯಕ್ಕೆ ತಕರಾರು ಅರ್ಜಿ ಸಲ್ಲಿಸಿದರು. 'ಪಹಣಿ ದಾಖಲೆ ಮತ್ತು ನೋಂದಣಿಗಳಲ್ಲಿ ನನ್ನ ತಂದೆಯ ಹೆಸರು, 'ನಾಗಯ್ಯ' ಎಂಬುದನ್ನು ತಿದ್ದಲಾಗಿದೆ. 'ನಾ' ಎಂಬ ಅಕ್ಷರವನ್ನು ಬ್ಲೇಡ್‌ನಿಂದ ಕೆರೆದು, 'ನಿಂ' ಎಂದು ಕಾಣುವಂತೆ ಮಾಡಲಾಗಿದೆ. ಈ ಮೂಲಕ ನನ್ನ ಚಿಕ್ಕಪ್ಪ ನಿಂಗಯ್ಯ ಅವರು, ನನ್ನ ತಂದೆಯ ಜಮೀನನ್ನು ಕಬಳಿಸಿದ್ದಾರೆ. ಇದನ್ನು ಸರಿಪಡಿಸಿ, ಜಮೀನನ್ನು ನನ್ನ ಹೆಸರಿಗೆ ಮಾಡಿಕೊಡಿ' ಎಂದು ಕೋರಿದ್ದರು. ಹಲವು ವರ್ಷಗಳ ವಿಚಾರಣೆಯ ನಂತರ ಅವರ ಅರ್ಜಿ ತಿರಸ್ಕೃತವಾಯಿತು. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲೂ, ವರ್ಷಗಳ ಅಲೆದಾಟದ ನಂತರ ಅವರ ಅರ್ಜಿ ತಿರಸ್ಕೃತವಾಯಿತು.

2018ರ ವೇಳೆಗೆ ಕಲಾ ಅವರ ಮಗ ಮಂಜುನಾಥ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅವರ ತಾತನ ಹೆಸರಿಗೆ ಜಮೀನು ಹಿಸ್ಸೆ ಆಗಿದ್ದ ದಾಖಲೆ, ಕಂದಾಯ ಪಾವತಿ ಮಾಡುವಂತೆ ಅವರಿಗೆ ಬಂದಿದ್ದ ನೋಟಿಸ್, ಕಂದಾಯ ಪಾವತಿ ರಶೀದಿಗಳನ್ನೂ ಅರ್ಜಿಯಲ್ಲಿ ಸಲ್ಲಿಸಿದ್ದರು. ಜತೆಗೆ ತಿರುಚಲಾಗಿದ್ದ ದಾಖಲೆಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲು ನಿರ್ದೇಶನ ನೀಡಿ ಎಂದು ಕೋರಿದ್ದರು. ಈ ಮಧ್ಯೆ ನಿಂಗಯ್ಯ ಕುಟುಂಬದವರು ಜಮೀನು ಮಾರಾಟ ಮಾಡಲು ಯತ್ನಿಸಿದಾಗ, ಹೈಕೋರ್ಟ್ ತಡೆ ನೀಡಿತ್ತು. ಆದರೆ ವಿಧಿವಿಜ್ಞಾನ ಪರೀಕ್ಷೆಗೆ ಆದೇಶ ನೀಡಿರಲಿಲ್ಲ. ಈ ಮಧ್ಯೆ ಕೋವಿಡ್ ಬಂದ ಕಾರಣ, ಹಲವು ವರ್ಷ ವಿಚಾರಣೆ ನಡೆಯಲೇ ಇಲ್ಲ.

ಈ ಮಧ್ಯೆ ಕೆರೆಕತ್ತಿಗನೂರಿನ ಜಮೀನುಗಳನ್ನೂ ಒಳಗೊಂಡು, ಪಕ್ಕದ ಸುಮಾರು ಹತ್ತು ಹಳ್ಳಿಗಳ ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಸ್ವಾಧೀನಕ್ಕೆ ತೆಗೆದುಕೊಂಡು ಗಟ್ಟಿಗೆರೆ–ಕಾಸರಘಟ್ಟ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿತು. ವಿವಾದಿತ ಜಮೀನಿನಿಂದ 200 ಮೀಟರ್‌ನಷ್ಟು ಹತ್ತಿರದವರೆಗೂ ಕೈಗಾರಿಕಾ ಪ್ರದೇಶ ಬಂದಿತು. ಬೆಂಗಳೂರು–ಮುಂಬೈ ಹೆದ್ದಾರಿಯಿಂದ 300 ಮೀಟರ್‌ನಷ್ಟೇ ದೂರವಿದ್ದ ಈ ಜಮೀನಿನ ಮಾರುಕಟ್ಟೆ ಮೌಲ್ಯವೇ ಎಕರೆಗೆ ₹4 ಕೋಟಿಯಿಂದ ₹5 ಕೋಟಿಯಷ್ಟಾಯಿತು.

2021ರ ವೇಳೆಗೆ ಪ್ರಾದೇಶಿಕ ಪಕ್ಷವೊಂದರ ಶಾಸಕರೊಬ್ಬರ ಆಪ್ತರು, ಈ ಜಮೀನಿಗೆ ಹೊಂದಿಕೊಂಡಂತೆಯೇ ಇದ್ದ ಮತ್ತೊಂದು ಜಮೀನನ್ನು ಖರೀದಿಸಿದರು. ಮಂಜುನಾಥ್ ಅವರ ಜಮೀನು ವಿವಾದಕ್ಕೆ ಗುರಿಯಾಗಿದ್ದ ಕಾರಣ, ಆ ಇನ್ನೊಂದು ಜಮೀನಿಗೆ ರಸ್ತೆ ಇಲ್ಲದಂತಾಯಿತು. ಪ್ರಕರಣ ವಾಪಸ್ ಪಡೆಯುವಂತೆ ಶಾಸಕರ ಆಪ್ತರು ಮತ್ತು ಕೆಲ ರೌಡಿಶೀಟರ್‌ಗಳಿಂದ ಮಂಜುನಾಥ್ ಅವರ ಮೇಲೆ ಒತ್ತಡ ಹೆಚ್ಚಾಯಿತು.

ಅಪಹರಣ, ಕೊಲೆ ಬೆದರಿಕೆ...

ಭೂಮಾಫಿಯಾದವರು ರಾಜಿ ಮಾತುಕತೆಗೆ ಕರೆದು ಹೇಗೆ ಜಮೀನನ್ನು ಕಬಳಿಸಿದರು ಎಂಬುದನ್ನು ಮಂಜುನಾಥ್ ಅವರು 'ಪ್ರಜಾವಾಣಿ'ಗೆ ವಿವರಿಸಿದರು.

'ರಾಜಿ ಮಾತುಕತೆಗೆ ಎಂದು ನೆಲಮಂಗಲದ ಸಮೀಪದ ಶೆಡ್ ಒಂದಕ್ಕೆ ನಮ್ಮನ್ನು ಕರೆದಿದ್ದರು. ನಮ್ಮ ಆಪ್ತರೊಬ್ಬರ ಮೂಲಕ ನಮ್ಮನ್ನು ಕರೆಸಲಾಗಿತ್ತು. ನಾನು, ನನ್ನ ತಾತ ಮತ್ತು ತಂದೆ ಹೋಗಿದ್ದೆವು. ನನ್ನ ಹೆಂಡತಿ ಮತ್ತು ಎರಡು ವರ್ಷದ ಮಗು ಮನೆಯಲ್ಲಿದ್ದರು. ನಾವು ಅಲ್ಲಿಗೆ ಹೊಗುತ್ತಿದ್ದಂತೆಯೇ ನಮ್ಮ ಆಪ್ತರಿಗೆ ನಮ್ಮೆದುರೇ ₹1.50 ಕೋಟಿ ನೀಡಿ, ಹೊರಗೆ ಕಳುಹಿಸಿದರು. ನಮಗೆ ಒಂದು ವಿಡಿಯೊ ಕಾಲ್ ತೋರಿಸಲಾಯಿತು. ಕೆಲವರು ನಮ್ಮ ಮನೆಗೆ ನುಗ್ಗಿ, ನನ್ನ ಹೆಂಡತಿ ಮತ್ತು ಮಗುವನ್ನು ಒತ್ತೆಯಾಳಾಗಿ ಇರಿಸಿಕೊಂಡಿದ್ದರು. ಹೈಕೋರ್ಟ್‌ನಲ್ಲಿನ ಪ್ರಕರಣವನ್ನು ತಕ್ಷಣವೇ ವಾಪಸ್ ಪಡೆಯಬೇಕು ಇಲ್ಲವೇ ಮಗುವನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದರು. ಅನಿವಾರ್ಯವಾಗಿ ಪ್ರಕರಣ ವಾಪಸ್ ಪಡೆದೆ' ಎನ್ನುತ್ತಾರೆ ಮಂಜುನಾಥ್.

'6 ಎಕರೆ 20 ಗುಂಟೆ ಜಮೀನಿನ ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ಹೋಲಿಸಿದರೆ, ನಮಗೆ ಕೇವಲ 10 ಗುಂಟೆಯಷ್ಟು ಹಣ ನೀಡಿ ಸುಮ್ಮನಾಗಿಸಿದರು. ಕೆಲ ದಿನಗಳ ನಂತರ ನಾನು ಪೊಲೀಸರಿಗೆ ದೂರು ನೀಡಿದೆ. ಆದರೆ ಏನೂ ಆಗಿಲ್ಲ' ಎಂದು ಅಸಹಾಯಕತೆ ತೋಡಿಕೊಂಡರು.

2021–22ರ ಹೊತ್ತಿಗೆ ಹೈಕೋರ್ಟ್‌ನಲ್ಲಿ ಈ ಪ್ರಕರಣ ನಿರ್ಣಾಯಕ ಘಟ್ಟಕ್ಕೆ ಬಂದಿತ್ತು. ಇದೇ ವೇಳೆಗೆ ನಿಂಗಯ್ಯ ಅವರ ಕುಟುಂಬದ ರಾಮಣ್ಣ 'ಹಿಟ್ ಅಂಡ್ ರನ್' ಅಪಘಾತದಲ್ಲಿ ಮೃತಪಟ್ಟರು. ಒಂದೆರಡೇ ತಿಂಗಳಲ್ಲಿ ಮಂಜುನಾಥ್ ಸಹ ಹೈಕೋರ್ಟ್‌ನಲ್ಲಿ ತಮ್ಮ ಪ್ರಕರಣವನ್ನು ಹಿಂಪಡೆದರು. ನಿಂಗಯ್ಯ ಅವರ ಕುಟುಂಬದವರು ವಿವಾದಿತ ಜಮೀನಿನ ಬಹುಪಾಲು ಜಾಗವನ್ನು ಶಾಸಕರ ಆಪ್ತರಿಗೆ ಮಾರಾಟ ಮಾಡಿದರು. ಆದರೆ ವಾಸ್ತವದಲ್ಲಿ ಮಂಜುನಾಥ್ ಅವರಿಗೆ ಬೆದರಿಕೆ ಹಾಕಿ, ಪ್ರಕರಣ ವಾಪಸ್ ಪಡೆದುಕೊಳ್ಳುವಂತೆ ಮಾಡಲಾಗಿತ್ತು.

ಆದರೆ, ಹೀಗೆ ಮೂಲ ದಾಖಲೆಗಳನ್ನು ತಿದ್ದಿದ ಸಂದರ್ಭದಲ್ಲೂ ಜನ ಸಾಮಾನ್ಯರನ್ನು 'ಭೂ ಸುರಕ್ಷಾ' ಕಾಪಾಡುತ್ತದೆ ಎನ್ನುತ್ತಾರೆ ಸಚಿವ ಕೃಷ್ಣ ಬೈರೇಗೌಡ. ರಾಜ್ಯದ ಎಲ್ಲ ಜಮೀನುಗಳಿಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಈಗ ಸ್ಕ್ಯಾನಿಂಗ್ ಮಾಡಲಾಗುತ್ತಿದೆ. ಅವುಗಳನ್ನು ತಿದ್ದಿರುವುದು ಮತ್ತು ತಿರುಚಿರುವುದರ ಬಗ್ಗೆ ಸಣ್ಣ ಅನುಮಾನ ಮೂಡಿದರೂ, ಅವುಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲು ಆದೇಶಿಸಲಾಗಿದೆ. ತಿದ್ದಿರುವುದು ಖಚಿತವಾದರೆ ಅವುಗಳನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ದಾಖಲೆಯೇ ನಕಲಿಯಾಗಿದ್ದರೆ, ಅವುಗಳನ್ನು ಶಾಶ್ವತವಾಗಿ ನಾಶ ಮಾಡಲಾಗುತ್ತದೆ. ಅವುಗಳಿಗೆ ಸಂಬಂಧಿಸಿದ ವರದಿಯನ್ನು ಕಾಪಿಟ್ಟುಕೊಳ್ಳಲಾಗುತ್ತದೆ. ಅರ್ಜಿದಾರರು ಕೋರಿದ ಸಂದರ್ಭದಲ್ಲೂ ವಿಧಿವಿಜ್ಞಾನ ಪರೀಕ್ಷೆ ನಡೆಸಲು ಅವಕಾಶ ಮಾಡಿಕೊಡಲಾಗುತ್ತದೆ. ಇದರಿಂದ ಜನ ಸಾಮಾನ್ಯರಿಗೆ ಬಹಳಷ್ಟು ಅನುಕೂಲವಾಗಲಿದೆ ಎಂಬುದು ಅವರ ವಿವರಣೆ.

ಭೂಮಾಫಿಯಾದ ಮಾಯಾಜಾಲ

ಒಂದನೇ ಪುಟದಿಂದ...

ಇದಕ್ಕಾಗಿ, ಭೂ ದಾಖಲೆಗಳ ತಿದ್ದುವಿಕೆ, ಸ್ವಾತಂತ್ರ್ಯ ಪೂರ್ವದಲ್ಲಿಯೋ ಅಥವಾ ಮೈಸೂರು ಮಹಾರಾಜರಿಂದ ಮಂಜೂರಾಗಿದೆ ಎಂಬಂತೆ ನಕಲಿ ದಾಖಲೆ ಸೃಷ್ಟಿ, ದಾಖಲೆಗಳನ್ನೇ ಕಣ್ಮರೆ ಮಾಡುವ ಕೈಚಳಕ ಪ್ರದರ್ಶಿಸುವ ಭೂಮಾಫಿಯಾದ ಗುಂಪು ಸಕ್ರಿಯವಾಗಿದೆ.

ಬೆಂಗಳೂರಿನಲ್ಲಷ್ಟೇ ಮೊದಲು ಪ್ರಭಾವಶಾಲಿಯಾಗಿದ್ದ ಭೂಗಳ್ಳರ ಕೂಟ, ವಿವಿಧ ಜಿಲ್ಲೆಗಳಿಗೂ ವ್ಯಾಪಿಸಲಾರಂಭಿಸಿದೆ. ಬೆಂಗಳೂರು ಮಗ್ಗುಲಿನಲ್ಲಿರುವ ನಗರ–ಪಟ್ಟಣ ಪ್ರದೇಶಗಳಿಗೂ ತನ್ನ ಕಬಂಧಬಾಹು ಚಾಚುತ್ತಿರುವ ದುಷ್ಟಕೂಟ, ಸರ್ಕಾರಿ ಹಾಗೂ ಬಡವರ ಭೂಮಿಯನ್ನೇ ಗುರಿಯಾಗಿಸಿಕೊಂಡು ಕಾರ್ಯಪ್ರವೃತ್ತವಾಗಿದೆ.

ರಾಜಧಾನಿಯನ್ನು ಒಂದು ಕಾಲದಲ್ಲಿ ಆಳುತ್ತಿದ್ದ ಭೂಗತ ಜಗತ್ತಿನ ರೌಡಿಗಳು, ಡಾನ್‌ಗಳು ಭೂ ಕಬಳಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ತಮ್ಮ ಪಾತಕ ಕೃತ್ಯಕ್ಕಾಗಿ ಕೊಲೆ, ಹಲ್ಲೆಗೂ ಹೇಸದ ಈ ರೌಡಿಗಳಿಗೆ ಪೊಲೀಸರ ಬೆಂಬಲವೂ ಸಿಗುತ್ತಿತ್ತು. ಕಾಲಾನಂತರದಲ್ಲಿ ಮಚ್ಚು, ಲಾಂಗ್, ರಿವಾಲ್ವರ್ ಬಿಟ್ಟು ಮೆತ್ತನೆ ದಾರಿ ಹಿಡಿದ ರೌಡಿಗಳು, ರಾಜಕಾರಣಿಗಳಾಗಿ ಬದಲಾದವರು ಇದರ ಮೇಲೆ ಹಿಡಿತ ಸಾಧಿಸಿದರು. ಒಂದು ಕಾಲದಲ್ಲಿ ರೌಡಿ ಜಗತ್ತಿನ ನಂಟಿದ್ದು, ಈಗ ಪ್ರಭಾವಿಗಳಾಗಿ ಗುರುತಿಸಿಕೊಂಡವರು ಭೂಮಾಫಿಯಾದ ಮೇಲೆ ಈಗಲೂ ಹಿಡಿತ ಸಾಧಿಸಿರುವುದು ರಹಸ್ಯವೇನಲ್ಲ. ಅದಕ್ಕಾಗಿ, ವಿಶೇಷ ಪತ್ತೇದಾರಿಕೆ ಮಾಡಬೇಕಿಲ್ಲ.

ಈಗಲೂ ನಾನಾ ರೀತಿಯ ಭೂಗಳವು ನಡೆಯುತ್ತಿದ್ದು, ಅದರ ಮುಂಚೂಣಿಯಲ್ಲಿ ಇರುವವರು ರಿಯಲ್ ಎಸ್ಟೇಟ್, ದಲ್ಲಾಳಿಗಳು, ವಕೀಲರು ಇದ್ದಾರೆ. ಅವರ ಬೆನ್ನ ಹಿಂದೆ ಇರುವವರು ರಾಜಕೀಯ ಪ್ರಭಾವಿಗಳೇ ಆಗಿರುತ್ತಾರೆ. ಹೀಗಾಗಿಯೇ, ಸಬ್ ರಿಜಿಸ್ಟ್ರಾರ್, ಕಂದಾಯ ಅಧಿಕಾರಿ, ಕೆಎಎಸ್ ಹಾಗೂ ಐಎಎಸ್ ಅಧಿಕಾರಿಗಳು, ಪೊಲೀಸ್ ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ಇದರಲ್ಲಿ ಭಾಗಿಯಾಗುವುದು ಸಾಮಾನ್ಯ ಎಂಬಂತಾಗಿದೆ.

ಇಂತಹ ಭೂಗಳವಿನ ಹಿಂದಿನ ಕಾಣದ ಕೈಗಳ ಹುಡುಕಾಟಕ್ಕೆ ಮುಂದಾದ 'ಪತ್ರಿಕೆ'ಗೆ ದಿಗ್ಭ್ರಮೆ ಮೂಡಿಸುವಂತಹ ಹಲವು ಪ್ರಕರಣಗಳು ಸಿಕ್ಕಿದವು. ಇಂತಹದೇ ಸಾಮ್ಯತೆ ಇರುವ ನೂರಾರು ಪ್ರಕರಣಗಳು ನಡೆಯುತ್ತಲೇ ಇದ್ದು, ಕಾನೂನಿನ ಚಕ್ರಕ್ಕೆ ಸಿಕ್ಕಿಹಾಕಿಕೊಂಡು, ಶಿಕ್ಷೆ ಅನುಭವಿಸಿದ ಪ್ರಕರಣಗಳನ್ನಷ್ಟೇ ಇಲ್ಲಿ ಸಾಕ್ಷೀಕರಿಸುವ ಯತ್ನ ಮಾಡಲಾಗಿದೆ. ದೂರನ್ನೇ ಕೊಡದ ಪ್ರಕರಣಗಳು, ಹಣ, ಭಯದ ಕಾರಣಕ್ಕೆ ರಾಜಿಯಾದ ಪ್ರಕರಣಗಳು, ರೌಡಿಸಂ–ಪ್ರಭಾವಿ ರಾಜಕಾರಣಿಗಳ ಒತ್ತಡದಿಂದ ಮುಚ್ಚಿ ಹೋದ ಪ್ರಕರಣಗಳು ಸಮಾಧಿ ಸೇರಿವೆ. ಅವು ಸಮಾಧಿಯಿಂದ ಎದ್ದು ಬಂದರಷ್ಟೇ ಭೂ ಸಂತ್ರಸ್ತರಿಗೆ ನ್ಯಾಯ ಸಿಕ್ಕಿ, ಭೂಗಳ್ಳರಿಗೆ ಶಿಕ್ಷೆಯಾಗಬಹುದು.

ಇಂತಹ ಅಕ್ರಮಗಳಿಗೆಲ್ಲ ಕಡಿವಾಣ ಹಾಕಿ, ಜನರಿಗೆ ನೆರವಾಗಲು ರಾಜ್ಯ ಸರ್ಕಾರವು 'ಭೂಸುರಕ್ಷಾ' ಎಂಬ ಉಪಕ್ರಮವನ್ನು ಆರಂಭಿಸಿದೆ. ದಾಖಲೆಗಳನ್ನೆಲ್ಲಾ ಡಿಜಿಟಲೀಕರಣ ಮಾಡುವುದರಿಂದ ಭೂಮಾಫಿಯಾದ ಕುತಂತ್ರಗಳಿಗೆ ಕಡಿವಾಣ ಹಾಕಬಹುದೇ ಎಂಬುದು ಇದು ಪೂರ್ಣ ಪ್ರಮಾಣದಲ್ಲಿ ಜಾರಿಬಂದಾದ ಮೇಲಷ್ಟೇ ಗೊತ್ತಾಗಲಿದೆ. ಸರ್ಕಾರ ತರುವ ಕಾನೂನಿಗಳಲ್ಲಿ ಇರಬಹುದಾದ ಕಿರುಬಿರುಕುಗಳನ್ನೇ ಬಳಸಿ, ಕುಣಿಕೆಯಿಂದ ತಪ್ಪಿಸಿಕೊಳ್ಳುವ ಚಾಣಾಕ್ಷತನವನ್ನೂ ಭೂಗಳ್ಳರು ದಕ್ಕಿಸಿಕೊಳ್ಳುವ ಸಾಧ್ಯತೆಯೂ ಇದೆ.

'ಪತ್ರಿಕೆ'ಯು ಸರ್ಕಾರಿ– ನ್ಯಾಯಾಲಯದ ದಾಖಲೆಗಳನ್ನು ತಲಸ್ಪರ್ಶಿ ಅಧ್ಯಯನ ಮಾಡಿದ ಬಳಿಕ ಖಚಿತ ದಾಖಲೆಗಳನ್ನು ಆಧರಿಸಿ, ಸಂತ್ರಸ್ತರ ಸ್ವಾನುಭವದ ಮಾತುಗಳನ್ನೇ ಉಲ್ಲೇಖಿಸಿ ಕಟ್ಟಿಕೊಡಲಾದ ವರದಿ ಇಲ್ಲಿದೆ.

₹350 ಕೋಟಿ ಆಸ್ತಿಗೆ ಕನ್ನ: ಐಎಎಸ್ ಅಧಿಕಾರಿಯೇ ಭಾಗಿ

ಒಂದನೇ ಪುಟದಿಂದ...

ಆ ಅರ್ಜಿಯ ವಿಚಾರಣೆ ವೇಳೆ ಬೆಂಗಳೂರು ಜಿಲ್ಲಾಧಿಕಾರಿ ಅವರಿಂದ ಹೈಕೋರ್ಟ್ ವಿವರಣೆ ಕೇಳಿತ್ತು. ಜಿಲ್ಲಾಧಿಕಾರಿಯು, 'ಅರ್ಜಿದಾರರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಮೀನು ಕಬಳಿಸಲು ಯತ್ನಿಸಿದ್ದಾರೆ. ಈ ಜಮೀನನ್ನು ಜನ ಸಾಮಾನ್ಯರಿಗೆ 1954ರಲ್ಲಿ ಮಂಜೂರು ಮಾಡಿದ ಮೂಲ ದಾಖಲೆಯಲ್ಲಿ ಈ ನಾಲ್ವರ ಹೆಸರು ಇಲ್ಲ. ಮೂಲ ಪಟ್ಟಿಯಲ್ಲಿ ಈ ನಾಲ್ವರಿಗಿಂತಲೂ ಮೊದಲು ಇರುವವರ ಹೆಸರು ಮತ್ತು ಈ ನಾಲ್ವರ ನಂತರ ಇರುವ ಹೆಸರುಗಳ ಕೈಬರಹ ಹಾಗೂ ಪೆನ್ನಿನ ಇಂಕ್ ಒಂದೇ ರೀತಿ ಇದೆ. ಆದರೆ ಈ ನಾಲ್ವರ ಹೆಸರಿನ ಕೈಬರಹ ಹಾಗೂ ಪೆನ್ನಿನ ಇಂಕ್ ಬೇರೆಯಾಗಿದೆ. ಕಂದಾಯ ಇಲಾಖೆ ಅಧಿಕಾರಿಗಳೂ ಭಾಗಿಯಾಗಿ ಈ ನಾಲ್ವರ ಹೆಸರನ್ನು ಸೇರಿಸಿರುವುದು ಪತ್ತೆಯಾಗಿದೆ' ಎಂದು ಹೈಕೋರ್ಟ್‌ಗೆ ವರದಿ ಸಲ್ಲಿಸಿದ್ದರು.

ಜಿಲ್ಲಾಧಿಕಾರಿ ವರದಿ ನೀಡಿದ ನಂತರ ಹೈಕೋರ್ಟ್, ಅರ್ಜಿದಾರರು ಮತ್ತು ದಾಖಲೆ ತಿದ್ದುವಲ್ಲಿ ಭಾಗಿಯಾದ ಸರ್ಕಾರಿ ಅಧಿಕಾರಿಗಳ ವಿರುದ್ಧ ತನಿಖೆ ಆರಂಭಿಸಿ ಎಂದು 2007ರಲ್ಲೇ ಆದೇಶಿಸಿತ್ತು.

ಈ ಮಧ್ಯೆ 2015 ರಲ್ಲಿ ಬೆಂಗಳೂರು ಉತ್ತರ ವಿಭಾಗದ ವಿಶೇಷ ಜಿಲ್ಲಾಧಿಕಾರಿ–3 ಅವರ ನ್ಯಾಯಾಲಯಕ್ಕೆ ಪುಟ್ಟಮ್ಮ, ಎಚ್.ಬಿ.ಶ್ರೀಧರ್, ಕೆ.ವಿ.ಚಂದ್ರನ್ ಮತ್ತು ಪುಟ್ಟಗೌರಮ್ಮ ಅವರು ಅರ್ಜಿ ಸಲ್ಲಿಸಿ, ಸದರಿ ಜಮೀನನ್ನು ಪರಭಾರೆ ಮಾಡಿಕೊಡಿ ಎಂದು ಕೋರಿದ್ದರು. ಆದರೆ ಆಗಿನ ವಿಶೇಷ ಜಿಲ್ಲಾಧಿಕಾರಿಯು ಅರ್ಜಿಯನ್ನು ಪರಿಗಣಿಸಿರಲಿಲ್ಲ.

2021ರಲ್ಲಿ ವಿಶೇಷ ಜಿಲ್ಲಾಧಿಕಾರಿಯಾಗಿ ಬಂದ ವಾಸಂತಿ ಅಮರ್ ಅವರು, ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡಿದ್ದರು. ಉತ್ತರ ತಾಲ್ಲೂಕಿನ ತಹಶೀಲ್ದಾರ್ ಅವರಿಂದ ವಿವರಣೆ ಕೋರಿದ್ದರು. 'ನಾಲ್ವರಿಗೂ 1954ರಲ್ಲಿ ಜಮೀನು ಮಂಜೂರಾದ ಮೂಲ ದಾಖಲೆಗಳು, ನಕಲು ಪ್ರತಿಗಳೂ ಲಭ್ಯವಿಲ್ಲ. ಅರ್ಜಿದಾರರ ಪಹಣಿ, ಸಾಗುವಳಿ ಚೀಟಿ ಮಾತ್ರವೇ ಲಭ್ಯವಿದೆ' ಎಂದು ಉತ್ತರ ತಾಲ್ಲೂಕಿನ ತಹಶೀಲ್ದಾರ್ ವರದಿ ನೀಡಿದ್ದರು. ಆದರೆ ಈ ಹಿಂದೆ ಹೈಕೋರ್ಟ್‌ಗೆ ಜಿಲ್ಲಾಧಿಕಾರಿ ಸಲ್ಲಿಸಿದ್ದ ವರದಿಯನ್ನು ಕಡೆಗಣಿಸಿದ್ದರು. ವಾಸಂತಿ ಅಮರ್ ಅವರೂ ಈ ವರದಿಯನ್ನು ಕಡೆಗಣಿಸಿ, ಜಮೀನು ಪರಭಾರೆ ಮಾಡಿದ್ದರು.

ಭೂ ಸುರಕ್ಷಾ ಉಪಕ್ರಮವು ಪೂರ್ಣ ಪ್ರಮಾಣದಲ್ಲಿ ಜಾರಿಯಲ್ಲಿ ಇದ್ದಿದ್ದರೆ, ತಹಶೀಲ್ದಾರ್ ಅವರು ವರದಿ ಸಲ್ಲಿಸುವಾಗ ಹಿಂದೆ ಜಿಲ್ಲಾಧಿಕಾರಿ ನೀಡಿದ್ದ ವರದಿಯನ್ನು ಕಡೆಗಣಿಸಲು ಸಾಧ್ಯವಿಲ್ಲ. ಒಂದು ಜಮೀನಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಗೆ ಸಲ್ಲಿಕೆಯಾಗುವ ಎಲ್ಲ ಅರ್ಜಿಗಳು, ಗ್ರಾಮ ಆಡಳಿತಾಧಿಕಾರಿ, ಸರ್ವೇಯರ್, ತಹಶೀಲ್ದಾರ್, ಜಿಲ್ಲಾಧಿಕಾರಿಗಳು ನೀಡುವ ವರದಿ/ಆದೇಶಗಳೆಲ್ಲವೂ ಭೂ ಸುರಕ್ಷಾ ಪೋರ್ಟಲ್‌ಗೆ ಅಪ್‌ಲೋಡ್ ಆಗುತ್ತವೆ. ಯಾವುದೇ ಜಮೀನಿಗೆ ಸಂಬಂಧಿಸಿದಂತೆ ಅರ್ಜಿ/ವ್ಯಾಜ್ಯಗಳನ್ನು ಬಗೆಹರಿಸುವಾಗ ಸಂಬಂಧಿತ ಅಧಿಕಾರಿಯು ಈ ಎಲ್ಲ ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ. ಅದನ್ನು ಕಡೆಗಣಿಸಿ ಪರಭಾರೆ ಮಾಡಿದರೆ ಅಥವಾ ಆದೇಶ ನೀಡಿದರೆ, ಆ ಲೋಪದ ಹೊಣೆಯನ್ನು ಅವರೇ ಹೊರಬೇಕಾಗುತ್ತದೆ ಎನ್ನುತ್ತಾರೆ ಸಚಿವ ಕೃಷ್ಣ ಬೈರೇಗೌಡ.

'ಭೂ ಸುರಕ್ಷೆ: ಜನರಿಗೆ ಶ್ರೀರಕ್ಷೆ'

ಒಂದನೇ ಪುಟದಿಂದ...

'ಭೂ ಸುರಕ್ಷಾ ಪೋರ್ಟಲ್‌ನಲ್ಲಿ ಜನರು, ದಾಖಲೆ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದರೆ ಕಡ್ಡಾಯವಾಗಿ ಕಾಲಮಿತಿಯಲ್ಲಿ ಅವರ ಇ-ಮೇಲ್ ಐ.ಡಿಗೆ ಡಿಜಿಟಲ್ ಪ್ರತಿ ರವಾನೆಯಾಗುತ್ತದೆ. ಅಧಿಕಾರಿಗಳ ಕೈಯಲ್ಲಿದ್ದ ಅಧಿಕಾರವನ್ನು ಭೂ ಸುರಕ್ಷಾ ಜನರ ಕೈಗಿಡಲಾಗುತ್ತಿದೆ' ಎಂಬುದು ಅವರ ಪ್ರತಿಪಾದನೆ.

'ಜನ ಸಾಮಾನ್ಯರು ಪೋರ್ಟಲ್‌ಗೆ ಲಾಗಿನ್ ಆಗಿ ತಮ್ಮ ಜಮೀನುಗಳಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಪರಿಶೀಲಿಸಬಹುದು. ಅವು ಲಭ್ಯವಿದ್ದರೆ, ದೃಢೀಕೃತ ನಕಲು ಪ್ರತಿ ಪಡೆಯಲು ಶುಲ್ಕ ಪಾವತಿಸಿ ಆನ್‌ಲೈನ್‌ನಲ್ಲಿಯೇ ಅರ್ಜಿ ಸಲ್ಲಿಸಬಹುದು. ಅವಿನ್ನೂ ಸ್ಕ್ಯಾನ್ ಆಗದೇ ಇದ್ದರೆ, ಅವುಗಳನ್ನು ಹುಡುಕಿ ಸ್ಕ್ಯಾನ್ ಮಾಡಲಾಗುತ್ತದೆ' ಎಂದು ವಿವರಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 12-10-2000

• ಸಂಧಾನ ನಿರೀಕ್ಷೆಯಲ್ಲಿ ತಂಡ

ಬೆಂಗಳೂರು, ಅ.11: ಡಾ.ರಾಜ್‌ಕುಮಾರ್ ಅವರನ್ನು ಬಿಡಿಸಿಕೊಂಡು ಬರಲು ಪತ್ರಕರ್ತ ಆರ್.ಆರ್.ಗೋಪಾಲ್ ಅವರ ಜೊತೆ ಕಾಡಿಗೆ ತೆರಳಿರುವ ತಮಿಳು ರಾಷ್ಟ್ರೀಯ ಚಳವಳಿಯ ನಾಯಕ ಪಿ. ನೆಡುಮಾರನ್, ಮಾನವ ಹಕ್ಕುಗಳ ಜನರ ಸಂಘಟನೆ (ಪಿಯುಸಿಎಲ್)ಯ ಪ್ರೊ.ಕಲ್ಯಾಣಿ ಹಾಗೂ ಸುಕುಮಾರನ್ ಅವರು ವೀರಪ್ಪನ್ ಸಂದೇಶಕ್ಕಾಗಿ ಕಾಯುತ್ತಿದ್ದಾರೆ. ಅವರು ನಿನ್ನೆ ಸಂಜೆ ಕಾಡಿಗೆ ತೆರಳಿದ್ದರು. ವೀರಪ್ಪನ್‌ನ ಸಂಪರ್ಕ ಸಾಧಿಸಲು ಪ್ರಯತ್ನಿಸಿದ್ದಾರೆ. ಸಂದೇಶ ಬಂದ ತಕ್ಷಣ ವೀರಪ್ಪನ್ ಜೊತೆ ಮಾತುಕತೆ ನಡೆಸಲಿದ್ದಾರೆ.

75 ವರ್ಷಗಳ ಹಿಂದೆ

ಗುರುವಾರ, 12-10-1950

• ಕಮ್ಯುನಿಸ್ಟರ 'ಮರಣ ಪರ್ಯಂತ ಕದನ'ದ ಆಜ್ಞೆ

ಟೋಕಿಯೋ, ಅ.11: ಜನರಲ್ ಮೆಕಾರ್ಥರರ, ಶರಣಾಗಿರೆಂಬ ಕರೆಯನ್ನು ಧಿಕ್ಕರಿಸಿದ ಉತ್ತರ ಕೊರಿಯನ್ನರು, ತಮ್ಮ ಸೈನ್ಯಗಳಿಗೆ 'ಮರಣ ಪರ್ಯಂತ ಕದನ'ವಾಡಬೇಕೆಂಬ ಆಜ್ಞೆಯನ್ನು ಇತ್ತಿದ್ದಾರೆ.

ಕಮ್ಯುನಿಸ್ಟ್ ನಾಯಕ ಕಿಂ–ಇಲ್–ಸೇನ್‌ರ ಆಜ್ಞೆಯಂತೆ ವೀರಾವೇಶದಿಂದ ಕಾದಾಡುತ್ತಿರುವ ಸೈನ್ಯವನ್ನು ಎದುರಿಸಿದ ಅಮೆರಿಕ ಸೈನ್ಯ ಅಷ್ಟಾಗಿ ಪ್ರಗತಿ ಸಾಧಿಸಿಲ್ಲ. ಅಮೆರಿಕ ಸೇನೆಗಿಂತ ಮುಂಚೆ ಹಾರಿದ ಬ್ರಿಟಿಷ್ ಮತ್ತು ಆಸ್ಟ್ರೇಲಿಯಾ ಪಡೆಗಳು ಪೇಕ್‌ಡಾ ನಗರವನ್ನು ವಶಕ್ಕೆ ಪಡೆದಿದ್ದಾವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

12 ಅಕ್ಟೋಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಷಷ್ಠಿ ಗಂ. 14-18 **ನಕ್ಷತ್ರ:** ಮೃಗಶಿರ ಗಂ. 13-37, **ಯೋಗ:** ವರಿಯಾನ್ ಗಂ. 10-55 **ಕರಣ:** ವಣಿಜ ಗಂ. 14-18 ಕನ್ಯಾ ಮಾಸದ 25 ನೇ ದಿನ. ಮಳೆ ನಕ್ಷತ್ರ : ಚಿತ್ತಾ 1 ನೇ ಪಾದ. **ರಾಹುಕಾಲ :** ಸಾಯಂಕಾಲ 04-30 06-00
ಸೂರ್ಯೋದಯ : 06-24 **ಸೂರ್ಯಾಸ್ತ :** 06-10 **ಮುಸ್ಲಿಂ ದಿನಾಂಕ :** 19 ರಬಿಯುಸ್ಸಾನಿ, **ಅದೃಷ್ಟ ಸಂಖ್ಯೆ:** 3, 7

ಮೇಷ: ಸಕಾರಾತ್ಮಕವಾಗಿ ಯೋಚಿಸಿ. ನೇಕಾರರಿಗೆ ಉತ್ತಮ ಆದಾಯ ಇರಲಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ಬಂಧುಗಳ ಸಹಾಯ ದೊರಕುವುದು. ಕುಲದೇವರ ಆರಾಧನೆಯಿಂದ ಶುಭವಾಗುವುದು.

ವೃಷಭ: ನೀವು ಈ ದಿನ ಮಾಡುವ ಕೆಲವು ಬುದ್ಧಿವಂತಿಕೆಯ ಕೆಲಸದಿಂದಾಗಿ ಗುಂಪಿನಲ್ಲಿ ಗುರುತಿಸುವಂಥ ವ್ಯಕ್ತಿಯಾಗುವ ಲಕ್ಷಣಗಳು ಕಂಡುಬರುತ್ತಿವೆ.

ಮಿಥುನ: ರಾಜಕೀಯ ಕ್ಷೇತ್ರದಲ್ಲಿನ ಕೆಲ ಘಟನೆಗಳು ನಿಮ್ಮ ಮೇಲೆ ಅಡ್ಡ ಪರಿಣಾಮ ಬೀರುವ ಸಾಧ್ಯತೆ ಇದೆ. ಹವಾಮಾನದಲ್ಲಿ ಆಗುವ ಬದಲಾವಣೆಯು ಆರೋಗ್ಯದ ಮೇಲೆ ಸಂಪೂರ್ಣ ಪ್ರಭಾವ ಬೀರಲಿದೆ. ಜಾಗ್ರತೆವಹಿಸಿರಿ.

ಕರ್ಕಾಟಕ: ನಿಮ್ಮ ಶೀಘ್ರವಾದ ಕಲಿಕಾ ಸಾಮರ್ಥ್ಯವು ಇತರರು ಹುಬ್ಬೇರುವಂತೆ ಮಾಡುತ್ತದೆ. ಪೌಷ್ಠಿಕ ಆಹಾರ, ಬೇಳೆ ಕಾಳುಗಳನ್ನು ಹೆಚ್ಚಾಗಿ ಸೇವಿಸುವುದರ ಮೂಲಕ ನಿಮಗೆ ಉಂಟಾಗಿರುವ ನಿಶ್ಶಕ್ತಿಯನ್ನು ನಿವಾರಿಸಿಕೊಳ್ಳಬಹುದು.

ಸಿಂಹ: ಮಕ್ಕಳ ವಿಷಯದಲ್ಲಿ ಹಟಮಾರಿತನ ಒಳ್ಳೆಯದಲ್ಲ. ಅವರ ಪ್ರತಿ ಹೆಜ್ಜೆಗೂ ಅಡ್ಡಿಪಡಿಸಿ, ಅವರು ಅಸಮಾಧಾನಗೊಳ್ಳುವಂತೆ ಮಾಡುವುದು ಸೂಕ್ತವಲ್ಲ, ತಾಳ್ಮೆಯಿಂದ ನಿಭಾಯಿಸಿ.

ಕನ್ಯಾ: ಇತ್ತೀಚೆಗಷ್ಟೆ ವೈವಾಹಿಕ ಜೀವನ ಆರಂಭಿಸಿರುವವರು ಧೈರ್ಯದಿಂದ ಎಲ್ಲ ಕಷ್ಟವನ್ನು ಎದುರಿಸುವ ಮನಸ್ಥಿತಿಯನ್ನು ಬೇಗ ಹೊಂದಬೇಕು. ಸಂಗೀತ, ಭರತನಾಟ್ಯದಂತಹ ಇತರೆ ಚಟುವಟಿಕೆಯಲ್ಲಿ ಆಸಕ್ತಿ ಹೆಚ್ಚಾಗಬಹುದು.

ತುಲಾ: ಭವಿಷ್ಯವನ್ನು ಗ್ರಹಿಸುವ ನಿಮ್ಮ ವಿಶೇಷ ಗುಣವನ್ನು ಕಂಡು ಮಿತ್ರರು ಅವಕ್ಕಾಗುವ ಸಂಭವವಿದೆ. ನಿಮ್ಮ ನಿಲುವಿನಲ್ಲಿ ಆದಷ್ಟು ಸ್ಥಿರವಾಗಿರುವಂತಹ ಯೋಚನೆಯು ಜೀವನದಲ್ಲಿ ದಡ ಸೇರಲು ಸಹಾಯ ಮಾಡುತ್ತದೆ.

ವೃಶ್ಚಿಕ: ಭಾವನಾತ್ಮಕವಾಗಿ ವರ್ತಿಸಿದಾಗ ಪರಿಹಾರವಾಗದ ಸಂಗತಿಯು, ತಾಳ್ಮೆಯಿಂದ ಕಾದರೆ ಸರಿಹೋಗುತ್ತದೆ. ಉತ್ತಮವಾದ ಮಾತಿನ ಕಲೆಯು ನಿಮ್ಮ ಬೆಂಬಲಕ್ಕೆ ಸದಾ ಇದ್ದೇ ಇರುತ್ತದೆ. ಗಣಪತಿಯ ಆರಾಧನೆ ಶುಭಪ್ರದ.

ಧನು: ನಿಮ್ಮ ವಿಶಿಷ್ಟ ರೀತಿಯ ವೃತ್ತಿ ಕೌಶಲ್ಯದ ಸೂಕ್ಷ್ಮ ವಿಚಾರಗಳನ್ನು ತಿಳಿಯಲು ಸಹೋದ್ಯೋಗಿಯೊಬ್ಬರು ಅಪೇಕ್ಷಿಸುವರು. ಸಕುಟುಂಬ ಸಮೇತರಾಗಿ ಯಾವುದಾದರು ಶಕ್ತಿಪೀಠಕ್ಕೆ ಭೇಟಿ ನೀಡುವಂತಹ ಯೋಚನೆ ಮಾಡಿ.

ಮಕರ: ಊರಿನ ಅಭಿವೃದ್ಧಿಗೆ ಅಗತ್ಯವಾದ ಒಳ್ಳೆಯ ಕೆಲಸ ಕಾರ್ಯಗಳಿಗೆ ಅಡಿಪಾಯ ಹಾಕುವಂತಹ ಅವಕಾಶ ದೊರಕುವುದು. ಓದಿನಲ್ಲಿ ನಿಮಗೆ ಹೆಚ್ಚಿನ ಆಸಕ್ತಿ ಮೂಡುವುದು.

ಕುಂಭ: ಅಭಿಪ್ರಾಯ ವಿನಿಮಯಗಳಿಂದ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ತೀರ್ಮಾನ ಸಿಗುವುದು. ಅದರಿಂದಾಗಿ ಮನಸ್ಸಿಗೆ ನೆಮ್ಮದಿ ಮೂಡುವುದು. ಹಣ್ಣು-ತರಕಾರಿಗಳ ವ್ಯಾಪಾರಿಗಳಿಗೆ ಈ ದಿನ ಲಾಭದಾಯಕ.

ಮೀನ: ಮನೆಯ ಅಲಂಕಾರಿಕ ವಸ್ತುಗಳ ಖರೀದಿಗಾಗಿ ಅಧಿಕ ಖರ್ಚು ಬಂದೀತು. ಸಗಟು ವ್ಯಾಪಾರಿಗಳಿಗೆ ಖರ್ಚು-ವೆಚ್ಚಗಳು ಆದಾಯದ ಮಿತಿಯೊಳಗಿರುವುದು. ವ್ಯವಹಾರದಲ್ಲಿ ನಷ್ಟವಾಗಬಹುದು, ಜಾಗ್ರತೆ ವಹಿಸಿರಿ.

ಪದಬಂಧ 6191

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪದ ಹೇಳಿ ಬಹುಮಾನವಾಗಿ ಸಿಕ್ಕಿರುವ ಮೆಡಲು! (3)
3.ಎರಡು ತಲೆಯ ಕಾಲ್ಪನಿಕ ಪಕ್ಷಿ (5)
6.ಕಾಲವಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)
8.ಕನಸಲ್ಲಿ ಕಾಣಿಸಿದ ಕೊಳೆ (2)
10.ಹತ್ತನೆಯ ಭಾಗ (3)
12.ರಸಸ್ವಾದನೆಯನ್ನು ಬಲ್ಲವನು (3)
14.ಉತ್ತರದವರ ಮಂಚ (3)
16.ಅತಿಯಾದ ಆತುರ (3)
17.ಕಮರಿಯಲ್ಲಿರುವ ಆನೆ (2)
20.ಪರದಾಟದಲ್ಲಿ ಬಾವುಟವು ತಲೆಕೆಳಗಾಗಿದೆ (2)
22.ಮೈಸೂರು ಜಿಲ್ಲೆಯ ಈ ತಾಲ್ಲೂಕು ದಕ್ಷಿಣಕಾಶಿ ಎಂದು ವಿಖ್ಯಾತಿ ಪಡೆದಿದೆ (5)
23.ಕುಂಬಾರನ ಚಕ್ರವಿದು (3)

ಮೇಲಿಂದ ಕೆಳಕ್ಕೆ

1.ಪಥದಲ್ಲಿ ಸಾಗುತ್ತಿರುವವನು (3)
2.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)
4.ಪರಸ್ಪರ ಸಂಧಿಸುವುದು (2)
5.ಲೋಹದ ಅಗಲವಾದ ಪಾತ್ರೆ (3)
7.ವೇದವನ್ನು ಚನ್ನಾಗಿ ತಿಳಿದವನು (6)
9.ಆರೋಪದಲ್ಲಿ ಕೊನೆಗೊಂಡಿರುವ ಮುಕ್ತಾಯ (4)
11.ಸಾಯುವ ಸಮಯದಲ್ಲಿ ಉಂಟಾಗುವ ತಳಮಳ (6)
13.ಕನ್ನಡಿಗರ ನಾಡು (4)
15.ವಿಶ್ವಾಸವಿಲ್ಲಿ ಉಲ್ಟಾ ಕಾಣುತ್ತಿದೆ (3)
18.ತಿರುಗಿ ನೋಡಿದರೂ ಇದು ದುರಸ್ತಿ (3)
19. ಆಸ್ಥಾನದಲ್ಲಿ ಸಿಕ್ಕಿರುವ ಜಾಗ (2)
21.ಪದಾತಿಯಲ್ಲಿರುವ ಗಂಡ (2)



6190ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಜಪತಿ 3.ಬಾಲಂಗೋಸಿ 5.ಲವಣ 7.ಶರ 9.ಕೊನರು 10.ಗುದ್ದು 11.ಮಾಡು 12.ಶಕಟ 14.ರಸ 16.ಬಳಪ 18.ಕರಿಯೋಲೆ 19.ರಸಾಯನ

ಮೇಲಿಂದ ಕೆಳಕ್ಕೆ:
1.ಗರ್ಭಕೋಶ 2.ತಿಲ 3.ಬಾಣ 4.ಸಿಡಿಮದ್ದು 6.ವಚನ 8.ರಗಡು 10.ಗುಡಾರ 11.ಮಾನಸಿಕ 13.ಕಪಾಳ 15.ಸಮಾಧಾನ 16.ಬಲೆ 17.ಪರ

ಸುಡೊಕು 6575

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		7		8			2	
	3							8
6		5		9		4		
	2		6				3	5
5		3	2		1	8		9
	1				9		4	2
	6			2				
		8	9					7
	5			3	4		9	1

6574 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಗರದಲ್ಲಿ ಮಳೆ ಅಬ್ಬರ: ಜನ ತತ್ತರ

ಕಾಲುವೆಯಂತಾದ ರಸ್ತೆಗಳು
ವಸತಿ ಪ್ರದೇಶಗಳಲ್ಲಿ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿವಿಧ ವಸತಿ ಪ್ರದೇಶಗಳಿಗೆ ನುಗ್ಗಿದ ನೀರು– ಕಾಲುವೆಯಾದ ರಸ್ತೆಗಳು
- ಅಂಡರ್‌ಪಾಸ್‌ನಲ್ಲಿ ನೀರು ನುಗ್ಗಿ ವಾಹನ ಸಂಚಾರ ಅಸ್ತವ್ಯಸ್ತ

ಬೆಂಗಳೂರು: ಶುಕ್ರವಾರ ರಾತ್ರಿಯಿಂದ ಶನಿವಾರ ಮುಂಜಾನೆವರೆಗೆ ಸುರಿದ ಮಳೆಗೆ ನಗರದ ವಿವಿಧ ಪ್ರದೇಶಗಳು ಜಲಾವೃತಗೊಂಡವು. ರಸ್ತೆಗಳು ಕಾಲುವೆಯಂತಾದವು. ವಸತಿ ಪ್ರದೇಶಗಳಿಗೆ ನೀರು ನುಗ್ಗಿತ್ತು.

ನಗರದ ಹಲವು ರಸ್ತೆಗಳಲ್ಲಿ ಮಳೆ ನೀರು ನಿಂತು, ಗುಂಡಿಗಳಲ್ಲಿ ಮತ್ತೆ ನೀರು ತುಂಬಿಕೊಂಡು ಸಂಚಾರಕ್ಕೆ ಅಡ್ಡಿಯಾದವು. ಮೈಸೂರು ರಸ್ತೆ ಮೇಲ್ಸೇತುವೆಯಲ್ಲಿ ದೊಡ್ಡ ಗುಂಡಿ ನಿರ್ಮಾಣವಾಗಿ ಸುಮಾರು ಒಂದು ಗಂಟೆ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಸರ್ಜಾಪುರದ ರೈನ್ ಬೋ ಡ್ರೈವ್ ಲೇಔಟ್, ಹೊಸೂರು ಪಯನೀರ್ ರೆಸಿಡೆನ್ಸಿ, ವಿಲ್ಸನ್ ಗಾರ್ಡನ್ ಬಿಟಿಎಸ್ ರಸ್ತೆ, ಮಾನ್ಯತಾ ಟೆಕ್ ಪಾರ್ಕ್ ಸಹಿತ ಅನೇಕ ಪ್ರದೇಶಗಳು ಕೆರೆಯಂತಾದವು.

ವರ್ತೂರು ಪೊಲೀಸ್ ಠಾಣೆಯ ಬಳಿ ನೀರು ನಿಂತು, ಗುಂಜೂರು ಕಡೆಗೆ ವಾಹನ ಸಂಚಾರಕ್ಕೆ ತೊಡಕುಂಟಾಯಿತು. ದೊಡ್ಡಕನಹಳ್ಳಿ ಬಳಿ ನೀರು ನಿಂತು ಇಬ್ಬಲೂರು ಕಡೆಗೆ ವಾಹನಗಳು ಸಂಚರಿಸದಂತಾಯಿತು. ಮಡಿವಾಳ ಅಯ್ಯಪ್ಪ ಅಂಡರ್‌ಪಾಸ್‌ನಲ್ಲಿ ನೀರು ತುಂಬಿ ಹೋಗಿತ್ತು.

ನಾಗರಬಾವಿ, ಅಶ್ವತ್ಥನಗರದಲ್ಲಿ ಮರ ಬಿದ್ದ ಪರಿಣಾಮ ನಾಗಶೆಟ್ಟಿಹಳ್ಳಿ ರಸ್ತೆಯನ್ನು ತಾತ್ಕಾಲಿಕವಾಗಿ ಮುಚ್ಚಲಾಯಿತು. ಪರ್ಯಾಯ ಮಾರ್ಗವಾಗಿ ಭೂಪಸಂದ್ರ ರಸ್ತೆಯ ಮೂಲಕ ವಾಹನಗಳು ಸಂಚರಿಸಿದವು.

ಅತಿ ಮಳೆ: ಚಾಮರಾಜಪೇಟೆ 6 ಸೆಂ.ಮೀ., ವಿಶ್ವೇಶ್ವರಪುರ 4.6 ಸೆಂ.ಮೀ., ಸಂಪಂಗಿರಾಮನಗರ 4.6 ಸೆಂ.ಮೀ., ಶಾಂತಿನಗರ 4.6 ಸೆಂ.ಮೀ., ಜಕ್ಕೂರು 4.6 ಸೆಂ.ಮೀ., ವನ್ನಾರ್‌ಪೇಟೆ 4.5 ಸೆಂ.ಮೀ., ಪೂರ್ವ ದೊಮ್ಮಲೂರು 4.5 ಸೆಂ.ಮೀ., ಕೋರಮಂಗಲ 4.4 ಸೆಂ.ಮೀ., ಗೊಟ್ಟಿಗೆರೆ 4.3 ಸೆಂ.ಮೀ., ಬೇಗೂರು 4.3 ಸೆಂ.ಮೀ. ಮಳೆ ದಾಖಲಾಗಿದೆ.

ಸಿಂಗಸಂದ್ರ, ಯಲಹಂಕ, ಬೆಳ್ಳಂದೂರು, ವರ್ತೂರು, ಹಗ್ದೂರು, ಹೆಗ್ಗನಹಳ್ಳಿ, ಪೀಣ್ಯ ಕೈಗಾರಿಕಾ ವಲಯ, ಹಂಪಿನಗರ, ಬೊಮ್ಮನಹಳ್ಳಿ, ಗಾಳಿ ಆಂಜನೇಯ ದೇವಸ್ಥಾನ, ಕೋನೆನ ಅಗ್ರಹಾರ, ಕಾಡುಗೋಡಿ, ದೊಡ್ಡನೆಕ್ಕುಂದಿ, ಕೊಟ್ಟಿಗೆ ಪಾಳ್ಯ, ಅಗ್ರಹಾರ ದಾಸರಹಳ್ಳಿ, ಬಸವೇಶ್ವರನಗರ, ನಾಗಪುರ, ಎಚ್‌ಎಸ್‌ಆರ್. ಲೇಔಟ್, ಅಟ್ಟೂರು, ವಿದ್ಯಾರಣ್ಯಪುರ, ಎಚ್‌ಎಎಲ್ ವಿಮಾನ ನಿಲ್ದಾಣ, ಗರುಡಾಚಾರ್‌ಪಾಳ್ಯ, ನಂದಿನಿ ಲೇಔಟ್, ಮಾರಪ್ಪನಪಾಳ್ಯ, ಆರ್.ಆರ್.ನಗರ, ಬಿಟಿಎಂ ಲೇಔಟ್, ಹೇರೊಹಳ್ಳಿ, ಹೊರಮಾವು, ಬಸವನಗುಡಿ, ಕುಮಾರಸ್ವಾಮಿ ಬಡಾವಣೆ, ವಿದ್ಯಾಪೀಠ, ಮಾರತ್‌ಹಳ್ಳಿ, ಪಟ್ಟಾಭಿರಾಮನಗರ, ಹೂಡಿ, ಲಕ್ಕಸಂದ್ರ, ಕಾಟನ್‌ಪೇಟೆ, ದಯಾನಂದನಗರ, ಪುಲಕೇಶಿನಗರ, ಅಂಜನಾಪುರ ಸಹಿತ ನಗರದ ವಿವಿಧ ಪ್ರದೇಶಗಳಲ್ಲಿ ಭಾರಿ ಮಳೆಯಾಗಿದೆ.

‘ವೆಟ್ ಮಿಕ್ಸಿಂಗ್ ವಿಧಾನ ಬಳಕೆ’

ಬೆಂಗಳೂರು: ‘ರಸ್ತೆ ಕಾಮಗಾರಿಗಳ ವೇಳೆ ವೆಟ್‌ಮಿಕ್ಸಿಂಗ್ ವಿಧಾನ ಬಳಸಿಕೊಳ್ಳಲಾಗಿದೆ. ತುರ್ತು ಸಂದರ್ಭದಲ್ಲಿ ಮಳೆಯಲ್ಲೂ ಡಾಂಬರು ಹಾಕುವುದಕ್ಕೆ ಈ ವಿಧಾನ ಬಳಕೆ ಮಾಡಲಾಗುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಅವರು ಮಾತನಾಡಿ, ‘ನಗರದಾದ್ಯಂತ ರಾತ್ರಿಯೆಲ್ಲ ಜೋರಾಗಿ ಮಳೆ ಸುರಿದಿದೆ. ನಮ್ಮ ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದಾರೆ. ಎಲ್ಲಿಯೂ ಅವಘಡಗಳು ನಡೆದಿಲ್ಲ. ಕೆಲವು ಕಡೆ ಮಾತ್ರ ನೀರಿನ ಹರಿವಿಗೆ ಅಡಚಣೆ ಉಂಟಾಗಿದೆ’ ಎಂದರು.

ಸರ್ಜಾಪುರ ಮುಖ್ಯರಸ್ತೆಯಲ್ಲಿರುವ ರೇನ್‌ಬೋ ಡ್ರೈವ್ ಲೇಔಟ್ ಜಲಾವೃತವಾಗಿದೆ

ರೈನ್ ಬೋ ಲೇಔಟ್ ಮತ್ತೆ ಜಲಾವೃತ

ಕೆ.ಆರ್.ಪುರ: ಶುಕ್ರವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ಹಾಲನಾಯಕನಹಳ್ಳಿ ಕೆರೆ ಕೋಡಿ ಬಿದ್ದು ನೀರಿನ ರಭಸ ಹೆಚ್ಚಾಗಿದ್ದರಿಂದ ರೈನ್‌ಬೋ ಡ್ರೈವ್ ಲೇಔಟ್ ಜಲಾವೃತಗೊಂಡಿತು. ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಲೇಔಟ್‌ನ ಕ್ಲಬ್ ಹೌಸ್ ಸುತ್ತಮುತ್ತಲಿನ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರದಾಡಿದರು. ಸ್ಥಳಕ್ಕೆ ಎಸ್‌ಡಿಆರ್‌ಎಫ್ ಮತ್ತು ಜಿಬಿಎ ಸಿಬ್ಬಂದಿ ಬಂದು ನಿವಾಸಿಗಳಿಗೆ ಸಹಾಯ ಹಸ್ತ ಚಾಚಿದರು.

ಸರ್ಜಾಪುರ ರಸ್ತೆಯಲ್ಲಿರುವ ರೈನ್‌ಬೋ ಲೇಔಟ್‌ನ 50 ಕ್ಕೂ ಹೆಚ್ಚು ಐಷಾರಾಮಿ ಮನೆಗಳು ಮುಳುಗಡೆಯಾಗಿ ಕಾರು, ಬೈಕ್ ಇನ್ನಿತರ ವಾಹನಗಳು, ವಸ್ತುಗಳು ನೀರು ಪಾಲಾದವು.

2022ರಲ್ಲಿ ಭಾರಿ ಮಳೆಯಿಂದ ರೈನ್‌ಬೋ ಲೇಔಟ್ ಜಲಾವೃತ್ತಗೊಂಡಿತ್ತು. ಈಗ ಮತ್ತೆ ಜಲ ದಿಗ್ಬಂಧನ ಉಂಟಾಗಿದೆ.

ನಿವಾಸಿಗಳು ಮನೆಯಿಂದ ಹೊರ ಬರಲಾಗದೆ ಪರದಾಡುವಂತಾಯಿತು. ಸರಿಯಾದ ರಾಜಕಾಲುವೆ ನಿರ್ಮಿಸದ ಪಾಲಿಕೆ ಅಧಿಕಾರಿಗಳ ಬಗ್ಗೆ, ಜನಪ್ರತಿನಿಧಿಗಳ ಬಗ್ಗೆ ಲೇಔಟ್ ನಿವಾಸಿಗಳು ಬೇಸರ ವ್ಯಕ್ತಪಡಿಸಿದರು.

ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಲು ಬೆಳ್ಳಂದೂರು ಅಗ್ನಿಶಾಮಕ ದಳದ ಸಿಬ್ಬಂದಿ ಶ್ರಮಿಸಿದರು.

ಉಕ್ಕೇರಿದ ಕೆರೆ, ಕೊಳ್ಳಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು ಗ್ರಾಮಾಂತರ: ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶುಕ್ರವಾರ ಗುಡುಗು, ಸಿಡಿಲು, ಬಿರುಗಾಳಿ ಸಹಿತ ಧಾರಾಕಾರ ಮಳೆಯಾಗಿದೆ.

ಮಳೆಗೆ ಕೆರೆ, ಹಳ್ಳ, ಕೊಳ್ಳಗಳು ತುಂಬಿ ಹರಿದಿವೆ. ಮರಗಳು ನೆಲಕ್ಕುರುಳಿದ್ದು, ಗಾಳಿ ಅಬ್ಬರಕ್ಕೆ ಕೆಲ ಮನೆಗಳ ಹೆಂಚು, ತಗಡು ಹಾರಿ ಬಿದ್ದಿವೆ. ರಸ್ತೆ, ಕೆಳ ಸೇತುವೆ, ಉದ್ಯಾನ ಮತ್ತು ಹೊಲ, ತೋಟ ಜಲಾವೃತಗೊಂಡಿವೆ. ತಗ್ಗು ಪ್ರದೇಶಗಳ ಮನೆ ಹಾಗೂ ಜಮೀನುಗಳಿಗೆ ನೀರು ನುಗ್ಗಿದೆ.

ಕೋಲಾರ ತಾಲ್ಲೂಕಿನ ಅಬ್ಬಣಿಯಲ್ಲಿ ಕಟಾವಿಗೆ ಬಂದಿದ್ದ ಕೋಸು ನೀರಿನಲ್ಲಿ ನಿಂತಿದೆ. ಹಾರೋಹಳ್ಳಿಯಲ್ಲಿ ರಾಗಿ ಬೆಳೆ ನೆಲ ಕಚ್ಚಿದೆ.

ತಿಟ್ಟಮಾರನಹಳ್ಳಿ ಬಳಿ ಬೆಂಗಳೂರು–ಮೈಸೂರು ಹೆದ್ದಾರಿ ಕೆಳಸೇತುವೆ ಜಲಾವೃತಗೊಂಡಿತ್ತು. ರಾಮನಗರ ಜಿಲ್ಲೆ ಸೀರೆಹಳ್ಳದಲ್ಲಿ ಹರಿವು ಹೆಚ್ಚಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿತು.

ಆನೇಕಲ್ ತಾಲ್ಲೂಕಿನ ಗಟ್ಟಹಳ್ಳಿ ಬಡಾವಣೆ ಜಲಾವೃತಗೊಂಡಿತ್ತು. ದೊಡ್ಡಬಳ್ಳಾಪುರ ತಾಲ್ಲೂಕಿನ ಜಕ್ಕಲ ಮೊಡಗು ಜಲಾಶಯಕ್ಕೆ ಕೋಡಿ ಬಿದ್ದಿದೆ.

ಹಸಂಡಹಳ್ಳಿಯಲ್ಲಿ 17 ಸೆಂ.ಮೀ ಮಳೆ

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಹಸಂಡಹಳ್ಳಿಯಲ್ಲಿ ದಾಖಲೆಯ 17 ಸೆಂ.ಮೀ ಮಳೆಯಾಗಿದೆ. 24 ಗಂಟೆಗಳಲ್ಲಿ ಅತಿ ಹೆಚ್ಚು ಮಳೆಯಾದ ಪ್ರದೇಶ ಇದಾಗಿದೆ.

ಶ್ರೀನಿವಾಸಪುರ ತಾಲ್ಲೂಕಿನ ಅರಿಕುಂಟೆ(14.8 ಸೆಂ.ಮೀ.,) ಶ್ರೀನಿವಾಸಪುರ ಪಟ್ಟಣ (10.1ಸೆಂ.ಮೀ) ಮಾಲೂರು ತಾಲ್ಲೂಕಿನ ತುಣಸಿ (11.3ಸೆಂ.ಮೀ) ಮುಳಬಾಗಿಲು ತಾಲ್ಲೂಕಿನ ಎಚ್. ಗೊಲ್ಲಹಳ್ಳಿಯಲ್ಲಿ (10.1ಸೆಂ.ಮೀ) ಉತ್ತಮ ಮಳೆಯಾಗಿದೆ.

ರೇನ್‌ಬೋ ಡ್ರೈವ್ ಲೇಔಟ್‌ನಿಂದ ನೀರು ಹೊರಹಾಕಲು ಅಗ್ನಿಶಾಮಕ ಸಿಬ್ಬಂದಿ ಪ್ರಯತ್ನಿಸಿದರು. ಚಿತ್ರಗಳು: ಎಂ.ಎಸ್.ಮಂಜುನಾಥ್

ಚಿಟಿಕೆ ಸುದ್ದಿ

ಲೇಖಕಿಯರ ಸಂಘ: ಡಿಸೆಂಬರ್‌ನಲ್ಲಿ ಚುನಾವಣೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘಕ್ಕೆ ಮುಂಬರುವ ಡಿಸೆಂಬರ್ ತಿಂಗಳಲ್ಲಿ ಚುನಾವಣೆ ನಡೆಸಲು ನಿರ್ಧರಿಸಲಾಗಿದೆ.

ಶನಿವಾರ ಇಲ್ಲಿ ನಡೆದ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಚುನಾವಣೆ ಅಧಿಕಾರಿಯಾಗಿ ಸಾಮಾಜಿಕ ಕಾರ್ಯಕರ್ತೆಯೂ ಆಗಿರುವ ವಕೀಲೆ ಪ್ರತಿಭಾ ಆರ್. ಅವರನ್ನು ನೇಮಿಸಲಾಗಿದೆ.

ಎಚ್.ಎಲ್. ಪುಷ್ಪ

ಸೆ.7ರಂದು ನಡೆದ ಸಭೆಯ ಮುಂದುವರಿದ ಭಾಗವಾಗಿ ಈ ಸಭೆ ನಡೆಸಲಾಯಿತು. ಹಿಂದೆ ಮಂಡಿಸಿದ 2024-25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಕನ್ನಡದಲ್ಲಿ ಇಲ್ಲವೆಂದು, ಅದಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಈ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ಹಲವಾರು ವಿಷಯಗಳ ಬಗ್ಗೆ ಹಾಗೂ ಲೇಖಕಿಯರ ಸಮ್ಮೇಳನದ ಖರ್ಚು ವೆಚ್ಚದ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಅವರು ತಿಳಿಸಿದ್ದಾರೆ.

‘ಲೆಕ್ಕಾಚಾರದಲ್ಲಿ ಗೊಂದಲ ಇತ್ತು. ಆದರೆ, ಲೆಕ್ಕಪತ್ರ ನಿರ್ವಹಣೆ ಮತ್ತು ಲೆಕ್ಕಪರಿಶೋಧನಾ ಪ್ರಸ್ತುತಿಯಲ್ಲಿ ವ್ಯತ್ಯಾಸವಿದೆ ಎಂಬ ಆಕ್ಷೇಪಗಳಿದ್ದರೂ ಕೆಲವು ತಿದ್ದುಪಡಿಗಳನ್ನು ಸೂಚಿಸಿ, ಬಹುಮತದಿಂದ ಲೆಕ್ಕಪತ್ರವನ್ನು ಸಭೆಯಲ್ಲಿ ಅಂಗೀಕರಿಸಿ ಅನುಮೋದಿಸಲಾಯಿತು’ ಎಂದು ಹೇಳಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ: ಅ. 15ಕ್ಕೆ ಸಭೆ– ತಂಗಡಗಿ

ಹಾಸನ: ‘ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ರಚಿಸಿರುವ ಆಯ್ಕೆ ಸಮಿತಿಯ ಪ್ರಥಮ ಸಭೆ ಅ.15ರಂದು ನಡೆಯಲಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ಹಾಸನಾಂಬ ದೇವಿ ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ‘2-3 ಸಭೆ ನಡೆಯಲಿದೆ. ಬಳಿಕ ಸಿ.ಎಂ., ಡಿಸಿಎಂ ಉಪಸ್ಥಿತಿಯಲ್ಲಿ ಉನ್ನತ ಮಟ್ಟದ ಸಭೆ ಪಟ್ಟಿ ಅಂತಿಮಗೊಳಿಸಲಿದೆ’ ಎಂದರು.

ನಿಂದನೆ: ನಟ ಸೇರಿ ಮೂವರ ವಿರುದ್ಧ ಪ್ರಕರಣ

ಮಂಗಳೂರು: ಕ್ಯಾಬ್ ಚಾಲಕನಿಗೆ ಕರೆ ಮಾಡಿ ‘ಮುಸ್ಲಿಂ ಟೆರರಿಸ್ಟ್’ ಎಂದು ನಿಂದಿಸಿದ್ದ ಆರೋಪದ ಮೇರೆಗೆ ಮಲಯಾಳ ಸಿನಿಮಾದ ಸಹ ನಟ, ಕೇರಳದ ಜಯಕೃಷ್ಣನ್ ಹಾಗೂ ಸಂತೋಷ್ ಅಬ್ರಾಹಂ, ವಿಮಲ್ ವಿರುದ್ಧ ಇಲ್ಲಿನ ಉರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಗುರುವಾರ ರಾತ್ರಿ ನಗರಕ್ಕೆ ಬಂದಿದ್ದ ಮೂವರು ಉಬರ್ ಮತ್ತು ರ್‍ಯಾಪಿಡೊ ಕ್ಯಾಪ್ಟನ್ ಆ್ಯಪ್ ಮೂಲಕ ಕ್ಯಾಬ್ ಬುಕ್ ಮಾಡಿದ್ದು, ಬಿಜೈ ನ್ಯೂ ರೋಡ್ ಬಳಿ ವಾಹನ ಹತ್ತುವುದಾಗಿ ನಮೂದಿಸಿದ್ದರು. ನಾನು ಆ್ಯಪ್ ಮೂಲಕ ಕಾಲ್ ಮಾಡಿ ಪಿಕ್ ಅಪ್ ಬಗ್ಗೆ ವಿಚಾರಿಸಿದ್ದೆ. ಆಗ ಹಿಂದಿಯಲ್ಲಿ ಮಾತನಾಡಿದ ವ್ಯಕ್ತಿ ನನಗೆ ‘ಮುಸ್ಲಿಂ ಉಗ್ರವಾದಿ, ಟೆರರಿಸ್ಟ್’ ಎಂದು ಅಪಹಾಸ್ಯವಾಗಿ ಮಾತನಾಡಿದ್ದ. ಹಿಂದಿ, ಮಲಯಾಳ ಭಾಷೆಯಲ್ಲಿ ತಾಯಿಗೆ ಅವಾಚ್ಯವಾಗಿ ಬೈದಿದ್ದ’ ಎಂದು ಕ್ಯಾಬ್ ಚಾಲಕ ಅಹ್ಮದ್ ಶಫೀಕ್ ದೂರಿನಲ್ಲಿ ತಿಳಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಕರೆಯ ಧ್ವನಿಮುದ್ರಿಕೆಯನ್ನು ಚಾಲಕ ಒಪ್ಪಿಸಿದ್ದಾರೆ.

ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿರುವ ಪೊಲೀಸರು, ಮೂವರು ಆರೋಪಿಗಳಿಗೂ ನೋಟಿಸ್ ನೀಡಿ, ಅವರನ್ನು ಠಾಣೆಗೆ ಕರೆಸಿಕೊಂಡು ಧ್ವನಿ ಮಾದರಿಗಳನ್ನು ಸಂಗ್ರಹಿಸಿದ್ದಾರೆ.

ರಾಜ್ಯ ಲಿಂಗಾಯತ ಧರ್ಮ ಪ್ರಚಾರಕರ ವೇದಿಕೆ ರಚನೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ‘ಮಠಾಧೀಶರ ಒಕ್ಕೂಟದ ಮಾದರಿಯಲ್ಲಿ ಲಿಂಗಾಯತ ಧರ್ಮ ಪ್ರಚಾರಕರ ವೇದಿಕೆ ರಚಿಸಲಾಗುತ್ತಿದ್ದು, ಸದಸ್ಯತ್ವ ಪಡೆದುಕೊಳ್ಳಲು 500 ಸ್ವಾಮೀಜಿಗಳು ಒಪ್ಪಿದ್ದಾರೆ’ ಎಂದು ಬೆಂಗಳೂರಿನ ಚನ್ನಬಸವೇಶ್ವರ ಜ್ಞಾನಪೀಠದ ಚನ್ನಬಸವಾನಂದ ಸ್ವಾಮೀಜಿ ತಿಳಿಸಿದರು.

ಶನಿವಾರ ಇಲ್ಲಿ ನಡೆದ ಸ್ವಾಭಿಮಾನಿ ಕಲ್ಯಾಣ ಪರ್ವದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಅವರು, ‘ಯಾವುದೇ ಒಕ್ಕೂಟಕ್ಕೆ ವಿರೋಧವಾಗಿ ಇದನ್ನು ಸ್ಥಾಪಿಸುತ್ತಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಲಿಂಗೈಕ್ಯ ಮಾತೆ ಮಹಾದೇವಿಯವರು ಬಸವಣ್ಣನವರ ವಚನ ತಿದ್ದುಪಡಿ ಮಾಡಿದ್ದರು. ತಿರುಚಲಿಲ್ಲ’ ಎಂದರು.

ಅಧಿಕಾರಿಗಳ ಸೋಗಿನಲ್ಲಿ ಡಕಾಯಿತಿ: ಏಳು ಮಂದಿ ಸೆರೆ

ಯಲಹಂಕ ಠಾಣೆಯ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಅಧಿಕಾರಿಗಳ ಸೋಗಿನಲ್ಲಿ ಡಕಾಯಿತಿ ಮಾಡಿದ್ದ ಏಳು ಆರೋಪಿಗಳನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಾದ ಶಂಕರ್, ರಾಜೇಂದ್ರ ಮನೋತ್ ಜೈನ್, ಹೇಮಂತ್ ಜೈನ್, ಶ್ರೀನಿವಾಸಗೌಡ, ಜಗನ್ ಮೋಹನ್, ಶ್ರೀನಿವಾಸ, ಕಿರಣ್ ಜೈನ್ ಅವರಿಂದ ₹1.27 ಕೋಟಿ ನಗದು, ವಿವಿಧ ದಾಖಲೆಗಳು ಹಾಗೂ ಎರಡು ಕಾರು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ವಿನಾಯಕ ನಗರದ ವ್ಯಕ್ತಿಯೊಬ್ಬರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ದೂರುದಾರ, ಉಪನ್ಯಾಸಕ ಗಿರಿರಾಜು ಮನೆಯಲ್ಲಿ ಆರೋಪಿ ಶಂಕರ್ ಎಂಬಾತ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ದೂರುದಾರರು ಜಮೀನು ಖರೀದಿಸಲು ಮನೆಗೆ ಹಣ ತಂದಿಟ್ಟಿರುವುದು ಚಾಲಕನಿಗೆ ತಿಳಿದಿತ್ತು. ಮನೆಯಲ್ಲಿ ಹಣವಿದ್ದ ಮಾಹಿತಿಯನ್ನು ಇತರೆ ಆರೋಪಿಗಳಿಗೆ ತಿಳಿಸಿದ್ದ. ಏಳು ಮಂದಿ ಸೇರಿಕೊಂಡು ಸರ್ಕಾರಿ ಅಧಿಕಾರಿಗಳು ಎಂದು ಹೇಳಿಕೊಂಡು ಡಕಾಯಿತಿ ನಡೆಸಲು ಸಂಚು ರೂಪಿಸಿದ್ದರು.

ಹೇಮಂತ್

ಶಂಕರ್

ಕಿರಣ್

ಶ್ರೀನಿವಾಸ

ರಾಜೇಂದ್ರ

ಸೆ.19ರ ಬೆಳಿಗ್ಗೆ ದೂರುದಾರರ ಪತ್ನಿ ಹಾಗೂ ತಾಯಿ ಮನೆಯಲ್ಲಿ ಇದ್ದರು. ಆ ಸಂದರ್ಭದಲ್ಲಿ ಆರೋಪಿಗಳು ಸರ್ಕಾರಿ ಅಧಿಕಾರಿಗಳೆಂದು ಹೇಳಿಕೊಂಡು ಮನೆಗೆ ನುಗ್ಗಿದ್ದರು. ಇಬ್ಬರನ್ನು ಬೆದರಿಸಿ ಮನೆಯಲ್ಲಿದ್ದ ದಾಖಲೆಗಳು ಹಾಗೂ ಸೂಟ್‌ಕೇಸ್, ಬ್ಯಾಗ್‌ನಲ್ಲಿ ತಂಬಿಡಲಾಗಿದ್ದ ಹಣವನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದರು’ ಎಂದು ಪೊಲೀಸರು ಹೇಳಿದರು.

‘ಸಂಜಯ್ ನಗರದಲ್ಲಿ ಅನುಮಾನಸ್ಪದವಾಗಿ ಓಡಾಟ ನಡೆಸುತ್ತಿದ್ದ ವ್ಯಕ್ತಿಯೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಇತರೆ ಆರು ಮಂದಿಯ ಜತೆಗೆ ಸೇರಿಕೊಂಡು ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದ. ಬಳಿಕ ಕಾರ್ಯಾಚರಣೆ ನಡೆಸಿ ಇತರೆ ಆರೋಪಿಗಳನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ನಕಲಿ ನೋಂದಣಿ ಸಂಖ್ಯೆ ಅಳವಡಿಸಿಕೊಂಡು ಕಾರಿನಲ್ಲಿ ಆರೋಪಿಗಳು ಬಂದಿದ್ದರು. ಬಿಳಿ ಬಣ್ಣದ ಶರ್ಟ್ ಧರಿಸಿದ್ದ ಆರೋಪಿಗಳು, ಸರ್ಕಾರಿ ಅಧಿಕಾರಿಗಳೆಂದು ಹೇಳಿಕೊಂಡಿದ್ದರು. ಮನೆಯಲ್ಲಿ ಇದ್ದವರ ಮೊಬೈಲ್ ಕಸಿದುಕೊಂಡಿದ್ದರು. ಎಲ್ಲರನ್ನೂ ಪ್ರತ್ಯೇಕ ಕೋಣೆಯಲ್ಲಿ ಕೂಡಿ ಹಾಕಿದ್ದರು. ಬಳಿಕ ಹಣ ದೋಚಿ ಪರಾರಿ ಆಗಿದ್ದರು’ ಎಂದು ಮಾಹಿತಿ ನೀಡಿದರು.

ಸಮೀಕ್ಷೆಗೆ ನ್ಯಾಯಬೆಲೆ ಅಂಗಡಿ ನೆರವು

ಬಿಪಿಎಲ್, ಎಪಿಎಲ್ ಕಾರ್ಡ್ ಆಧರಿಸಿ ಅರೆಬರೆ ಸಮೀಕ್ಷೆ ಹಿನ್ನೆಲೆಯಲ್ಲಿ ಕ್ರಮ

• ಕೆ.ನರಸಿಂಹಮೂರ್ತಿ

ಮುಖ್ಯಾಂಶಗಳು

- ಪಡಿತರ ಚೀಟಿ ಆಧರಿಸಿ ಹಲವೆಡೆ ಸಮೀಕ್ಷೆ ಅಪೂರ್ಣ
- ಮನೆ ಸದಸ್ಯರಲ್ಲಿ ಕೆಲವರ ಮಾಹಿತಿಯಷ್ಟೇ ಸಂಗ್ರಹ

ಮೈಸೂರು: ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್ ಆಧರಿಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಅರೆಬರೆಯಾಗಿ ನಡೆದಿರುವುದು ಕಂಡುಬಂದಿದ್ದು, ಅದನ್ನು ಪೂರ್ಣಗೊಳಿಸಲು ಈಗ ನ್ಯಾಯಬೆಲೆ ಅಂಗಡಿಗಳ ಸಹಕಾರ ಪಡೆಯಲು ಶಾಲಾ ಶಿಕ್ಷಣ ಇಲಾಖೆ ಮುಂದಾಗಿದೆ.

ಈವರೆಗೆ ಸಮೀಕ್ಷೆ ನಡೆಯದ, ಪಟ್ಟಿಯಲ್ಲಿರುವ ಕುಟುಂಬಗಳ ಪಡಿತರ ಕಾರ್ಡ್‌ಗಳನ್ನು ಆಧರಿಸಿಯೇ ಸಮೀಕ್ಷೆ ನಡೆಸಬೇಕು ಎಂಬ ಸೂಚನೆಯನ್ನೂ ನೀಡಲಾಗಿದೆ. ತಹಶೀಲ್ದಾರರು ಮತ್ತು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಸಮ್ಮುಖದಲ್ಲಿ ಗಣತಿದಾರರು ಮತ್ತು ನ್ಯಾಯಬೆಲೆ ಅಂಗಡಿ ಮಾಲೀಕರ ಸಭೆ ನಡೆಸಲಾಗುತ್ತಿದೆ. ಕಂದಾಯ ಇಲಾಖೆ, ಗ್ರಾಮ ಪಂಚಾಯಿತಿ ಮತ್ತು ಪುರಸಭೆ ಸಿಬ್ಬಂದಿಯೂ ಕಡ್ಡಾಯವಾಗಿ ಸಹಕಾರ ನೀಡಬೇಕಾಗಿದೆ.

ಅರೆಬರೆ: ಮೈಸೂರು ಜಿಲ್ಲೆಯ ಕೆಲ ತಾಲ್ಲೂಕುಗಳಲ್ಲಿ ಬಿಪಿಎಲ್, ಎಪಿಎಲ್ ಕಾರ್ಡ್‌ನಲ್ಲಿ ಹೆಸರಿರುವ ಎಲ್ಲ ಸದಸ್ಯರ ಸಮೀಕ್ಷೆ ಆಗಿಲ್ಲ ಎಂಬುದನ್ನು ಶಿಕ್ಷಣ ಇಲಾಖೆ ಗಂಭೀರವಾಗಿ ಪರಿಗಣಿಸಿದೆ.

> ಸಮೀಕ್ಷೆಗೆ ಒಳಪಡದವರ ಸಮೀಕ್ಷೆಯನ್ನು ಪಡಿತರ ಚೀಟಿ ಆಧರಿಸಿ ಮಾಡಲು ಸೂಚಿಸಲಾಗಿದೆ. ಗಡುವಿನಲ್ಲಿ ಗುರಿಸಾಧಿಸುವ ನಿರೀಕ್ಷೆ ಇದೆ.
> **ಆರ್.ಕೃಷ್ಣಪ್ಪ,** ಕೆ.ಆರ್.ನಗರ ಕ್ಷೇತ್ರ ಶಿಕ್ಷಣಾಧಿಕಾರಿ

‘ಕುಟುಂಬದಲ್ಲಿ ನಾಲ್ವರು ಸದಸ್ಯರಿದ್ದರೆ, ಕೆಲವರ ಸಮೀಕ್ಷೆಯನ್ನಷ್ಟೇ ಮಾಡಿರುವ ನಿದರ್ಶನಗಳು ಹೆಚ್ಚಿವೆ. ಕೆ.ಆರ್.ನಗರ ತಾಲ್ಲೂಕಿನಲ್ಲಿ 36,542 ಮತ್ತು ಸಾಲಿಗ್ರಾಮ ತಾಲ್ಲೂಕಿನಲ್ಲಿ 32,575 ಕುಟುಂಬಗಳ ಸಮೀಕ್ಷೆ ಅಪೂರ್ಣವಾಗಿದೆ. ಹೀಗಾಗಿ ನ್ಯಾಯಬೆಲೆ ಅಂಗಡಿಗಳ ಮಾಲೀಕರೊಂದಿಗೆ ಸಭೆ ನಡೆಸಲಾಗಿದೆ’ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ. ‘ಬಿಪಿಎಲ್ ಅಥವಾ ಎಪಿಎಲ್ ಪಟ್ಟಿಯಲ್ಲಿರುವವರ ಸಮೀಕ್ಷೆಯನ್ನು ನೋ ಯುಎಚ್‌ಐಡಿ ಬಳಸಿ, ಆರ್ ಆರ್ ಸಂಖ್ಯೆ ನಮೂದಿಸಿ ಹೊಸದಾಗಿ ಯುಎಚ್‌ಐಡಿ ಸೃಷ್ಟಿಸಿ ನಡೆಸಬೇಕು. ಆರ್.ಆರ್ ಹಾಗೂ ಸಮೀಕ್ಷೆ ಐಡಿ ಸಂಖ್ಯೆಯನ್ನು ಮೇಲ್ವಿಚಾರಕರಿಗೆ ನೀಡಬೇಕು. ಅವರು ಹೊಸದಾಗಿ ಮ್ಯಾಪಿಂಗ್ ಮಾಡಬೇಕು’ ಎಂದೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಚಿಸಿದ್ದಾರೆ. ಸಮೀಕ್ಷೆಯು ಸಮೀಕ್ಷಕರು, ಮೇಲ್ವಿಚಾರಕರ ಜಂಟಿ ಪ್ರಯತ್ನದಲ್ಲೇ ನಡೆಯಬೇಕಾಗಿದೆ.

ಪದವಿ ಕಾಲೇಜು ಸಿಬ್ಬಂದಿ ಬಳಕೆ

ಪದವಿಪೂರ್ವ ಕಾಲೇಜು ಉಪನ್ಯಾಸಕರಿಗೆ ಪರೀಕ್ಷೆ ಜವಾಬ್ದಾರಿ ಇರುವ ಕಾರಣಕ್ಕೆ, ಅವರ ಬದಲು ಪದವಿ ಕಾಲೇಜುಗಳ ಬೋಧಕ, ಬೋಧಕೇತರ ಸಿಬ್ಬಂದಿಯನ್ನು ಸಮೀಕ್ಷೆಗೆ ನಿಯೋಜಿಸಲಾಗಿದೆ.

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಸಿಬ್ಬಂದಿ ಜೊತೆಗೆ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಚೇರಿ ಸಿಬ್ಬಂದಿಯೂ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾರ್ಡುದಾರರ ಪಟ್ಟಿ ಅಲಭ್ಯ

ಬಿಪಿಎಲ್, ಎಪಿಎಲ್ ಉಳ್ಳವರ ಪಟ್ಟಿಯನ್ನು ನ್ಯಾಯಬೆಲೆ ಅಂಗಡಿಗಳಿಂದ ಪಡೆದುಕೊಂಡು, ಒಂದೇ ದಿನದೊಳಗೆ ಆದ್ಯತೆ ಮೇರೆಗೆ ಸಮೀಕ್ಷೆ ಮುಗಿಸುವಂತೆ ಅಧಿಕಾರಿಗಳು ಸೂಚಿಸಿದ್ದರೂ, ನ್ಯಾಯಬೆಲೆ ಅಂಗಡಿಗಳ ಮಾಲೀಕರು ಪಟ್ಟಿಯನ್ನು ನೀಡದಿರುವುದು ಸಮೀಕ್ಷಕರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ‘ಪಟ್ಟಿಯನ್ನು ನ್ಯಾಯಬೆಲೆ ಅಂಗಡಿಯವರು ನಾಳೆ ಕೊಡುವುದಾಗಿ ಹೇಳಿರುವುದರಿಂದ, ಸದ್ಯ ಉಳಿದವರ ಸಮೀಕ್ಷೆ ನಡೆಸುತ್ತಿದ್ದೇವೆ’ ಎಂದು ಸಮೀಕ್ಷಕರೊಬ್ಬರು ತಿಳಿಸಿದರು.

ಸಂತ್ರಸ್ತ ಕುಟುಂಬಗಳಿಂದ ಎಸ್‌ಐಟಿಗೆ ದೂರು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳದಲ್ಲಿ ನಡೆದಿರುವ ಅಸಹಜ ಸಾವು, ಕೊಲೆ ಪ್ರಕರಣಗಳ ಕುರಿತು ಸಮಗ್ರ ತನಿಖೆಗೆ ಒತ್ತಾಯಿಸಿ ಸೌಜನ್ಯಾ ತಾಯಿ ಕುಸುಮಾವತಿ, ಇತರ ಸಂತ್ರಸ್ತ ಕುಟುಂಬಗಳ ಸದಸ್ಯರು ಶನಿವಾರ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ದೂರು ನೀಡಿದರು.

ಅನೇಕ ಪ್ರಕರಣಗಳಲ್ಲಿ ಸಾವು ಸಂಭವಿಸಿದ ದಿನ ಅಥವಾ ಮರುದಿನವೇ ಶವಗಳನ್ನು ವಿಲೇ ಮಾಡಲಾಗಿದೆ. ಇದು ನಿಯಮಗಳಿಗೆ ವಿರುದ್ಧವಾದುದು. ಧರ್ಮಸ್ಥಳದ ವಸತಿ ಗೃಹದಲ್ಲಿ 2007ರಲ್ಲಿ ನಡೆದ ಕೊಲೆ ಪ್ರಕರಣ ಒಂದರಲ್ಲಿ ‘ಮೃತರ ಗುರುತು ಪತ್ತೆಯಾಗಿಲ್ಲ’ ಎಂದು ಮೃತದೇಹವನ್ನು ಅದೇ ದಿನ ವಿಲೇ ಮಾಡಲಾಗಿದೆ. ಇದು ಹೇಗೆ ಸಾಧ್ಯ ಎಂದು ದೂರಿನಲ್ಲಿ ಪ್ರಶ್ನಿಸಿದ್ದಾರೆ.

2012ರಲ್ಲಿ ನಡೆದ ಆನೆ ಮಾವುತ ನಾರಾಯಣ ಮತ್ತು ಆತನ ಸಹೋದರಿ ಯಮುನಾ ಕೊಲೆ, 1986ರಲ್ಲಿ ನಡೆದ ಪದ್ಮಾವತಿ ಕೊಲೆ, 1979ರಲ್ಲಿ ನಡೆದ ವೇದವಲ್ಲಿ ಕೊಲೆ ಪ್ರಕರಣಗಳನ್ನೂ ಮರು ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಈ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಗಿರೀಶ ಮಟ್ಟೆಣ್ಣವರ, ‘ನಾಲ್ಕೈದು ದಶಕಗಳಿಂದ ಧರ್ಮಸ್ಥಳ ಗ್ರಾಮದಲ್ಲಿ ಅನೇಕ ಕೊಲೆಗಳು ನಡೆದಿವೆ. ಆರೋಪಿಗಳು ಯಾರು ಎಂದು ಪತ್ತೆ ಹಚ್ಚುವಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಗಳು ವಿಫಲ ಆಗಿವೆ’ ಎಂದು ದೂರಿದರು.

ಪ್ರಕರಣಗಳಿಗೆ ತಾರ್ಕಿಕ ಅಂತ್ಯ ಸಿಗಬೇಕು ಎಂದು ಕಾನೂನು ತಜ್ಞರ ಜೊತೆ ಚರ್ಚಿಸಿ ವರದಿ ಸಿದ್ಧಪಡಿಸಲಾಗಿದೆ. ಅದರ ಆಧಾರದಲ್ಲಿ ಎಸ್‌ಐಟಿಗೆ ದೂರು ನೀಡಲಾಗಿದೆ’ ಎಂದರು.

‘ಎಸ್‌ಐಆರ್ ಜಾರಿಗೆ ವಿರೋಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಜಾರಿಗೊಳಿಸಲು ವಿವಿಧ ನಾಗರಿಕ ಸಂಘಟನೆಗಳ ನೇತೃತ್ವದಲ್ಲಿ ಶುಕ್ರವಾರ ನಡೆದ ದುಂಡು ಮೇಜಿನ ಸಭೆಯಲ್ಲಿ ವಿರೋಧ ವ್ಯಕ್ತಪಡಿಸಲಾಯಿತು. ಎಸ್‌ಐಆರ್‌ಗೆ ವಿರೋಧಿಸಿ ರಾಜ್ಯದಾದ್ಯಂತ ನನ್ನ ಮತ ನನ್ನ ಹಕ್ಕು ಅಭಿಯಾನ ನಡೆಸಲು ನಿರ್ಧರಿಸಲಾಯಿತು.

ಸಿಪಿಐ–ಎಂಎಲ್‌ನ ರಾಜ್ಯ ಕಾರ್ಯದರ್ಶಿ ಕ್ಲಿಫ್ಟನ್ ಡಿ ರೊಜಾರಿಯೊ ಮಾತನಾಡಿ, ‘ಬಿಹಾರದಲ್ಲಿ ಎಸ್‌ಐಆರ್ ಜಾರಿಗೊಳಿಸುವ ಮೂಲಕ ಮತದಾರರ ಪಟ್ಟಿಯಿಂದ 68 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರನ್ನು ಅಳಿಸಿ ಹಾಕಲಾಗಿದೆ. ಪ್ರಮುಖವಾಗಿ ಮಹಿಳೆಯರು, ದಲಿತರು, ಮುಸ್ಲಿಮರು, ವಲಸೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಆಯೋಗವು ಕೇಳಿರುವ ದಾಖಲೆಗಳು ಬಹುತೇಕ ಜನರ ಬಳಿ ಇಲ್ಲ’ ಎಂದು ಹೇಳಿದರು.

ಬಹುತ್ವ ಕರ್ನಾಟಕದ ಸದಸ್ಯ ವಿನಯ್ ಶ್ರೀನಿವಾಸ್ ಮಾತನಾಡಿ, ‘ಎಸ್‌ಐಆರ್ ಹೆಸರಿನಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಗೊಳಿಸಲು ಚುನಾವಣೆ ಆಯೋಗವು ಸಿದ್ಧತೆ ನಡೆಸುತ್ತಿದೆ. ಮತದಾರರು ಮತ ಚಲಾವಣೆ ಮಾಡಲು ಅರ್ಹರು ಎಂಬುದು ಸಾಬೀತು ಪಡಿಸಬೇಕಾಗಿದೆ. ಇದರಿಂದ ನಾಗರಿಕರು ಕಿರುಕುಳ ಅನುಭವಿಸುವ ಸಾಧ್ಯತೆ ಇದೆ. ಇದು ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತದೆ’ ಎಂದು ಆತಂಕ ವ್ಯಕ್ತಪಡಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಪತ್ರಕರ್ತ ಇಂದೂಧರ ಹೊನ್ನಾಪುರ, ‘ಎಸ್‌ಐಆರ್ ಜಾರಿಗೆ ವಿರೋಧಿಸಲು ನಾವೆಲ್ಲರೂ ಸಾಮೂಹಿಕವಾಗಿ ಒಗ್ಗೂಡಬೇಕು. ಮತದಾರರು ತಮ್ಮ ನಾಯಕರನ್ನು ಆಯ್ಕೆ ಮಾಡುತ್ತಾರೆ. ಆದರೆ ಈಗ ಚುನಾವಣೆ ಆಯೋಗವು ಮತದಾರರನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ತಮ್ಮ ಮೇಲೆ ತೆಗೆದುಕೊಳ್ಳುತ್ತಿದೆ. ಈ ಬಗ್ಗೆ ಜಾಗೃತಿ ಮೂಡಿಸಲು ತಳಮಟ್ಟದಲ್ಲಿ ಚಳವಳಿಯನ್ನು ರೂಪಿಸಿಸಬೇಕು’ ಎಂದು ಕರೆ ನೀಡಿದರು.

‘ಕಾನ್‌ಸ್ಟೆಬಲ್‌ಗಳ ನೇಮಕಾತಿಗೆ ಅಧಿಸೂಚನೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 15 ಸಾವಿರ ಹುದ್ದೆಗಳಲ್ಲಿ 4,600 ಕಾನ್‌ಸ್ಟೆಬಲ್‌ಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದರು.

‘545 ಪಿಎಸ್‌ಐಗಳ ನೇಮಕಾತಿ, ತರಬೇತಿ ಪ್ರಗತಿಯಲ್ಲಿದೆ. ಹೊಸದಾಗಿ 402 ಪಿಎಸ್‌ಐ ನೇಮಕಾತಿಗೆ ಆದೇಶ ಹೊರಡಿಸಲಾಗಿದೆ. ಅದರ ಜತೆಗೆ ಇನ್ನೂ 600 ಪಿಎಸ್‌ಐ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲಾಗುವುದು’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಕೆಂಪೇಗೌಡ ಕೋಟೆ ಸಂರಕ್ಷಣೆ ಕೋರಿ ಪಿಐಎಲ್

ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿಯಲ್ಲಿರುವ ಐತಿಹಾಸಿಕ ನಾಡಪ್ರಭು ಕೆಂಪೇಗೌಡರ ಕೋಟೆಯನ್ನು ಸಂರಕ್ಷಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಕೆಂಪೇಗೌಡ ಅಭಿವೃದ್ಧಿ ಸಮಿತಿ ಅಧ್ಯಕ್ಷ ಮಾಗಡಿಯ ಎಚ್.ಎಂ.ಕೃಷ್ಣಮೂರ್ತಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಡಿ.ಆರ್. ರವಿಶಂಕರ್ ಅವರ ವಾದ ಆಲಿಸಿದ ನ್ಯಾಯಪೀಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ವೃತ್ತದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಪುರಾತತ್ವ ಇಲಾಖೆ ಆಯುಕ್ತರು, ಪುರಾತತ್ವ ಇಲಾಖೆಯ ಉಪ ನಿರ್ದೇಶಕರು, ಮಾಗಡಿ ನಗರಾಭಿವೃದ್ಧಿ ಪ್ರಾಧಿಕಾರ, ಮಾಗಡಿ ಪುರಸಭೆ, ರಾಮನಗರ ಜಿಲ್ಲಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.



ಅರ್ಜಿಯಲ್ಲಿ ಏನಿದೆ?: ನಾಡಪ್ರಭು ಕೆಂಪೇಗೌಡರ ಕೋಟೆ, ಕೋಟೆಯ ಕಂದಕ ಮತ್ತು ಅವರಿಂದ ಸ್ಥಾಪಿತವಾದ ದೇವಾಲಯಗಳ ಅಭಿವೃದ್ಧಿ, ಸ್ಮಾರಕ, ಶಿಲ್ಪಗಳು, ಒತ್ತುವರಿಯಾಗಿರುವ ಕೋಟೆಯನ್ನು ಸಂರಕ್ಷಿಸಬೇಕು. ಮೂರು ಕಡೆ ಕೋಟೆಯ ಕಂದಕ ಒತ್ತುವರಿಯಾಗಿದೆ. ಇದೇ ಜಾಗದಲ್ಲಿ ವ್ಯಾಪಾರ ಮಾಡಲು ಬೀದಿಬದಿ ವ್ಯಾಪಾರಿಗಳಿಗೆ ಪುರಸಭೆ ಅವಕಾಶ ಮಾಡಿಕೊಟ್ಟಿದೆ. ವ್ಯಾಪಾರಿಗಳು ಕೋಟೆಯ ಗೋಡೆಗಳಿಗೆ ಮೊಳೆ ಹೊಡೆದು ವಿರೂಪಗೊಳಿಸಿದ್ದಾರೆ. ಕಸ-ಕಡ್ಡಿಗಳನ್ನು ಎಸೆಯುವ ಮೂಲಕ ಕೋಟೆಯನ್ನು ತ್ಯಾಜ್ಯದ ಕೇಂದ್ರವನ್ನಾಗಿಸಲಾಗಿದೆ. ಕೋಟೆಯಲ್ಲಿ ಮಲ-ಮೂತ್ರ ವಿಸರ್ಜನೆ, ಮದ್ಯ ಸೇವನೆ ನಡೆಯುತ್ತಿದೆ. ಇದೆಲ್ಲವನ್ನೂ ನಿರ್ಬಂಧಿಸಿ, ಕೋಟೆಯನ್ನು ರಕ್ಷಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ವಿಭಜನೆ ಏಕಪಕ್ಷೀಯ–ಆಕ್ಷೇಪ: ನೋಟಿಸ್

ಬೆಂಗಳೂರು: ಮಹದೇವಪುರ ವಿಧಾನಸಭಾ ಕ್ಷೇತ್ರದ ಪ್ರದೇಶಗಳನ್ನು ಪೂರ್ವ ನಗರ ಪಾಲಿಕೆ ಮತ್ತು ದಕ್ಷಿಣ ನಗರ ಪಾಲಿಕೆ ನಡುವೆ ವಿಭಜನೆ ಮಾಡಿರುವುದನ್ನು ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ. ಈ ಸಂಬಂಧ ಪಿ.ಎಸ್. ಹರೀಶ್ ಮತ್ತು ಆರ್.ದಿಲೀಪ್ ಕುಮಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಡಿ. ಆರ್.ರವಿಶಂಕರ್ ಮತ್ತು ಎ.ಪಿ. ರಂಗನಾಥ್ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಡಿಸೆಂಬರ್ 17ಕ್ಕೆ ಮುಂದೂಡಿತು.

‘ಮಹದೇವಪುರ ವಿಧಾನಸಭಾ ಕ್ಷೇತ್ರದ ಗಣನೀಯ ಭಾಗವನ್ನು 2025ರ ಸೆಪ್ಟೆಂಬರ್ 2 ರಂದು ಹೊರಡಿಸಲಾಗಿರುವ ಅಧಿಸೂಚನೆಯ ಪ್ರಕಾರ ಪೂರ್ವ ನಗರ ಪಾಲಿಕೆಗೆ ಸೇರ್ಪಡೆ ಮಾಡಲಾಗಿದೆ ಮತ್ತು ಒಂದು ಪುಟ್ಟ ಭಾಗವನ್ನು ದಕ್ಷಿಣ ನಗರ ಪಾಲಿಕೆಗೆ ವರ್ಗಾಯಿಸಲಾಗಿದೆ. ಇದು ಅನಿಯಂತ್ರಿತ ಮತ್ತು ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ–2024ರ ಕಲಂ 26(3) ಉಲ್ಲಂಘನೆಯಾಗಿದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

‘ಅಂಬಲಿಪುರ, ಹರಳೂರು, ಕೈಕೊಂಡನಹಳ್ಳಿ, ಕಸವನಹಳ್ಳಿ, ಕೆಪಿಸಿಎಲ್ ಲೇ–ಔಟ್, ಜುನ್ನಸಂದ್ರ, ದೊಡ್ಡಕನ್ನಳ್ಳಿ ಸೇರಿ ಹಲವಾರು ಗ್ರಾಮಗಳನ್ನು ಮತದಾರರು, ವಸತಿ ಕಲ್ಯಾಣ ಸಂಘಗಳು ಮತ್ತು ಇತರ ಕಾರ್ಯಕರ್ತರ ಪರವಾಗಿ ಸಲ್ಲಿಸಲಾದ ಆಕ್ಷೇಪಣೆಗಳ ಹೊರತಾಗಿಯೂ ದಕ್ಷಿಣ ಮತ್ತು ಪೂರ್ವ ನಗರ ಪಾಲಿಕೆಗಳ ನಡುವೆ ಏಕಪಕ್ಷೀಯವಾಗಿ ವಿಂಗಡಿಸಲಾಗಿದೆ’ ಎಂದು ಅರ್ಜಿದಾರರು ದೂರಿದ್ದಾರೆ.

ಸಕಲೇಶಪುರ ತಾಲ್ಲೂಕಿನ ಹುರುಡಿ ಗ್ರಾಮದ ಹಸೀನಾ ಲತೀಫ್ ಅವರು ಸ್ನೇಹಿತೆ ದೀಪಾ ಅವರೊಂದಿಗೆ ಹಾಸನಾಂಬ ದೇವಿ ದರ್ಶನ ಪಡೆದರು

ಮುಸ್ಲಿಮರಿಂದಲೂ 'ಹಾಸನಾಂಬೆ' ದರ್ಶನ

ಪ್ರಜಾವಾಣಿ ವಾರ್ತೆ

ಹಾಸನ: ಹಾಸನಾಂಬೆ ದರ್ಶನೋತ್ಸವದ 3ನೇ ದಿನವಾದ ಶನಿವಾರ ಮುಸ್ಲಿಮರು ದರ್ಶನ ಪಡೆದರು. ಈ ಮೂಲಕ ಉತ್ಸವ ಸೌಹಾರ್ದದ ಸಂದೇಶ ಸಾರಿತು.

ವಿಜಯಪುರದ ಅನ್ವರ್ ಹುಸೇನ್ ಹಾಗೂ ಸಕಲೇಶಪುರ ತಾಲ್ಲೂಕಿನ ಹುರುಡಿ ಗ್ರಾಮದ ಹಸೀನಾ ಲತೀಫ್ ದರ್ಶನ ಪಡೆದರು. ವಿಜಯಪುರ ಜಿಲ್ಲೆಯಿಂದ ಸ್ನೇಹಿತರ ಜೊತೆ ಬಂದಿದ್ದ ಅನ್ವರ್ ವಕೀಲರು. ₹ 300 ಟಿಕೆಟ್ ಪಡೆದು ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದರು.

'ಸೃಷ್ಟಿಕರ್ತ ಎಲ್ಲರಿಗೂ ಒಂದೇ. ದೇವರು, ದೈವ ಭಕ್ತಿಗೆ ಭೇದವಿಲ್ಲ. ದಯೆ, ಕರುಣೆಯಲ್ಲಿ ಇಲ್ಲದ ಭಿನ್ನತೆ ನಮ್ಮಲ್ಲಿ ಏಕೆ? ಎಲ್ಲರೂ ಒಂದೇ. ಹಾಗಾಗಿ ನಾನು ದರ್ಶನಕ್ಕೆ ಬಂದೆ' ಎಂದು ಅನ್ವರ್ ಹೇಳಿದರು.

'3 ವರ್ಷಗಳಿಂದ ದರ್ಶನ ಪಡೆಯುತ್ತಿದ್ದೇನೆ. ಸ್ನೇಹಿತರು ದರ್ಗಾಕ್ಕೆ ಬರುತ್ತಾರೆ. ನಾವು ಅವರೊಟ್ಟಿಗೆ ದೇವರ ದರ್ಶನಕ್ಕೆ ಬರುತ್ತೇವೆ' ಎಂದರು.

ಸ್ನೇಹಿತೆ ಜೊತೆ ದರ್ಶನ ಪಡೆದ ಹಸೀನಾ: ಸಕಲೇಶಪುರ ತಾಲ್ಲೂಕಿನ ಹುರುಡಿ ಗ್ರಾಮದ ಹಸೀನಾ ಲತೀಫ್, ಸ್ನೇಹಿತೆ ದೀಪಾ ಹಾಗೂ ಕುಟುಂಬದೊಂದಿಗೆ ದರ್ಶನ ಪಡೆದರು.

ನಂತರ ಮಾತನಾಡಿ, 'ಮೂರು ವರ್ಷಗಳಿಂದ ದರ್ಶನ ಪಡೆಯುತ್ತಿದ್ದೇನೆ. ನನಗೆ ಯಾವುದೇ ಧರ್ಮದ ಭೇದವಿಲ್ಲ. ಸಾಮಾನ್ಯ ಸಾಲಿನಲ್ಲಿ ನಿಂತೇ ದರ್ಶನ ಪಡೆದೆ' ಎಂದರು.

3 ತಿಂಗಳಾದರೂ ಬಾರದ ವೇತನ

ಎನ್‌ಎಚ್‌ಎಂನ ಗುತ್ತಿಗೆ, ಹೊರಗುತ್ತಿಗೆಯ 30 ಸಾವಿರ ನೌಕರರಿಗಿಲ್ಲ ಹಬ್ಬಗಳ ಸಂಭ್ರಮ

• ಮಲ್ಲಿಕಾರ್ಜುನ ನಾಲವಾರ

ಯಾದಗಿರಿ: ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್‌ಎಚ್‌ಎಂ) ಅಡಿ ರಾಜ್ಯದ ಆರೋಗ್ಯ ಇಲಾಖೆ ಕಚೇರಿಗಳು, ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ, ಹೊರಗುತ್ತಿಗೆ ಸಿಬ್ಬಂದಿಗೆ ಮೂರು ತಿಂಗಳಿಂದ ವೇತನ ಬಂದಿಲ್ಲ. ಸುಮಾರು 30 ಸಾವಿರ ನೌಕರರಿಗೆ ಹಬ್ಬಗಳ ಸಂಭ್ರಮ ಇಲ್ಲವಾಗಿದೆ.

ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಶುಶ್ರೂಷಕರು, ಪ್ರಯೋಗಾಲಯ ತಂತ್ರಜ್ಞರು, ಔಷಧ ವಿತರಕರು, ಆರೋಗ್ಯ ಸಂರಕ್ಷಣಾಧಿಕಾರಿ, ಆರೋಗ್ಯ ವ್ಯವಸ್ಥಾಪಕರು, ಸಂಯೋಜಕರು, ನೇತ್ರ ಸಹಾಯಕರು ಸೇರಿ 130ಕ್ಕೂ ಹೆಚ್ಚು ಹುದ್ದೆಗಳಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆಯಲ್ಲಿ ಈ ನೌಕರರು ಕೆಲಸ ಮಾಡುತ್ತಿದ್ದಾರೆ. ಸಂಬಳವಿಲ್ಲದೆ ಪರದಾಡುತ್ತಾ ಸಂಕಷ್ಟದಲ್ಲಿ ದಿನ ದೂಡುತ್ತಿದ್ದಾರೆ.

'ಅಕ್ಟೋಬರ್ ತಿಂಗಳು ಬಹುತೇಕ ಮುಗಿಯುತ್ತಿದ್ದರೂ ಜುಲೈ ತಿಂಗಳ ವೇತನವೇ ಬಂದಿಲ್ಲ. ಗಣೇಶ ಚತುರ್ಥಿ, ದಸರಾ ಹಬ್ಬಗಳನ್ನು ಹೇಗೋ ಕಳೆದಿದ್ದೇವೆ. ಮುಂಬರುವ ದೀಪಾವಳಿ ಹಬ್ಬವನ್ನು ಕತ್ತಲಲ್ಲಿ ಆಚರಿಸುವ ಸ್ಥಿತಿ ಬಂದಿದೆ. ಸರ್ಕಾರದ ಭಾಗವಾಗಿ ಕೆಲಸ ಮಾಡಿದ್ದರೂ ಸರಿಯಾಗಿ ಸಂಬಳ ಸಿಗದೆ ತಿಂಗಳ ಕೊನೆಯಲ್ಲಿ ಇನ್ನೊಬ್ಬರ ಮುಂದೆ ಹಣಕ್ಕಾಗಿ ಕೈಚಾಚುವ ಸ್ಥಿತಿ ಇದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ರಾಜ್ಯ ಪದಾಧಿಕಾರಿಯೊಬ್ಬರು ಅಲವತ್ತುಕೊಂಡರು.

'ನಾಲ್ಕೈದು ನೌಕರರು ನನಗೆ ಕರೆ ಮಾಡಿ ₹5,000 ಮನೆ ಬಾಡಿಗೆಗೆ ಸಾಲ ಕೇಳಿದ್ದಾರೆ. ಮತ್ತೊಬ್ಬರು ಮಗಳ ಆಸ್ಪತ್ರೆಯ ವೆಚ್ಚಕ್ಕೆ ಕೈಚಾಚಿದ್ದಾರೆ. ಇನ್ನೊಬ್ಬರು ಮಕ್ಕಳ ಶಾಲೆಯ ಶುಲ್ಕ, ವಾಹನ ಬಾಡಿಗೆಗೆ ಹಣ ಕೇಳಿದ್ದಾರೆ. ಹೀಗೆ, ವೇತನ ಇಲ್ಲದೆ ಒಬ್ಬರಲ್ಲ ಒಬ್ಬರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಮಾತ್ರ ವೇತನ ಪಾವತಿಗೆ ಮುಂದಾಗುತ್ತಿಲ್ಲ' ಎಂದು ದೂರಿದರು.

'ಸಂಘದ ಗೌರವ ಅಧ್ಯಕ್ಷ ಆಯನೂರು ಮಂಜುನಾಥ್ ಅವರು ಯೋಜನೆಯ ನಿರ್ದೇಶಕರು, ಆರೋಗ್ಯ ಇಲಾಖೆಯ ಸಚಿವರನ್ನು ಭೇಟಿಯಾಗಿ ನೌಕರರ ಸಂಕಷ್ಟವನ್ನು ಮನವರಿಕೆ ಮಾಡಿದ್ದಾರೆ. ವಿಳಂಬಕ್ಕೆ ತಾಂತ್ರಿಕ ಕಾರಣದ ನೆಪ ಹೇಳಿದ್ದಾರೆ. ಸರ್ಕಾರದ ಬಳಿ ಗುತ್ತಿಗೆ ನೌಕರರ ವಾರ್ಷಿಕ ₹56 ಕೋಟಿ ವೇತನ ಕೊಡುವಷ್ಟು ದುಡ್ಡಿಲ್ಲವೇ' ಎಂದು ಅವರು ಪ್ರಶ್ನಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಎನ್‌ಎಚ್‌ಎಂ ನಿರ್ದೇಶಕರು ಸಿಗಲಿಲ್ಲ.

ಅನುದಾನ ಬಾರದಕ್ಕೆ ವೇತನ ವಿಳಂಬವಾಗಿದೆ. ಈ ಬಗ್ಗೆ ವರದಿಯನ್ನು ಕಳುಹಿಸಿದ್ದು, ಒಂದು ವಾರದಲ್ಲಿ ಪಾವತಿ ಆಗಲಿದೆ
ಡಾ.ಮಹೇಶ ಬಿರಾದಾರ, ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ

'ಸ್ಪರ್ಶ ಖಾತೆಗೆ ಬದಲಾವಣೆಯ ನೆಪ'

'ನೌಕರರ ಈಗಿರುವ ಖಾತೆಗಳನ್ನು ಸ್ಪರ್ಶ ಖಾತೆಗೆ ಜೋಡಣೆ ಮಾಡಿ, ಬದಲಾವಣೆ ಮಾಡುತ್ತಿರುವುದರಿಂದ ವೇತನ ವಿಳಂಬ ಆಗುತ್ತಿರುವುದಾಗಿ ಅಧಿಕಾರಿಗಳು ನೆಪ ಹೇಳುತ್ತಿದ್ದಾರೆ. ಆದರೆ, ವೇತನ ಮಾತ್ರ ಬಿಡುಗಡೆ ಮಾಡುತ್ತಿಲ್ಲ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ರಾಜ್ಯ ಅಧ್ಯಕ್ಷ ಶ್ರೀಕಾಂತ ಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ತಾಂತ್ರಿಕ ಕಾರಣಕ್ಕೆ ತಡವಾಗುತ್ತಿದ್ದು, 10 ದಿನಗಳಲ್ಲಿ ಕೊಡುವುದಾಗಿ 20 ದಿನಗಳಿಂದ ಇದನ್ನೇ ಅಧಿಕಾರಿಗಳು ಉಚ್ಚರಿಸುತ್ತಿದ್ದಾರೆ. ಈ ಹಿಂದೆ ಇದೇ ರೀತಿ ತಡವಾಗಿದ್ದಾಗ 15ನೇ ಹಣಕಾಸು ಯೋಜನೆಯ ಅನುದಾನವನ್ನು ಬಳಸಿಕೊಂಡು ಚೆಕ್ ಮೂಲಕ ಕೊಟ್ಟಿದ್ದರು. ಈಗಲೂ ಆ ಮಾದರಿ ಪಾಲಿಸಬೇಕು' ಎಂದರು.

ಸುದ್ದಿ 2 ನಿಮಿಷ

ಋತುಚಕ್ರ ರಜೆ ನೀತಿ: ಶೀಘ್ರ ನಿಯಮ– ಸಂತೋಷ್ ಲಾಡ್

ಬೆಂಗಳೂರು: 'ಮಹಿಳಾ ಉದ್ಯೋಗಿಗಳಿಗೆ ಪ್ರತಿ ತಿಂಗಳು ಒಂದು ದಿನದ ವೇತನಸಹಿತ ಮುಟ್ಟಿನ ರಜೆ ನೀಡುವುದನ್ನು ಜಾರಿ ಮಾಡಲು ನಿಯಮ ರೂಪಿಸಲಾಗುವುದು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸರ್ಕಾರ ಕಾನೂನು ಮಾಡಿದರೆ ಕಂಪನಿಗಳು ಪಾಲನೆ ಮಾಡಲೇಬೇಕು. ಈ ನೀತಿ ಜಾರಿ ಸಂಬಂಧ ಮಸೂದೆ ಮಂಡಿಸಲಾಗುವುದು ಅಥವಾ ಸುಗ್ರೀವಾಜ್ಞೆ ಹೊರಡಿಸಲಾಗುವುದು' ಎಂದರು.

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ 'ಋತುಚಕ್ರ ನೀತಿ 2025'ಕ್ಕೆ ಅನುಮೋದನೆ ನೀಡಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಲಾಡ್, 'ಇದನ್ನು ಕಂಪನಿಗಳು ಕೇವಲ ಒಂದು ಕಾನೂನು ಎಂಬ ದೃಷ್ಟಿಯಲ್ಲಿ ಪರಿಗಣಿಸದೆ, ಮಾನವೀಯ ದೃಷ್ಟಿಯಿಂದಲೂ ನೋಡಬೇಕು' ಎಂದರು.

'ಮುಟ್ಟಿನ ರಜೆ ಕೊಡಬೇಕು ಎಂಬ ಕಾರಣಕ್ಕೆ ಕಂಪನಿಗಳು ಮಹಿಳಾ ಉದ್ಯೋಗಿಗಳನ್ನು ಕೆಲಸಕ್ಕೆ ಹೆಚ್ಚು ನೇಮಿಸಿಕೊಳ್ಳಲು ಹಿಂದೇಟು ಹಾಕಬಹುದಲ್ಲವೇ' ಎಂಬ ಪ್ರಶ್ನೆಗೆ, 'ಒಮ್ಮೆ ಜಾರಿ ಮಾಡಿ ಅದರ ಸಾಧಕ ಬಾಧಕ ನೋಡೋಣ. ಹಲವು ಕಂಪನಿಗಳು ಈ ನೀತಿಯನ್ನು ಈಗಾಗಲೇ ಪಾಲಿಸುತ್ತಿವೆ' ಎಂದರು.

'ಮಹಿಳಾ ಉದ್ಯೋಗಿಗೆ ಮುಟ್ಟಿನ ರಜೆ ಕೊಡಬೇಕು ಎಂಬ ಸಾಮಾನ್ಯ ಜ್ಞಾನ, ಸೂಕ್ಷ್ಮತೆ ಕಂಪನಿಗಳಿಗೆ ಇರಬೇಕು. ಹೆಣ್ಣು ಮಕ್ಕಳ ಸಮಸ್ಯೆಯನ್ನು ಕಂಪನಿಗಳು ಅರ್ಥ ಮಾಡಿಕೊಳ್ಳಬೇಕು. ಹೆಚ್ಚು ರಜೆ ಕೊಟ್ಟರೆ ಸಮಸ್ಯೆ ಆಗಲಿದೆ ಎಂಬ ದೂರುಗಳು ಬಂದರೆ, ಅದನ್ನು ಪರಿಗಣಿಸಿ ಏನು ಮಾಡಬೇಕು ಎಂಬ ಬಗ್ಗೆ ಪರಿಶೀಲಿಸಲಾಗುವುದು' ಎಂದೂ ಲಾಡ್ ಹೇಳಿದರು.

'ಡಿನ್ನರ್ ಮೀಟಿಂಗ್‌ಗೂ ರಾಜಕೀಯಕ್ಕೂ ಸಂಬಂಧವಿಲ್ಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಬಿಹಾರ ಚುನಾವಣೆ ಬಳಿಕ ಸಚಿವ ಸಂಪುಟ ಪುನರ್‌ರಚನೆ ಆಗ ಬಹುದೇನೋ. ಆದರೆ, ಮುಖ್ಯಮಂತ್ರಿ ಬದಲಾವಣೆ ವಿಚಾರ ಪಕ್ಷಕ್ಕೆ ಬಿಟ್ಟಿದ್ದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, '34 ಮಂದಿ ಸಚಿವರಾಗಿದ್ದಾರೆ. ಉಳಿದ ಆಕಾಂಕ್ಷಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕಾಗುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಮುಖ್ಯಮಂತ್ರಿ ಅವರು ಕರೆದಿರುವ ಡಿನ್ನರ್ ಮೀಟಿಂಗ್‌ಗೂ ರಾಜಕೀಯಕ್ಕೂ ಸಂಬಂಧವಿಲ್ಲ, ವಿರೋಧ ಮಾಡುವವರು ಸಲ್ಲದ ಮಾತು ಹೇಳುತ್ತಿದ್ದಾರೆ ಅಷ್ಟೆ' ಎಂದು ಪ್ರತಿಪಾದಿಸಿದರು.

ಸಿ.ಎಂ ಯಾಕಾಗಬಾರದು –ಪರಮೇಶ್ವರ

ಹುಬ್ಬಳ್ಳಿ: 'ಮುಖ್ಯಮಂತ್ರಿ ಆಗುವ ಆಸೆ ಇದೆಯೇ' ಎಂಬ ಪ್ರಶ್ನೆಗೆ ಗೃಹ ಸಚಿವ ಪರಮೇಶ್ವರ ಅವರು, 'ಯಾಕಾಗಬಾರದು' ಎಂದು ಪ್ರತಿಕ್ರಿಯಿಸಿದ್ದಾರೆ.

ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಎಲ್ಲ ಶಾಸಕರಿಗೆ ಸಚಿವರಾಗುವ ಆಸೆ ಇರುತ್ತದೆ. ಸಂಪುಟ ಪುನರ್ ರಚನೆ, ಮೂರು ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಸೇರಿ ವಿಷಯಗಳ ಬಗ್ಗೆ ಮುಖ್ಯಮಂತ್ರಿ, ವರಿಷ್ಠರು ನಿರ್ಧರಿಸುವರು' ಎಂದರು.

ಕಾಂಗ್ರೆಸ್ ನಾಯಕರೇ ಹೇಳಿದಂತೆ ನವೆಂಬರ್‌ಗೆ ಕ್ರಾಂತಿ ಆಗುವುದೋ, ಜನವರಿಯಲ್ಲಿ ಸಂಕ್ರಾಂತಿ ಆಗುವುದೋ ಗೊತ್ತಿಲ್ಲ. ಮುಖ್ಯಮಂತ್ರಿ ಕುರ್ಚಿ ಖಾಲಿಯಾಗುವುದು ನಿಶ್ಚಿತ
ಬಿ.ಶ್ರೀರಾಮುಲು ಬಿಜೆಪಿ ನಾಯಕ

ಯಾವ ಸಂಪುಟ ವಿಸ್ತರಣೆಯೂ ಇಲ್ಲ, ಎಲ್ಲಾ ಗಾಳಿಸುದ್ದಿ: ಡಿಕೆಶಿ

ಒಂದನೇ ಪುಟದಿಂದ...

'ಸುದ್ದಿ ತಿರುಚುವುದಾದರೆ, ನಾನು, ನಿಮಗೆ (ಮಾಧ್ಯಮ) ಸಹಕಾರ ನೀಡುವುದಿಲ್ಲ. ಕಾರ್ಯಕ್ರಮಗಳಿಗೆ ಕರೆಯುವುದೂ ಇಲ್ಲ, ಮಾಧ್ಯಮಗೋಷ್ಠಿ ಕರೆಯುವುದೂ ಇಲ್ಲ' ಎಂದರು.

'ಮುಖ್ಯಮಂತ್ರಿ ಆಗುವ ಕಾಲ ಹತ್ತಿರ ಇದೆ ಎಂದು ಹೇಳುವ ಅಗತ್ಯ ನನಗೆ ಇಲ್ಲ. ನನಗೆ ನನ್ನ ಗುರಿ ಗೊತ್ತಿದೆ. ಭಗವಂತ ನನಗೆ ಯಾವಾಗ ಅವಕಾಶ ಕೊಡುತ್ತಾನೊ ಕೊಡಲಿ. ಮಾಧ್ಯಮಗಳು ರಾಜಕಾರಣ ಮಾಡುವುದು ಬೇಡ' ಎಂದರು.

'ಬಹಿರಂಗವಾಗಿ ಮಾತನಾಡುವುದು ಸಲ್ಲ': 'ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ನಾವು (ಸಚಿವರು, ಶಾಸಕರು) ಯಾರೂ ಇದರ ಬಗ್ಗೆ ಮಾತನಾಡಬಾರದು' ಎಂದು ಕಾರ್ಮಿಕ ಸಚಿವ ಸಂತೋಷ ಲಾಡ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಗೊಂದಲ ಸೃಷ್ಟಿಸಬಾರದು. ನಮಗೆ ಏನಾದರೂ ಬೇಕಾದರೆ ಹೈಕಮಾಂಡ್‌ಗೆ ಹೇಳಬೇಕೇ ಹೊರತು ಮಾಧ್ಯಮಗಳಿಲ್ಲ. ಏನೇ ಇದ್ದರೂ ಅಲ್ಲಿಯೇ ಹೇಳಲಿ. ಯಾರನ್ನು ಮಂತ್ರಿ ಮಾಡಬೇಕೆಂದು ಹೈಕಮಾಂಡ್ ನಿರ್ಧರಿಸಲಿದೆ' ಎಂದರು.

ಹೈಕಮಾಂಡ್ ಹೇಳಿದರೆ ಅಧಿಕೃತ: ಪ್ರಿಯಾಂಕ್

'ಅಧಿಕಾರ ಹಂಚಿಕೆ, ಸಂಪುಟ ಪುನರ್ ರಚನೆ ಬಗ್ಗೆ ಹಾದಿಬೀದಿ ಮಾತುಗಳಿಗೆ ಮಾನ್ಯತೆ ಇಲ್ಲ. ಈ ಕುರಿತು ಹೈಕಮಾಂಡ್ ನಾಯಕರು ಹೇಳಿದರೆ ಮಾತ್ರ ಅಧಿಕೃತ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷದ ನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಹೇಳಿಕೆ ನೀಡಬೇಕು. ಬಹಿರಂಗ ಹೇಳಿಕೆ ನೀಡುವವರಿಗೆ ನೋಟಿಸ್ ಕೊಡಲಾಗಿದೆ. ಇನ್ನೂ ಕೊಡುತ್ತಾರೆ' ಎಂದು ಸುಳಿವು ನೀಡಿದರು.

'ಮುಖ್ಯಮಂತ್ರಿ ಕರೆದಿರುವ ಸಚಿವರ ಔತಣ ಕೂಟಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ. ಔತಣದಲ್ಲಿ ನಾಟಿ ಕೋಳಿ ಸಿಗಬಹುದು. ನನಗಂತೂ ಸೋಮವಾರ, ಮಂಗಳವಾರ ಎನ್ನುವುದೇನಿಲ್ಲ. ನಮ್ಮದು ನಂಬಿಕೆಯ ಪ್ರವೃತ್ತಿ. ಮುದ್ದೆ, ಸೊಪ್ಪಿನ ಸಾರು ಬಡಿಸಿದರೂ ಊಟ ಮಾಡುತ್ತೇವೆ' ಎಂದರು.

ಬಿಹಾರ ಚುನಾವಣೆ ಹಣಕ್ಕಾಗಿ ಸಚಿವರ ಸಭೆ: ಆರ್. ಅಶೋಕ

ಬೆಂಗಳೂರು: 'ಬಿಹಾರದ ಚುನಾವಣೆಗೆ ಕಾಂಗ್ರೆಸ್ ಪಕ್ಷ ಕರ್ನಾಟಕವನ್ನು ಎಟಿಎಂ ಮಾಡಿಕೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರನ್ನು ಔತಣಕೂಟಕ್ಕೆ ಆಹ್ವಾನಿಸಿರುವುದು ಹಣ ಸಂಗ್ರಹಕ್ಕಾಗಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಸಚಿವರು ತಮ್ಮ ಇಲಾಖೆಯಿಂದ ಎಷ್ಟು ಕೊಡುತ್ತಾರೆ. ಯಾವ ಇಲಾಖೆಗೆ ಎಷ್ಟು ಗುರಿ ನಿಗದಿ ಮಾಡಬೇಕು ಎನ್ನುವ ಕುರಿತು ಔತಣಕೂಟದಲ್ಲಿ ಚರ್ಚಿಸುತ್ತಾರೆ. ನಂತರ ಎಲ್ಲ ಹಣ ಒಗ್ಗೂಡಿಸಿ ಬಿಹಾರಕ್ಕೆ ಕಳುಹಿಸುತ್ತಾರೆ' ಎಂದರು.

ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ಬಳಿ ₹300 ಕೋಟಿ ಮೌಲ್ಯದ ಚಿನ್ನದ ಗಟ್ಟಿ ಸಿಕ್ಕಿದೆ. ಹಣ ಸಾಗಣೆ ಮಾಡುವುದು ಕಷ್ಟ ಎಂಬ ಕಾರಣಕ್ಕೆ ಚಿನ್ನದ ರೂಪದಲ್ಲಿ ಬಿಹಾರಕ್ಕೆ ಸಾಗಿಸಲಾಗುತ್ತಿದೆ. ರಾಜ್ಯದ ಚಿನ್ನವನ್ನು ಬಿಹಾರಕ್ಕೆ ಕಳಿಸಲು ಸಂಚು ನಡೆಯುತ್ತಿದೆ ಎಂದು ದೂರಿದರು.

ರಾಜ್ಯ ಸರ್ಕಾರದಲ್ಲಿ ನಡೆಯುತ್ತಿರುವ ಚಟುವಟಿಕೆ ಗಮನಿಸಿದರೆ ನವೆಂಬರ್ ಕ್ರಾಂತಿ ಖಚಿತ. ಮುಖ್ಯಮಂತ್ರಿ ಬದಲಾವಣೆ ಆಗುತ್ತದೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಲು ಕ್ಷಣಗಣನೆ ಆರಂಭವಾಗಿದೆ. ಹಾಗಾಗಿಯೇ, ಸಚಿವರು, ಶಾಸಕರು ನೋಟಿಸ್‌ಗೂ ಬಗ್ಗದೆ ಬಹಿರಂಗ ಹೇಳಿಕೆ ನೀಡುತ್ತಿದ್ದಾರೆ ಎಂದರು.

ಸಿಎಜಿಗೆ ಕಸಾಪ ಲೆಕ್ಕ ಪರಿಶೋಧನೆ

ಬೆಂಗಳೂರು: ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಭಾರತೀಯ ಮಹಾ ಲೇಖಪಾಲರಿಂದ (ಸಿಎಜಿ) ಲೆಕ್ಕ ಪರಿಶೋಧನೆ ನಡೆಸಲು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಿರ್ಧರಿಸಿದೆ.

ಜಮಖಂಡಿಯಲ್ಲಿ ನಡೆದ ಕಾರ್ಯಕಾರಿ ಸಮಿತಿಯ ತೀರ್ಮಾನಂತೆ ಈ ಬಗ್ಗೆ ಪರಿಷತ್ತು ಕ್ರಮ ಕೈಗೊಂಡಿದೆ. ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಎಲ್ಲ ಖರ್ಚು–ವೆಚ್ಚಗಳು, 2023–24ನೇ ಸಾಲಿನಲ್ಲಿ ಕಸಾಪ ನಡೆಸಿದ ಹಣಕಾಸಿನ ವ್ಯವಹಾರದ ಬಗ್ಗೆ ಲೆಕ್ಕ ಪರಿಶೋಧನೆ ನಡೆಸಲಾಗುತ್ತದೆ. ಈ ಸಂಬಂಧ ಭಾರತೀಯ ಮಹಾ ಲೇಖಪಾಲರಿಗೆ ಪತ್ರ ಬರೆಯಲಾಗಿದೆ ಎಂದು ಕಸಾಪ ಮಾಧ್ಯಮ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರ ಮೂರ್ತಿ ತಿಳಿಸಿದ್ದಾರೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜತೆಗೂ ಚರ್ಚಿಸಿ ಅವರ ಒಪ್ಪಿಗೆ ಪಡೆಯಲಾಗಿದೆ. ಶೀಘ್ರವೇ ಲೆಕ್ಕ ಪರಿಶೋಧನೆ ನಡೆಯುವ ಸಾಧ್ಯತೆಯಿದೆ. ಈ ಲೆಕ್ಕ ಪರಿಶೋಧನೆಯಿಂದ ಆರ್ಥಿಕ ಪಾರದರ್ಶಕತೆಯನ್ನು ಪಡೆದು, ಪರಿಶುದ್ಧತೆಯ ಉನ್ನತ ಪರಂಪರೆಯನ್ನು ಮುಂದುವರಿಸಲು ಕಾರ್ಯಕಾರಿಣಿ ತೀರ್ಮಾನಿಸಿದೆ ಎಂದು ಹೇಳಿದ್ದಾರೆ.

'ಅತಿಥಿ'ಗಳ ನೇಮಕಕ್ಕೆ ಸರ್ಕಾರದ ನಿರ್ಧಾರ

ಒಂದನೇ ಪುಟದಿಂದ...

'1995ರ ನಂತರದ 10 ವರ್ಷಗಳಲ್ಲಿ ಆರಂಭವಾಗಿರುವ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಪ್ರಕ್ರಿಯೆ ಮುಖ್ಯಮಂತ್ರಿ ಅನುಮತಿ ಕೊಡುತ್ತಿದ್ದಂತೆಯೇ ಆರಂಭವಾಗಲಿದೆ' ಎಂದು ತಿಳಿಸಿದರು.

'ಅಂಗವಿಕಲ ಮಕ್ಕಳಿಗೆ ಚಿಕಿತ್ಸೆ ಹಾಗೂ ಶಿಕ್ಷಣ ಎರಡಕ್ಕೂ ಅವಕಾಶವಾಗಲು ಇಲಾಖೆಯಿಂದ ಎರಡು ವಸತಿಯುತ ಶಾಲೆ ಆರಂಭಿಸ ಲಾಗುತ್ತಿದೆ' ಎಂದು ಸಚಿವರು ಹೇಳಿದರು.

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು–01

ಹೆಚ್‌ಸಿಸಿ ಸಂ. 51/2018 ದಿನಾಂಕ: 10.10.2025

ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ Justice Clock Display ಬಳಕೆಗಾಗಿ ಅಸ್ತಿತ್ವದಲ್ಲಿರುವ 03 ಸಂಖ್ಯೆಯ ಸಕ್ರಿಯ ಎಲ್ಇಡಿ ವಿಡಿಯೋವಾಲ್‌ಗಳ ಖರೀದಿ/ ಉನ್ನತೀಕರಣಕ್ಕಾಗಿ ಉನ್ನತೀಕರಣಕ್ಕಾಗಿ ಟೆಂಡರನ್ನು Karnataka Public Procurement Portal ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ನ್ನು ದಿನಾಂಕ: 27.10.2025 ರ 4:00 ಗಂಟೆಯೊಳಗೆ ಆಸಕ್ತರು upload ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು https://kppp.karnataka.gov.in/#/portal/searchTender/live ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/–
(ಎನ್.ಜಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಹಾಗೂ ಅಂಗೀಕರಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/3220/ಎಂಎಎ/25–26

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ

ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ. ರಸ್ತೆ, ಬೆಂಗಳೂರು–09.
ದೂರವಾಣಿ: 080–22131430, Email ID: egovbangalorenorth@gmail.com

ಸಂಖ್ಯೆ: ಎ1/ಸ.ಶಿ.ಕ./ಹೊ.ಮಾ.ಸಂ.ಸೇ/ಟೆಂಡರ್/01/2025–26 ದಿನಾಂಕ: 04.10.2025

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಉತ್ತರ ಜಿಲ್ಲೆಯ ಜಿಲ್ಲಾ ಕಛೇರಿ ಹಾಗೂ ಬ್ಲಾಕ್ ಕಛೇರಿಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರನ್ನು ಈ ಕೆಳಕಂಡಂತೆ ಹುದ್ದೆವಾರು ಆಹ್ವಾನಿಸಲಾಗಿದೆ.

ಹೊರಗುತ್ತಿಗೆ ಸೇವೆಯನ್ನು ನೀಡಲು ಬಯಸುವ ಅರ್ಹ ಸಂಸ್ಥೆಗಳು ಇ–ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ: www.kppp.karnataka.gov.in ಹಾಗೂ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 7483379906 & 9480426817.

ಹುದ್ದೆಗಳ ವಿವರ: ಕಂಪ್ಯೂಟರ್ ಪ್ರೋಗ್ರಾಮರ್‌ಗಳು–4, ಡಾಟಾ ಎಂಟ್ರಿ ಆಪರೇಟರ್‌ಗಳು–5, ಲೆಕ್ಕ ಸಹಾಯಕರು–4, 'ಡಿ' ದರ್ಜೆ–5, **ಒಟ್ಟು–18, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 17.10.2025.

ಸಹಿ/– ಉಪನಿರ್ದೇಶಕರು ಹಾಗೂ
ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು
ಸ.ಶಿ.ಕ, ಬೆಂಗಳೂರು ಉತ್ತರ ಜಿಲ್ಲೆ.

ವಾ.ಸಾ.ಸಂ.ಇ/ವಾಪ್ರ/3218/ಆಕಾರ್/2025–26

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ಉಪವಿಭಾಗ, ಹೊನ್ನಾವರ–581334

ಸಂ. ಸಅಸಂ,/ಟೆಂಡರು/APC Camp/ವಿವ–/2025–26, ದಿನಾಂಕ: 06.10.2025

ಟೆಂಡರ ಪ್ರಕಟಣೆ

2025–26 ನೇ ಸಾಲಿಗೆ ಹೊನ್ನಾವರ ಅರಣ್ಯ ವಿಭಾಗದಲ್ಲಿ ಅಪ್ಸರಕೊಂಡ–ಮುಗಳಿ ವೈಲ್ಡ್‌ಲೈಫ್ ಸ್ಯಾಂಕ್ಚುರಿಯಲ್ಲಿ ಕಳ್ಳಬೇಟೆ ತಡೆ ಶಿಬಿರ (Anti poaching camp) ನಿರ್ಮಾಣ ಕಾಮಗಾರಿಯ 1 ಯುನಿಟ್ಟಿಗೆ ದಿನಾಂಕ: 16.10.2025 ರಂದು ಇ–ಪ್ರೊಕ್ಯೂರಮೆಂಟ್ ಟೆಂಡರ ಕರೆಯಲಾಗಿದೆ. ಸದರ ಕಾಮಗಾರಿಯ ಅಂದಾಜು ಮೊತ್ತ: ರೂ. 12.46 ಲಕ್ಷ ಆಗಿರುತ್ತದೆ.

ಆಸಕ್ತ ಟೆಂಡರುದಾರರು https://kppp.karnataka.gov.in ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08387–295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಹೊನ್ನಾವರ ಉಪವಿಭಾಗ, ಹೊನ್ನಾವರ.

DIPR/DK/KSMCA/596/25-26 Dt.10.10.2025

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ತುಮಕೂರು.

ಸಂಖ್ಯೆ : ಕಾ.ಇಂ./ಪಂ.ರಾ.ಇಂ.ವಿ./ತುಮ/ತಾಂ.ಶಾ./ಟೆಂಡರ್/2025–26
ದಿನಾಂಕ : 08–10–2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 10/2025-26

(ಕೆ.ಪಿ.ಪಿ. ಪೋರ್ಟಲ್ ಮುಖಾಂತರ – ಏಕ ಮತ್ತು ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-1, KW-3 & KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ **1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು – 560 025, ದೂರವಾಣಿ : 080–2248 5867, 080–2248 5927** ರಲ್ಲಿ ಹಾಗೂ ಪಂಚಾಯತ್‌ರಾಜ್ ಇಂಜಿನಿಯರಿಂಗ್ / ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಅರ್ಹ (ಸಿವಿಲ್) ನೊಂದಾಯಿಸಿದ ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ 2025–26 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಮಲ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ, 2024–25 ನೇ ಸಾಲಿನ ಮಳೆ ಪರಿಹಾರದ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ : 5054, 2022–23 ಮತ್ತು 2023–24 ನೇ ಸಾಲಿನ ಲೆಕ್ಕ ಶೀರ್ಷಿಕೆ : 5054–03–337–0–75–422/423 ರ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕಾರ್ಯಕ್ರಮ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ–ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

1) RDPR/2025-26/RD/WORK_INDENT15602/CALL-3, 2) RDPR/2025-26/OW/WORK_INDENT18746/CALL-2, 3) RDPR/2025-26/RD/WORK_INDENT18027/CALL-2, 4) RDPR/2025-26/RD/WORK_INDENT18694/CALL-2, 5) RDPR/2025-26/RD/WORK_INDENT16695/CALL-2, 6) RDPR/2025-26/RD/WORK_INDENT15605/CALL-2, 7) RDPR/2025-26/RD/ WORK_INDENT_16821/CALL-2, 8) RDPR/2025-26/RD/WORK_INDENT 16615/CALL-2) ಕಾಮಗಾರಿಗಳ ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಏಕ ಮತ್ತು ದ್ವಿ–ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು **ವೆಬ್‌ಸೈಟ್ : http://www.kppp.karnataka.gov.in** ಮುಖಾಂತರ **ದಿನಾಂಕ : 08–10–2025 ರಿಂದ 16–10–2025 ರ ಬೆಳಗೆ 11.30 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ. ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯ ಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ.** ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. **ದೂರವಾಣಿ ಸಂಖ್ಯೆ : 0816–2272620** ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

ಡಿಐಪಿಆರ್/ತುಮಕೂರು/37/ಮಣಿಪಾಲ್/2025–26

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್ ಬಾದ್, ಮೈಸೂರು 10
(Ph. No: 0821-2979772, E-mail: khsdrp.divmys@gmail.com)
ಸಂಖ್ಯೆ:/ಆಕುಕ/ಇಂವಿ/ಕಾ.ಅ/ಮೈ/ಸಇ–1,2,3/ಟೆಂಡರ್–15/4210–422–SCSP/2025-26 ದಿ:08.10.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ಥಿ ಮತ್ತು ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರು/ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಸಾಮಾನ್ಯ ಹಾಗೂ CAT-II(A) ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ. 90.00 ಲಕ್ಷಗಳು ಕನಿಷ್ಠ ರೂ.40.00 ಲಕ್ಷಗಳಾಗಿರುತ್ತದೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು:–

1. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ:**30.10.2025 ರಂದು 16.00 ಗಂಟೆಯವರೆಗೆ**
2. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : **31.10.2025 ರಂದು 16.30 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp.karnataka gov in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2: ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

DIPR/DDMYS/1062/KSMCA/567/2025-26

ಪೋಕ್ಸೊ: ಕಲಾವಿದೆ ವಿರುದ್ಧ ವಿಚಾರಣೆಗೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೋಕ್ಸೊ ಪ್ರಕರಣದಲ್ಲಿ ಬೆಂಗಳೂರಿನ ಕಲಾವಿದೆ ಅರ್ಚನಾ ಪಾಟೀಲ ವಿರುದ್ಧ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ.

'ಪೋಕ್ಸೊ ಕಾಯ್ದೆಗೆ ಬಾಲಕ–ಬಾಲಕಿ ಎಂಬ ಲಿಂಗಬೇಧವಿಲ್ಲ. ಹೂವಿನಂತೆ ಅರಳಬೇಕಾದ ವಯೋಮಾನದಲ್ಲಿ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳನ್ನು ತಡೆಯಲು ರೂಪಿಸಿರುವ ಕಠಿಣ ಶಾಸನವಾಗಿದೆ' ಎಂದು ಪೋಕ್ಸೊ ಕಾಯ್ದೆಯನ್ನು ವಿಶದಪಡಿಸಿದ್ದ ಹೈಕೋರ್ಟ್, ದೇಶದಲ್ಲೇ ಮೊದಲು ಎನ್ನಬಹುದಾದ ಪ್ರಕರಣವೊಂದರಲ್ಲಿ ಮಹಿಳೆಯ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ರದ್ದುಪಡಿಸಲು ಆಗಸ್ಟ್ 18ರಂದು ನಿರಾಕರಿಸಿತ್ತು.

ಪ್ರಕರಣದ ಆರೋಪಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠವು ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಲು ನಿರ್ದೇಶನ ನೀಡಿದೆ.

ಆರೋಪಿ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ, 'ಪೋಕ್ಸೊ ಕಾಯ್ದೆಯ ಸೆಕ್ಷನ್ 3(1) (ಎ) ರಿಂದ 3(1)(ಸಿ) ವರೆಗಿನ ಸೆಕ್ಷನ್‌ಗಳು ನಿರ್ದಿಷ್ಟ ಲಿಂಗದವರಿಗೆ ಅನ್ವಯವಾಗುತ್ತದೆ. ಈ ಪ್ರಕರಣಕ್ಕೆ ಅನ್ವಯ ಆಗುವುದಿಲ್ಲ' ಎಂದು ವಾದಿಸಿದರು.

ಚಿತ್ರಕಲೆ ಹೇಳಿಕೊಡುವುದಾಗಿ ಮನೆಗೆ ಕರೆಸಿಕೊಂಡು 13 ವರ್ಷದ ಮಗನ ಮೇಲೆ ಅರ್ಚನಾ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಸಂತ್ರಸ್ತ ಬಾಲಕನ ತಾಯಿ ಎಚ್‌ಎಎಲ್ ಠಾಣೆಗೆ 2024ರ ಜೂನ್ 6ರಂದು ದೂರು ನೀಡಿದ್ದರು.

'ನನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ಆರೋಪಿತ ಮಹಿಳೆಯು ಹೈಕೋರ್ಟ್ ಮೆಟ್ಟಿಲೇರಿದ್ದರು

'ಪರಿಸರಕ್ಕಾಗಿ ನಾವು' ಸಂಘಟನೆ ಹಮ್ಮಿಕೊಂಡಿದ್ದ ವಿಚಾರಸಂಕಿರಣದಲ್ಲಿ ಒಕ್ಕೊರಲ ಧ್ವನಿ

ಪಂಪ್ಡ್‌ಸ್ಟೋರೇಜ್ ಯೋಜನೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರಾವತಿ ಮತ್ತು ವಾರಾಹಿ ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು ಪಶ್ಚಿಮ ಘಟ್ಟದ ಸಂರಕ್ಷಿತ ಪ್ರದೇಶಗಳಿಂದ ಹಿಂತೆಗೆದುಕೊಳ್ಳಬೇಕು ಎಂಬ ಒಕ್ಕೊರಲ ಧ್ವನಿ 'ಪರಿಸರಕ್ಕಾಗಿ ನಾವು' ಸಂಘಟನೆ ಶನಿವಾರ ಹಮ್ಮಿಕೊಂಡಿದ್ದ ವಿಚಾರಸಂಕಿರಣದಲ್ಲಿ ಮೂಡಿಬಂತು.

ಭವಿಷ್ಯದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಪರಿಸರಕ್ಕೆ ಪೂರಕವಾಗಿ, ಕಾನೂನು ರಕ್ಷಣಾ ನಿಯಮಗಳಡಿ ರೂಪಿಸಬೇಕು. ಭಾರತದ ಹವಾಮಾನ ಮತ್ತು ಇಂಧನ ಗುರಿಗಳನ್ನು ಸ್ಥಳೀಯವಾಗಿ, ವಿಕೇಂದ್ರಿತ ವ್ಯವಸ್ಥೆಯಡಿ ಪರ್ಯಾಯ ಯೋಜನೆಗಳ ಮೂಲಕ ಸಾಧಿಸಬೇಕು ಎಂದು ವಿಚಾರಸಂಕಿರಣದಲ್ಲಿ ನಿರ್ಣಯ ಮಂಡಿಸಲಾಯಿತು.

ಶರಾವತಿ ಮತ್ತು ವಾರಾಹಿ ಪಂಪ್ಡ್ ಸ್ಟೋರೇಜ್ ಯೋಜನೆಗಳು ಅಧಿಸೂಚಿತ ವನ್ಯಜೀವಿ ಅಭಯಾರಣ್ಯಗಳ ಒಳಗೆ ಬರುವುದರಿಂದ ಇದು 1972ರ ವನ್ಯಜೀವಿ (ಸಂರಕ್ಷಣೆ) ಕಾಯ್ದೆಯ 29ನೇ ವಿಧಿಯ ಉಲ್ಲಂಘನೆಯಾಗಿದೆ. ಈ ಯೋಜನೆಗಳಿಂದಾಗಿ ಭೂಕುಸಿತವಾಗುವ ಸಾಧ್ಯತೆ ಇದೆ. ಇಂಗಾಲವನ್ನು ಹಿಡಿದಿಟ್ಟುಕೊಳ್ಳುವ ಭಾರತದ ಪ್ರಮುಖ ಸಂಪನ್ಮೂಲ ಮತ್ತು ಜೀವವೈವಿಧ್ಯ ತಾಣಗಳಿಗೆ ಯೋಜನೆಯಿಂದ ಹಾನಿಯಾಗಲಿದೆ ಎಂದು ತಜ್ಞರು ಎಚ್ಚರಿಸಿದರು.

ನವೀಕರಿಸಬಹುದಾದ ಇಂಧನ ಯೋಜನೆಗಳು ದೇಶದ ಅಭಿವೃದ್ಧಿಗೆ ಅಗತ್ಯ. ಆದರೆ, ಈ ಹೆಸರಲ್ಲಿ ಪ್ರಸ್ತಾವವಾಗುತ್ತಿರುವ ಯೋಜನೆಗಳು ಪರಿಸರಕ್ಕೆ ಪೂರಕವಾಗಿಲ್ಲ. ಸುಸ್ಥಿರವಾಗಿಯೂ ಇಲ್ಲ. ಕಾಡು, ನದಿ, ವನ್ಯಜೀವಿಗಳಿಗೆ ಧಕ್ಕೆ ತರುವ ರೀತಿಯಲ್ಲಿ ಯೋಜನೆಗಳನ್ನು ರೂಪಿಸಬಾರದು ಎಂದು ಒತ್ತಾಯಿಸಿದರು.

ವಿದ್ಯುತ್ ಮತ್ತು ಹವಾಮಾನ ನೀತಿ ವಿಶ್ಲೇಷಕ ಶಂಕರ್ ಶರ್ಮಾ, ಪರಿಸರವಾದಿ ಅಖಿಲೇಶ್ ಚಿಪ್ಲಿ, 'ಮಲ್ನಾಡ್ ಮ್ಯಾಪಿಂಗ್' ಸಂಶೋಧಕಿ ನಿರ್ಮಲ ಗೌಡ ವಿಚಾರ ಮಂಡಿಸಿದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ, ಕಪ್ಪತಗುಡ್ಡ ನಂದಿವೇರಿ ಮಠದ ಶಿವಕುಮಾರ ಸ್ವಾಮೀಜಿ, ನಿಡಸೋಸಿ ದುರದುಂಡೀಶ್ವರ ಸಿದ್ಧ ಸಂಸ್ಥಾನದ ನಿಜಲಿಂಗೇಶ್ವರ ಸ್ವಾಮೀಜಿ, ಸಾಮಾಜಿಕ ಹೋರಾಟಗಾರ ಇಂದೂಧರ ಹೊನ್ನಾಪುರ, ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಸಹಿತ ಅನೇಕರು ಯೋಜನೆಯ ವಿರುದ್ಧದ ಹೋರಾಟಕ್ಕೆ ಬೆಂಬಲವಾಗಿ ಮಾತನಾಡಿದರು.



'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಅಪಾಯಗಳು' ವಿಚಾರಸಂಕಿರಣದಲ್ಲಿ ಎ.ಟಿ. ರಾಮಸ್ವಾಮಿ, ಮಹಿಮ ಪಟೇಲ್, ಕೆ. ಅಮರನಾರಾಯಣ, ಡಾ.ಅಂಜನಪ್ಪ ಟಿ.ಎಚ್, ನ್ಯಾ. ಎನ್ ಸಂತೋಷ್ ಹೆಗ್ಡೆ, ಬೇಲಿಮಠ ಶಿವರುದ್ರ ಸ್ವಾಮೀಜಿ, ನ್ಯಾ. ವಿ. ಗೋಪಾಲಗೌಡ,, ನಿರ್ಮಲ ಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಭಿಪ್ರಾಯಗಳು

ಪರಿಸರ ಮತ್ತು ಕಾನೂನಿನ ಅನ್ವಯ ಈ ಯೋಜನೆಗಳು ತಪ್ಪಾಗಿವೆ. ಇದನ್ನು ಸರಿಪಡಿಸದೇ ಇದ್ದರೆ ಮುಂದೆ ಅನಾಹುತಕ್ಕೆ ಕಾರಣವಾಗಬಹುದು. ಅದಕ್ಕಾಗಿಯೇ ಶರಾವತಿ ಮತ್ತು ವಾರಾಹಿ ಪಂಪ್ಡ್ ಸ್ಟೋರೇಜ್ ಯೋಜನೆಗಳ ವಿರುದ್ಧದ ಹೋರಾಟದಲ್ಲಿ ನಾನು ಭಾಗಿಯಾಗಿದ್ದೇನೆ
ನ್ಯಾ. ಸಂತೋಷ್ ಎನ್. ಹೆಗ್ಡೆ ವಿಶ್ರಾಂತ ಲೋಕಾಯುಕ್ತ

ಸಂವಿಧಾನದ ಅಡಿಯಲ್ಲಿ ಕೆಲಸ ಮಾಡಿ ಎಂದು ನಿಮ್ಮನ್ನು ಜನರು ಆಯ್ಕೆ ಮಾಡಿರುವುದು. ಪರಿಸರವನ್ನು ನಾಶ ಮಾಡಲು ನಿಮ್ಮನ್ನು ಆಯ್ಕೆ ಮಾಡಿರುವುದಲ್ಲ. ಸರ್ಕಾರ ಸರಿದಾರಿಗೆ ಬಾರದೇ ಇದ್ದರೆ ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸುವುದು ಸೇರಿದಂತೆ ಎಲ್ಲ ಕಾನೂನು ಹೋರಾಟಗಳೊಂದಿಗೆ ನಾನಿದ್ದೇನೆ
ನ್ಯಾ. ವಿ. ಗೋಪಾಲಗೌಡ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಪಶ್ಚಿಮ ಘಟ್ಟದ ಹೃದಯವನ್ನು ಸರ್ಕಾರ ಬಗೆಯುತ್ತಿದೆ. ಪರಿಸರಕ್ಕಿಂತ ಚುನಾವಣಾ ರಾಜಕೀಯವೇ ಮುಖ್ಯವಾಗಿದೆ. ವಿವೇಕವಂತ, ವಿಚಾರವಂತ, ಬುದ್ಧಿವಂತ ಜನರಿಂದಲೇ ಪ್ರಕೃತಿಗೆ ತೊಂದರೆ ಒದಗಿಬಂದಿದೆ. ಇದನ್ನು ತಡೆಯಬೇಕಿದೆ
ಎ.ಟಿ. ರಾಮಸ್ವಾಮಿ, ಅಧ್ಯಕ್ಷ, 'ಪರಿಸರಕ್ಕಾಗಿ ನಾವು' ಸಂಘಟನೆ

ಪಶ್ಚಿಮಘಟ್ಟದಲ್ಲಿ ಟಿಂಬರ್ ಮಾಫಿಯಾವೇ ಎಲ್ಲ ಯೋಜನೆಗಳ ಹಿಂದೆ ಕೆಲಸ ಮಾಡುತ್ತಿದೆ. ಈ ಮಾಫಿಯಾಕ್ಕೆ ಅನುಕೂಲ ಮಾಡಿಕೊಳ್ಳಲು ಬೇರೆ ಬೇರೆ ಹೆಸರಲ್ಲಿ ಸರ್ಕಾರ ಯೋಜನೆ ಹಾಕಿಕೊಳ್ಳುತ್ತದೆ
ಕೆ. ಅಮರನಾರಾಯಣ, ನಿವೃತ್ತ ಐಎಎಸ್ ಅಧಿಕಾರಿ

ಅಫ್ಗನ್ ಸಚಿವರ ಸುದ್ದಿಗೋಷ್ಠಿ: ಪತ್ರಕರ್ತೆಯರಿಗೆ ನಿರ್ಬಂಧ

ಕೇಂದ್ರದಿಂದ ಪ್ರತಿಗಾಮಿ ನಡೆ, ಭಾರತೀಯ ಮಹಿಳೆಯರು ದುರ್ಬಲರು ಎಂದಂತಾಗಿದೆ: ವಿಪಕ್ಷಗಳ ವಾಗ್ದಾಳಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಭಾರತಕ್ಕೆ ಭೇಟಿ ನೀಡಿದ್ದ ಅಫ್ಗಾನಿಸ್ತಾನ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಅವರ ಸುದ್ದಿಗೋಷ್ಠಿಗೆ ಪತ್ರಕರ್ತೆಯರಿಗೆ ಅವಕಾಶ ನೀಡದಿರುವ ವಿಚಾರ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಶನಿವಾರ ಜಟಾಪಟಿಗೆ ಕಾರಣವಾಗಿದೆ.

ಈ ವಿಚಾರ ಮುಂದಿಟ್ಟುಕೊಂಡು ವಿಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ಹಾಗೂ ವಿದೇಶಾಂಗ ಸಚಿವ ಎಸ್.ಜೈಶಂಕರ್ ವಿರುದ್ಧ ಹರಿಹಾಯ್ದಿದ್ದು, 'ಈ ರೀತಿ ಸುದ್ದಿಗೋಷ್ಠಿ ನಡೆಸಿರುವುದು ಆಘಾತಕಾರಿ ಹಾಗೂ ಒಪ್ಪಲು ಸಾಧ್ಯವಿಲ್ಲ. ಇದು ಪ್ರತಿಗಾಮಿ ನಡೆ' ಎಂದಿವೆ.

'ಪತ್ರಕರ್ತೆಯರನ್ನು ದೂರ ಇಟ್ಟು ಸುದ್ದಿಗೋಷ್ಠಿ ನಡೆಸಲು ಅವಕಾಶ ನೀಡಲಾಗಿದೆ. ನಿಮ್ಮ ಪರವಾಗಿ ನಿಲ್ಲಲಾರದಷ್ಟು ತಾನು ದುರ್ಬಲ ಎಂಬುದಾಗಿ ಮೋದಿಯವರು ಭಾರತೀಯ ಮಹಿಳೆಯರಿಗೆ ಹೇಳಿದಂತಾಗಿದೆ' ಎಂದೂ ವಿಪಕ್ಷಗಳು ವಾಗ್ದಾಳಿ ನಡೆಸಿವೆ.

'ಈ ಘಟನೆ ಮಹಿಳೆಯರ ಗೌರವಕ್ಕೆ ಧಕ್ಕೆ ತಂದಿರುವುದನ್ನು ತೋರಿಸುತ್ತದೆ. ಮಹಿಳೆಯರ ಕುರಿತ ಇಂಥ ಧೋರಣೆ ಮೋದಿ ನೇತೃತ್ವದ ಸರ್ಕಾರದಲ್ಲಿ ಸಾಮಾನ್ಯವಾಗಿದೆ' ಎಂದು ಕಾಂಗ್ರೆಸ್ ತನ್ನ 'ಎಕ್ಸ್'ನಲ್ಲಿ ಟೀಕಿಸಿದೆ.

ಉದ್ದೇಶಪೂರ್ವಕ: 'ಅಫ್ಗಾನಿಸ್ತಾನದಲ್ಲಿರುವ ತಾಲಿಬಾನ್ ನೇತೃತ್ವದ ಸರ್ಕಾರದೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ಮರುಸ್ಥಾಪಿಸುವ ತಂತ್ರದ ಭಾಗವಾಗಿ ಕೇಂದ್ರ ಸರ್ಕಾರ ಇಂತಹ ನಿರ್ಧಾರ ಕೈಗೊಂಡಿರಬಹುದು. ಆದರೆ, ಉದ್ದೇಶಪೂರ್ವಕವಾಗಿ ಪತ್ರಕರ್ತೆಯರಿಗೆ ಅವಕಾಶ ನೀಡದಿರುವುದು ಹಾಗೂ ಅವರ ಹಕ್ಕುಗಳಿಗೆ ಅಗೌರವ ತೋರಿದ್ದನ್ನು ಒಪ್ಪಲಾಗದು' ಎಂದು ದೆಹಲಿ ಪತ್ರಕರ್ತರ ಸಂಘ ಹೇಳಿದೆ.

ರಾಯಭಾರ ಕಚೇರಿಯಲ್ಲಿ ನಡೆದಿದ್ದೇನು?

ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಿದ ಬಳಿಕ, ಸಚಿವ ಮುತ್ತಾಕಿ ಅವರು ಇಲ್ಲಿನ ಅಫ್ಗಾನಿಸ್ತಾನ ರಾಯಭಾರ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ್ದರು. ಪತ್ರಕರ್ತೆಯರನ್ನು ಹೊರತುಪಡಿಸಿ ಕೆಲವೇ ವರದಿಗಾರರಿಗೆ ಮಾತ್ರ ಸುದ್ದಿಗೋಷ್ಠಿಗೆ ಅವಕಾಶ ನೀಡಲಾಗಿತ್ತು.

'ಅಫ್ಗನ್ ಸರ್ಕಾರದ ನಿರ್ಧಾರ'

'ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಅವರ ಸುದ್ದಿಗೋಷ್ಠಿಗೆ ಪತ್ರಕರ್ತೆಯರಿಗೆ ಆಹ್ವಾನ ನೀಡದಿರುವುದು ಅಫ್ಗಾನಿಸ್ತಾನ ಸರ್ಕಾರದ ನಿರ್ಧಾರ. ಆ ರಾಷ್ಟ್ರದ ರಾಯಭಾರ ಕಚೇರಿ ಆವರಣದಲ್ಲಿ ಸುದ್ದಿಗೋಷ್ಠಿ ನಡೆದಿದ್ದು, ಇದು ಭಾರತದ ನಿಯಂತ್ರಣಕ್ಕೆ ಒಳಪಡುವುದಿಲ್ಲ' ಎಂದು ಕೇಂದ್ರ ಸರ್ಕಾರ ಶನಿವಾರ ಸ್ಪಷ್ಟಪಡಿಸಿದೆ.

ಸಚಿವ ಮುತ್ತಾಕಿ ಅವರ ಸುದ್ದಿಗೋಷ್ಠಿಗೆ ಪತ್ರಕರ್ತೆಯರಿಗೆ ಅವಕಾಶ ನೀಡದ ವಿಚಾರವಾಗಿ ಟೀಕಿಸುತ್ತಿರುವ ವಿರೋಧ ಪಕ್ಷಗಳಿಗೆ ಕೇಂದ್ರ ಸರ್ಕಾರ ತಿರುಗೇಟು ನೀಡಿದೆ.

'ಮುಂಬೈನಲ್ಲಿರುವ ಅಫ್ಗಾನಿಸ್ತಾನದ ಕಾನ್ಸುಲೇಟ್ ಜನರಲ್ ಅಧಿಕಾರಿಗಳು ಸುದ್ದಿಗೋಷ್ಠಿಗೆ ಆಹ್ವಾನ ನೀಡಿದ್ದು, ಇದರಲ್ಲಿ ಸರ್ಕಾರದ ಪಾತ್ರ ಇಲ್ಲ' ಎಂದು ಮೂಲಗಳು ಹೇಳಿವೆ.

ಮಹಿಳೆಯರಿಗೆ ಪ್ರತಿಯೊಂದು ವೇದಿಕೆಯಲ್ಲಿ ಪಾಲ್ಗೊಳ್ಳುವ ಹಕ್ಕಿದೆ. ಈಗ ಕಂಡುಬಂದಿರುವ ತಾರತಮ್ಯದ ಬಗ್ಗೆ ಪ್ರಧಾನಿ ಮೌನ ವಹಿಸಿದ್ದಾರೆ. ನಾರಿ ಶಕ್ತಿ ಕುರಿತ ನಿಮ್ಮ ಘೋಷಣೆಗಳು ಟೊಳ್ಳು ಎಂಬುದು ಜಗಜ್ಜಾಹೀರಾಗಿದೆ

ರಾಹುಲ್ ಗಾಂಧಿ, ಲೋಕಸಭೆಯಲ್ಲಿ ವಿಪಕ್ಷ ನಾಯಕ

ಮಹಿಳೆಯರು ಈ ದೇಶದ ಬೆನ್ನೆಲುಬು ಹಾಗೂ ಹೆಮ್ಮೆ. ದೇಶದ ಅತ್ಯಂತ ಸಮರ್ಥ ಮಹಿಳೆಯರನ್ನು ಅವಮಾನಿಸುವ ಇಂತಹ ನಡೆಗೆ ಹೇಗೆ ಅವಕಾಶ ಮಾಡಿಕೊಡಲಾಯಿತು? ಈ ಘಟನೆ ಕುರಿತು ಪ್ರಧಾನಿ ಮೋದಿ ತಮ್ಮ ನಿಲುವು ಸ್ಪಷ್ಟಪಡಿಸಬೇಕು

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಸಂಸದೆ

ಈ ಘಟನೆ ಮೂಲಕ ಭಾರತ ತನ್ನ ನೈತಿಕ ಹಾಗೂ ರಾಜತಾಂತ್ರಿಕ ನಿಲುವಿನಲ್ಲಿ ರಾಜಿ ಮಾಡಿಕೊಂಡಿದೆ. ಇದು ಶಿಷ್ಟಾಚಾರದಲ್ಲಿ ಲೋಪವಷ್ಟೆ ಅಲ್ಲ, ಸಾಂಕೇತಿಕವಾದ ಶರಣಾಗತಿಯೂ ಆಗಿದೆ

ಮನೋಜ್ ಕೆ.ಝಾ, ಆರ್‌ಜೆಡಿ ರಾಜ್ಯಸಭಾ ಸಂಸದ

ಭಾರತದಲ್ಲಿ ಪತ್ರಕರ್ತೆಯರನ್ನು (ತಾಲಿ) ಬ್ಯಾನ್ (ನಿಷೇಧ) ಮಾಡಲಾಗಿದೆ. ಅಂತರರಾಷ್ಟ್ರೀಯ ಹೆಣ್ಣು ಮಗು ದಿನದಂದು ನವದೆಹಲಿಯಲ್ಲಿ ಇಂತಹ ನಡೆಗೆ ಭಾರತ ಸರ್ಕಾರ ಒಪ್ಪಿಗೆ ನೀಡಿದ್ದು ಆಘಾತಕಾರಿ ಮತ್ತು ಸ್ವೀಕಾರಾರ್ಹವಲ್ಲ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಈ ಘಟನೆ ಬಗ್ಗೆ ತಿಳಿದು ನನಗೆ ಆಘಾತವಾಗಿದೆ. ತಮ್ಮ ಮಹಿಳಾ ಸಹೋದ್ಯೋಗಿಗಳಿಗೆ ಅವಕಾಶ ನೀಡದಿರುವುದನ್ನು ಪ್ರತಿಭಟಿಸಿ ಪುರುಷ ಪತ್ರಕರ್ತರು ಸುದ್ದಿಗೋಷ್ಠಿಯನ್ನು ಬಹಿಷ್ಕರಿಸಬೇಕಿತ್ತು

ಪಿ.ಚಿದಂಬರಂ, ಕಾಂಗ್ರೆಸ್‌ನ ಹಿರಿಯ ಸಂಸದ

ಇದು ಭಾರತದ ವಿದೇಶಾಂಗ ನೀತಿಯಲ್ಲಿನ ವೈಫಲ್ಯ. ಈ ಘಟನೆ ಅಂತರರಾಷ್ಟ್ರೀಯ ಮಹತ್ವದ ತಂತ್ರಗಾರಿಕೆ ಒಳಗೊಂಡ ರಾಜತಾಂತ್ರಿಕತೆಯನ್ನು ತೋರದು. ಮೋದಿ ಸರ್ಕಾರ ಶರಣಾಗಿರುವುದನ್ನು ತೋರಿಸುತ್ತದೆ

ಸಾಗರಿಕಾ ಘೋಷ್, ಟಿಎಂಸಿ ರಾಜ್ಯಸಭಾ ಸದಸ್ಯೆ

ಪ್ರತಿಗಾಮಿ, ತಾರತಮ್ಯದಿಂದ ಕೂಡಿದಂತಹ ಇಂತಹ ಮನವಿಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಸಚಿವ ಎಸ್.ಜೈಶಂಕರ್ ಒಪ್ಪಿದ್ದಾದರೂ ಹೇಗೆ? ಇದು ರಾಜತಾಂತ್ರಿಕತೆಯಲ್ಲ, ಇದು ದೇಶದ ಸಮಗ್ರತೆಯ ಸಂಪೂರ್ಣ ಶರಣಾಗತಿ

ಕನಿಮೊಳಿ, ಡಿಎಂಕೆ ಸಂಸದೆ

ಕರ್ನಾಟಕ ಪತ್ರಕರ್ತೆಯರ ಸಂಘದಿಂದ ಖಂಡನೆ

ಬೆಂಗಳೂರು: ಅಫ್ಗಾನಿಸ್ತಾನದ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿ ಅವರು ಆಯೋಜಿಸಿದ್ದ ಪತ್ರಿಕಾಗೋಷ್ಠಿಯಿಂದ ಪತ್ರಕರ್ತೆಯರನ್ನು ಹೊರಗಿಟ್ಟಿರುವ ಕ್ರಮವನ್ನು ಕರ್ನಾಟಕ ಪತ್ರಕರ್ತೆಯರ ಸಂಘವು ಖಂಡಿಸಿದೆ.

ಭಾರತದ ನೆಲದಲ್ಲಿ ನಡೆದಿರುವ ಈ ಉದ್ದೇಶಪೂರ್ವಕ ಲಿಂಗ ತಾರತಮ್ಯವು ಆತಂಕಕಾರಿ. ಇದು ಅಸಮಾನತೆ ಮತ್ತು ತಾರತಮ್ಯವನ್ನು ನಿಷೇಧಿಸುವ ಭಾರತದ ಸಂವಿಧಾನದ ವಿಧಿ 14 ಮತ್ತು 15ರ ಆಶಯಕ್ಕೆ ವಿರುದ್ಧವಾಗಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಈ ಪತ್ರಿಕಾಗೋಷ್ಠಿಯಿಂದ ದೂರ ಉಳಿದಿದೆ. ಆದರೆ, ಭಾರತದೊಳಗೆ ನಡೆಯುವ ಯಾವುದೇ ರಾಜತಾಂತ್ರಿಕ ಕಾರ್ಯಕ್ರಮವು ಇಂತಹ ಲಿಂಗ ತಾರತಮ್ಯವನ್ನು ಸಹಿಸದಂತೆ ನೋಡಿಕೊಳ್ಳುವ ನೈತಿಕ ಮತ್ತು ಸಾಂವಿಧಾನಿಕ ಜವಾಬ್ದಾರಿ ಭಾರತ ಸರ್ಕಾರಕ್ಕಿದೆ.

ಈ ತಾರತಮ್ಯದ ಕೃತ್ಯವನ್ನು ಭಾರತ ಸರ್ಕಾರವು ಕಟುವಾಗಿ ಖಂಡಿಸಿ ಹೇಳಿಕೆ ನೀಡಬೇಕು. ಭಾರತದಲ್ಲಿನ ಯಾವುದೇ ವಿದೇಶಿ ರಾಯಭಾರ ಕಚೇರಿಯ ಕಾರ್ಯಕ್ರಮವು ಲಿಂಗ ಸಮಾನತೆಯನ್ನು ಉಲ್ಲಂಘಿಸದಂತೆ ನೋಡಿಕೊಳ್ಳಲು ಸ್ಪಷ್ಟ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬೇಕು ಎಂದು ಸಂಘ ಆಗ್ರಹಿಸಿದೆ.

ದಾರುಲ್ ಉಲೂಮ್‌ಗೆ ಭೇಟಿ ನೀಡಿದ ಅಫ್ಗಾನ್ ವಿದೇಶಾಂಗ ಸಚಿವ ಮುತ್ತಾಕಿ ವಿದ್ಯಾರ್ಥಿಗಳತ್ತ ಕೈಬೀಸಿದರು — ಪಿಟಿಐ ಚಿತ್ರ

ದಾರುಲ್ ಉಲೂಮ್‌ನಲ್ಲೂ ಮತ್ತೆ ಪ್ರವೇಶ ನಿರಾಕರಣೆ?

ಲಖನೌ: ಉತ್ತರ ಪ್ರದೇಶದ ಸಹಾರನಪುರ ಜಿಲ್ಲೆಯ ದೇವಬಂದ್‌ನಲ್ಲಿರುವ ಇಸ್ಲಾಂ ಶಿಕ್ಷಣದ ಪ್ರತಿಷ್ಠಿತ ಸಂಸ್ಥೆ ದಾರುಲ್ ಉಲೂಮ್‌ಗೆ ಭೇಟಿ ನೀಡಿದ ಅಫ್ಗಾನಿಸ್ತಾನ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಾಕಿ ಅವರ ಕಾರ್ಯಕ್ರಮದ ವರದಿಗೆ ತೆರಳಿದ್ದ ಪತ್ರಕರ್ತೆಯರಿಗೆ ಶನಿವಾರ ಪ್ರವೇಶ ನಿರಾಕರಿಸಲಾಯಿತು ಎಂಬ ಆರೋಪಗಳು ಕೇಳಿಬಂದಿವೆ.

ಅಫ್ಗಾನಿಸ್ತಾನ ರಾಯಭಾರ ಕಚೇರಿಯಲ್ಲಿ ಶುಕ್ರವಾರ ಮುತ್ತಾಕಿ ಅವರು ನಡೆಸಿದ್ದ ಸುದ್ದಿಗೋಷ್ಠಿಗೂ ಪತ್ರಕರ್ತೆಯರಿಗೆ ಪ್ರವೇಶ ನಿರಾಕರಿಸಲಾಗಿತ್ತು. ಇದು ವಿವಾದವಾಗಿದ್ದು, ಕೇಂದ್ರ ಸರ್ಕಾರ ಹಾಗೂ ವಿರೋಧ ಪಕ್ಷಗಳ ನಡುವಿನ ಜಟಾಪಟಿಗೆ ಕಾರಣವಾಗಿದೆ. ಈ ಕಾರಣಕ್ಕೆ ದಾರುಲ್ ಉಲೂಮ್ ಕಾರ್ಯಕ್ರಮ ಕುರಿತು ಕೇಳಿಬಂದಿರುವ ಆರೋಪಗಳಿಗೆ ಮಹತ್ವ ಬಂದಿದೆ.

ಆದರೆ, ಈ ಆರೋಪಗಳನ್ನು ದೇವಬಂದ್ ತಳ್ಳಿಹಾಕಿದೆ.

'ಮುತ್ತಾಕಿ ಅವರ ಕಾರ್ಯಕ್ರಮಕ್ಕೆ ಪತ್ರಕರ್ತೆಯರ ಪ್ರವೇಶ ನಿರ್ಬಂಧಿಸುವಂತೆ ಯಾವುದೇ ನಿರ್ದೇಶನಗಳು ಇರಲಿಲ್ಲ' ಎಂದು ದೇವಬಂದ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ಅಶ್ರಫ್ ಉಸ್ಮಾನಿ ಹೇಳಿದ್ದಾರೆ.

'ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು ಹಾಗೂ ಭದ್ರತೆ ಕಾರಣಗಳಿಂದಾಗಿ ಮುತ್ತಾಕಿ ಅವರ ಉಪನ್ಯಾಸ ಕಾರ್ಯಕ್ರಮವನ್ನು ಕೊನೆ ಗಳಿಗೆಯಲ್ಲಿ ರದ್ದುಪಡಿಸಲಾಯಿತು. ಆದರೆ, ಕಾರ್ಯಕ್ರಮದ ವರದಿ ಮಾಡಲು ಕೆಲವೇ ಪತ್ರಕರ್ತೆಯರು ಹಾಜರಿದ್ದರು. ಇದು, ಪತ್ರಕರ್ತೆಯರ ಪ್ರವೇಶ ನಿರ್ಬಂಧ ವಿಧಿಸಿರಲಿಲ್ಲ ಎಂಬುದಕ್ಕೆ ಇದೇ ಸಾಕ್ಷಿ' ಎಂದೂ ಉಸ್ಮಾನಿ ಹೇಳಿದ್ದಾರೆ.

'ಕಾರ್ಯಕ್ರಮದ ವರದಿಗಾಗಿ ಬಂದಿದ್ದ ಪತ್ರಕರ್ತೆಯರಿಗೆ ಉಳಿದ ಪತ್ರಕರ್ತರ ಸಾಲಿನಲ್ಲಿಯೇ ಆಸನಗಳ ವ್ಯವಸ್ಥೆ ಮಾಡಲಾಗಿತ್ತು' ಎಂದ ಅವರು, 'ಪತ್ರಕರ್ತೆಯರನ್ನು ಪ್ರತ್ಯೇಕವಾಗಿ ಕೂರಿಸಲು ಪರದೆ ಹಾಕಿರಲಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಸಚಿವ ಮುತ್ತಾಕಿ ಅವರ ಕಾರ್ಯಕ್ರಮಕ್ಕೆ ಯಾರು ಹಾಜರಾಗಬೇಕು ಹಾಗೂ ಯಾರ ಪ್ರವೇಶಕ್ಕೆ ನಿರ್ಬಂಧ ವಿಧಿಸಬೇಕು ಎಂಬ ಕುರಿತು ಮುತ್ತಾಕಿ ಅವರ ಕಚೇರಿಯಿಂದಲೂ ಯಾವುದೇ ನಿರ್ಬಂಧಗಳು ಇರಲಿಲ್ಲ' ಎಂದು ಹೇಳಿದ್ದಾರೆ.

ಭವ್ಯ ಸ್ವಾಗತ: ಇದಕ್ಕೂ ಮುನ್ನ, ದಾರುಲ್ ಉಲೂಮ್‌ಗೆ ಭೇಟಿ ನೀಡಿದ ಅಮೀರ್ ಖಾನ್ ಮುತ್ತಾಕಿ ಅವರಿಗೆ ಭವ್ಯ ಸ್ವಾಗತ ಕೋರಲಾಯಿತು.

'ನಿರ್ಬಂಧ ಇರಲಿಲ್ಲ'

ಅಮೀರ್ ಖಾನ್ ಮುತ್ತಾಕಿ ಅವರ ಪತ್ರಿಕಾಗೋಷ್ಠಿಗೆ ಪತ್ರಕರ್ತೆಯರ ಪ್ರವೇಶವನ್ನು ಅಫ್ಗನ್ ವಿದೇಶಾಂಗ ಸಚಿವಾಲಯ ನಿರ್ಬಂಧಿಸಿರಲಿಲ್ಲ. ಇದು ಅಪಪ್ರಚಾರ ಅಷ್ಟೆ' ಎಂದು ಜಮಿಯಾತ್ ಉಲೇಮಾ–ಎ–ಹಿಂದ್ ಅಧ್ಯಕ್ಷ ಮೌಲಾನಾ ಅರ್ಷದ್ ಮದನಿ ಹೇಳಿದ್ದಾರೆ.

ಚಟಾಕಿ ಸುದ್ದಿ

ಇಂಡಿಗೊ ವಿಂಡ್‌ಶೀಲ್ಡ್‌ನಲ್ಲಿ ಬಿರುಕು

ಚೆನ್ನೈ (ಪಿಟಿಐ): ಮದುರೈನಿಂದ ಚೆನ್ನೈಗೆ ಬರುತ್ತಿದ್ದ ಇಂಡಿಗೊ ವಿಮಾನದ ಕಾಕ್‌ಪಿಟ್ ವಿಂಡ್‌ಶೀಲ್ಡ್ ಬಿರುಕುಬಿಟ್ಟಿರುವುದು ಪತ್ತೆಯಾಗಿ, ಪ್ರಯಾಣದ ನಡುವೆಯೇ ಆತಂಕ ಸೃಷ್ಟಿಯಾದ ಘಟನೆ ನಡೆದಿದೆ. ಆದರೆ, ಸಿಬ್ಬಂದಿ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸುವ ಮೂಲಕ ದುರಂತವೊಂದನ್ನು ತಪ್ಪಿಸಿದ್ದಾರೆ.

74 ಮಂದಿ ಪ್ರಯಾಣಿಕರಿದ್ದ ಇಂಡಿಗೊ ವಿಮಾನವು ಶುಕ್ರವಾರ ರಾತ್ರಿ 10 ಗಂಟೆ 7ನಿಮಿಷಕ್ಕೆ ಮದುರೈನಿಂದ ಹೊರಟು 11.30ಕ್ಕೆ ಚೆನ್ನೈಗೆ ಬರಬೇಕಿತ್ತು. ಈ ನಡುವೆ ವಿಂಡ್‌ಶೀಲ್ಡ್‌ನಲ್ಲಿ ಬಿರುಕು ಮೂಡಿರುವುದನ್ನು ಪೈಲಟ್ ಗಮನಿಸಿ, ಏರ್ ಟ್ರಾಫಿಕ್ ಕಂಟ್ರೋಲರ್‌ಗೆ (ಎಟಿಸಿ) ಮಾಹಿತಿ ನೀಡಿದ್ದಾರೆ.

ತಕ್ಷಣವೇ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ತುರ್ತು ಭೂ ಸ್ಪರ್ಶಕ್ಕೆ ಸಿದ್ಧತೆ ಕೈಗೊಂಡಟರು. ಸಂಪೂರ್ಣ ತನಿಖೆ ನಡೆಸುವಂತೆ ಡಿಜಿಸಿಎ ನಿರ್ದೇಶಿಸಿದೆ.

ರಿಲಯನ್ಸ್ ಪವರ್ ಸಿಎಫ್‌ಒ ಬಂಧನ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಪವರ್‌ನ ಸಿಎಫ್‌ಒ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ.

₹68 ಕೋಟಿ ನಕಲಿ ಬ್ಯಾಂಕ್ ಗ್ಯಾರಂಟಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಿಎಫ್‌ಒ ಅಶೋಕ್ ಪಾಲ್ ಅವರನ್ನು ಶುಕ್ರವಾರ ರಾತ್ರಿ ಬಂಧಿಸಲಾಗಿದೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ಮ್ಯಾಜಿಸ್ಟ್ರೇಟ್ ಮುಂದೆ ಅಶೋಕ್ ಅವರನ್ನು ಶನಿವಾರ ಹಾಜರುಪಡಿಸಿದ ಇ.ಡಿ., ಎರಡು ದಿನ ಕಸ್ಟಡಿಗೆ ಪಡೆಯಿತು. ಸೋಮವಾರ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಿದೆ ಎಂದು ಮೂಲಗಳು ತಿಳಿಸಿವೆ.

ಡಿಜಿಟಲ್ ದಾಳಿಗೆ ಒಳಗಾಗುವ ಅಪಾಯ ಹೆಚ್ಚು: ಸಿಜೆಐ ಗವಾಯಿ ಕಳವಳ

'ಹೆಣ್ಣು ಮಗು ರಕ್ಷಣೆ: ವಿಶೇಷ ಕಾನೂನು'

ಪ್ರಜಾವಾಣಿ ವಾರ್ತೆ

ನವದೆಹಲಿ: ಈಗಿನ ಡಿಜಿಟಲ್ ದಿನಗಳಲ್ಲಿ ಬಾಲಕಿಯರು ಸುಲಭವಾಗಿ ದಾಳಿಗೆ ಒಳಗಾಗುವ ಅಪಾಯ ಎದುರಿಸುತ್ತಿದ್ದಾರೆ. ಇಂತಹ ದೌರ್ಜನ್ಯಗಳಿಂದ ಬಾಲಕಿಯರನ್ನು ರಕ್ಷಿಸುವ ಸಂಬಂಧ ವಿಶೇಷ ಕಾನೂನು ರೂಪಿಸಬೇಕು ಹಾಗೂ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ತರಬೇತಿಯ ಅಗತ್ಯವಿದೆ ಎಂದು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್.ಗವಾಯಿ ಶನಿವಾರ ಹೇಳಿದರು.

'ಆನ್‌ಲೈನ್ ವೇದಿಕೆಗಳ ಮೂಲಕ ಕಿರುಕುಳ ನೀಡುವುದು, ಬೆದರಿಕೆ ಹಾಕುವುದು, ವೈಯಕ್ತಿಕ ದತ್ತಾಂಶಗಳ ದುರ್ಬಳಕೆ ಹಾಗೂ ಡೀಪ್‌ಫೇಕ್ ಚಿತ್ರಗಳನ್ನು ಬಳಸಿ ಹೆಣ್ಣು ಮಗುವಿನ ಮೇಲೆ ದೌರ್ಜನ್ಯ ನಡೆಯುತ್ತಿದೆ. ಇದನ್ನು ತಡೆಗಟ್ಟುವುದು ಮುಖ್ಯ' ಎಂದರು.

ಸುಪ್ರೀಂ ಕೋರ್ಟ್‌ನ ಬಾಲ ನ್ಯಾಯ ಸಮಿತಿಯು (ಜೆಜೆಸಿ) ಯುನಿಸೆಫ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಎಲ್ಲ ಭಾಗೀದಾರರ ವಾರ್ಷಿಕ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

'ಬಾಲಕಿಯರ ರಕ್ಷಣೆಗೆ ಸಾಂವಿಧಾನಿಕ ಮತ್ತು ಕಾನೂನಿನ ಖಾತರಿ ಇದ್ದರೂ, ದೇಶದಾದ್ಯಂತ ಅವರಿಗೆ ಮೂಲಭೂತ ಹಕ್ಕುಗಳು ಹಾಗೂ ಸೌಕರ್ಯಗಳನ್ನು ನಿರಾಕರಿಸಲಾಗುತ್ತಿದೆ' ಎಂದರು.

'ಹೆಣ್ಣುಮಗು ಸುಲಭವಾಗಿ ದಾಳಿಗೆ ಒಳಗಾಗುವ ಕಾರಣ, ಅವರು ಲೈಂಗಿಕ ಕಿರುಕುಳಕ್ಕೆ ಒಳಗಾಗುವ ಅಪಾಯ ಹೆಚ್ಚು. ಗುಪ್ತಾಂಗ ವಿರೂಪಗೊಳಿಸುವಿಕೆ, ಅಪೌಷ್ಟಿಕತೆ, ಭ್ರೂಣದ ಲಿಂಗ ಪತ್ತೆ ಬಳಿಕ ಗರ್ಭಪಾತ ಮಾಡಿಸುವುದು, ಮಾನವ ಕಳ್ಳಸಾಗಣೆ, ಬಾಲ್ಯವಿವಾಹದಂತಹ ಅಪಾಯ ಕೂಡ ಅವರು ಎದುರಿಸುತ್ತಾರೆ' ಎಂದು ಹೇಳಿದರು.

ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಅನ್ನಪೂರ್ಣಾ ದೇವಿ, ಯುನಿಸೆಫ್–ಇಂಡಿಯಾ ಪ್ರತಿನಿಧಿ ಸಿಂಥಿಯಾ ಮ್ಯಾಕ್‌ಕ್ಯಾಫ್ರಿ, ನ್ಯಾಯಮೂರ್ತಿ ಹಾಗೂ ಜೆಜೆಸಿ ಅಧ್ಯಕ್ಷೆ ಬಿ.ವಿ.ನಾಗರತ್ನ, ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ಉಪಸ್ಥಿತರಿದ್ದರು.

ಬಾಲಕಿಯರು ಕೇವಲ ದೈಹಿಕ ಬೆದರಿಕೆಗಳನ್ನು ಎದುರಿಸುತ್ತಿಲ್ಲ. ನಿಯಂತ್ರಣವೇ ಇಲ್ಲದಿರುವ ಡಿಜಿಟಲ್ ವೇದಿಕೆಗಳಿಂದಲೂ ಅವರು ಅಪಾಯ ಎದುರಿಸುತ್ತಿದ್ದಾರೆ

ಬಿ.ಆರ್.ಗವಾಯಿ, ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ

ವಿಚಾರಣೆಯಿಂದ ಹಿಂದೆ ಸರಿದ 16 ನ್ಯಾಯಮೂರ್ತಿಗಳು

ಐಎಫ್‌ಎಸ್ ಅಧಿಕಾರಿ ಪ್ರಕರಣ

ನವದೆಹಲಿ: ಉತ್ತರಾಖಂಡ ಕೇಡರ್‌ನ ಐಎಫ್‌ಎಸ್ ಅಧಿಕಾರಿ ಸಂಜೀವ್ ಚತುರ್ವೇದಿ ಅವರಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಇದುವರೆಗೆ ವಿಚಾರಣೆಯಿಂದ 16 ನ್ಯಾಯಮೂರ್ತಿಗಳು ಹಿಂದೆ ಸರಿದಿದ್ದಾರೆ. ಇದು ದೇಶದ ನ್ಯಾಯಾಂಗ ಇತಿಹಾಸದಲ್ಲೇ ದಾಖಲೆಯಾಗಿದೆ.

ಹೈಕೋರ್ಟ್‌ನಲ್ಲಿ ನಿರ್ದಿಷ್ಟ ವ್ಯಕ್ತಿಗೆ ಸಂಬಂಧಿಸಿದ ವಿಚಾರಣೆಯಿಂದ ಇಷ್ಟು ದೊಡ್ಡ ಸಂಖ್ಯೆಯಲ್ಲಿ ನ್ಯಾಯಮೂರ್ತಿಗಳು ಹಿಂದೆ ಸರಿದಿರುವ ಬೇರೆ ಉದಾಹರಣೆ ಇಲ್ಲ. ಜತೆಗೆ ಈ ಪ್ರಕರಣದಲ್ಲಿ ಯಾವುದೇ ನಿರ್ದಿಷ್ಟ ಕಾರಣ' ಉಲ್ಲೇಖಿಸದೆ ನ್ಯಾಯಮೂರ್ತಿಗಳು ವಿಚಾರಣೆಯಿಂದ ಹಿಂದೆ ಸರಿದಿರುವುದು ಕೂಡ ಅಪರೂಪದ ವಿದ್ಯಮಾನ ಎನಿಸಿದೆ.

ನ್ಯಾಯಮೂರ್ತಿ ಅಲೋಕ್ ವರ್ಮಾ ಅವರು, ಅ.8ರಂದು ದಿಢೀರ್ ವಿಚಾರಣೆಯಿಂದ ಹಿಂದೆ ಸರಿಯುವುದಾಗಿ ಹೇಳಿದ್ದರು. ಚತುರ್ವೇದಿ ಪ್ರಕರಣದಲ್ಲಿ ವಿಚಾರಣೆಯಿಂದ ಹಿಂದೆ ಸರಿದ 16ನೇ ನ್ಯಾಯಮೂರ್ತಿ ಇವರು. ಇದಕ್ಕೂ ಮುನ್ನ ಅಂದರೆ, ಕೇವಲ 12 ದಿನಗಳ ಹಿಂದಷ್ಟೇ ಈ ಪ್ರಕರಣದ ವಿಚಾರಣೆಯಿಂದ ನ್ಯಾಯಮೂರ್ತಿ ರವೀಂದ್ರ ಮೈಥಾನಿ ಹಿಂದೆ ಸರಿದಿದ್ದರು. ಇವರಿಬ್ಬರಿಗೆ ಮೊದಲು ನ್ಯಾಯಮೂರ್ತಿ ರಾಕೇಶ್ ತಾಪ್ಲಿಯಾಲ್ 2023ರಲ್ಲಿ, 2024ರ ಫೆಬ್ರುವರಿಯಲ್ಲಿ ನ್ಯಾಯಮೂರ್ತಿ ಮನೋಜ್ ತಿವಾರಿ ಅವರು ವಿಚಾರಣೆಯಿಂದ ಹಿಂದೆ ಸರಿದಿದ್ದರು.

'ಉದ್ದೇಶಪೂರ್ವಕ ಅಸಹಕಾರ' ತೋರುತ್ತಿದ್ದಾರೆ ಎಂದು ಆರೋಪಿಸಿ ಸಂಜೀವ್ ಚತುರ್ವೇದಿ, ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಮತ್ತು ಕೋರ್ಟ್ ರಿಜಿಸ್ಟ್ರಿ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿದ್ದಾರೆ

ವಿಚಾರಣೆಯಿಂದ ಹಿಂದೆ ಸರಿದವರು

ಇದುವರೆಗೆ ಇಬ್ಬರು ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳು, (ರಂಜನ್ ಗೊಗೊಯಿ ಮತ್ತು ಯು.ಯು ಲಲಿತ್–ಇಬ್ಬರೂ ನಿವೃತ್ತರಾಗಿದ್ದಾರೆ) ನಾಲ್ವರು ಹೈಕೋರ್ಟ್ ನ್ಯಾಯಮೂರ್ತಿಗಳು, ಇಬ್ಬರು ಅಧೀನ ನ್ಯಾಯಾಲಯದ ನ್ಯಾಯಮೂರ್ತಿಗಳು ಮತ್ತು ಎಂಟು ಮಂದಿ 'ಸಿಎಟಿ' ನ್ಯಾಯಮೂರ್ತಿಗಳು ಸಂಜೀವ್ ಚತುರ್ವೇದಿ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿದಿದ್ದಾರೆ.

ನಾಪತ್ತೆಯಾಗಿದ್ದ ಪ್ಯಾರಾ ಕಮಾಂಡೊಗಳ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಅನಂತನಾಗ್ ಜಿಲ್ಲೆಯ ಗಡೋಲ್ ಅರಣ್ಯದಲ್ಲಿ ನಾಪತ್ತೆಯಾಗಿದ್ದ ಇಬ್ಬರು ಪ್ಯಾರಾ ಕಮಾಂಡೊಗಳ ಮೃತದೇಹ ಪತ್ತೆಯಾಗಿದೆ. ಇದರೊಂದಿಗೆ ಕಳೆದ 5 ದಿನಗಳಿಂದ ನಡೆಯುತ್ತಿದ್ದ ಶೋಧ ಕಾರ್ಯಾಚರಣೆ ಶನಿವಾರ ಮುಕ್ತಾಯಗೊಂಡಿದೆ.

ಕಿಶ್ತ್ವಾರ್ ಅರಣ್ಯದಲ್ಲಿ ಅಕ್ಟೋಬರ್ 6 ಮತ್ತು 7ರ ಮಧ್ಯರಾತ್ರಿಯ ಕಾರ್ಯಾಚರಣೆ ವೇಳೆ ತೀವ್ರ ಹಿಮಪಾತವಾದ ಕಾರಣ ಕಾರ್ಯಾಚರಣೆಯ ಭಾಗವಾಗಿದ್ದ ಲ್ಯಾನ್ಸ್ ಹವಾಲ್ದಾರ್ ಪಲಾಶ್ ಘೋಷ್ ಹಾಗೂ ಲ್ಯಾನ್ಸ್ ನಾಯಕ್ ಸುಜಯ್ ಘೋಷ್ ಅವರು ಸಂಪರ್ಕ ಕಳೆದುಕೊಂಡು ನಾಪತ್ತೆಯಾಗಿದ್ದರು.

ಶುಕ್ರವಾರ ಒಬ್ಬ ಯೋಧನ ಮೃತದೇಹ ಪತ್ತೆಯಾಗಿದ್ದು, ಶನಿವಾರ ಮತ್ತೊಬ್ಬ ಯೋಧನ ಮೃತದೇಹ ಸಿಕ್ಕಿದೆ. ಹೀಗಾಗಿ ಶೋಧ ಕಾರ್ಯಾಚರಣೆಯನ್ನು ಮುಕ್ತಾಯಗೊಳಿಸಲಾಗಿದೆ

ಸೀಟು: ಸೂತ್ರ ಘೋಷಣೆ ಇಂದು

ಬಿಜೆಪಿ– ಮೈತ್ರಿಕೂಟ ಪಕ್ಷಗಳ ಮುಖಂಡರ ಜೊತೆ ಸಭೆ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ ವಿಧಾನಸಭಾ ಚುನಾವಣೆ - 2025

ನವದೆಹಲಿ (ಪಿಟಿಐ): ಬಿಹಾರದ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಮೈತ್ರಿಕೂಟದ ನಾಯಕರ ಜೊತೆ ಶನಿವಾರ ಸಭೆ ನಡೆಸಿದರು.

'ಎನ್‌ಡಿಎ ಮಿತ್ರಕೂಟದ ಜೊತೆ ಸೀಟು ಹಂಚಿಕೆ ಸಂಬಂಧಿಸಿದಂತೆ ಭಾನುವಾರ ಘೋಷಣೆ ಮಾಡಲಾಗುವುದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ದಿಲೀಪ್ ಜೈಸ್ವಾಲ್ ತಿಳಿಸಿದ್ದಾರೆ.

ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯ ಒಂದು ದಿನಕ್ಕೂ ಮುಂಚಿತವಾಗಿ ಈ ಸಭೆ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ, ಪಕ್ಷದ ಇತರೆ ಹಿರಿಯ ನಾಯಕರು ಸೇರಿ, ಪಕ್ಷದ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲಿದ್ದಾರೆ. ಇದೇ ನವೆಂಬರ್ 6 ಹಾಗೂ 11 ರಂದು ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ಸಂಯುಕ್ತ ಜನತಾದಳ, ಎಲ್‌ಜೆಪಿ (ರಾಮ್‌ವಿಲಾಸ್ ಪಾಸ್ವಾನ್)ಗೆ ಸೀಟು ಹಂಚಿಕೆ ವಿಚಾರವೂ ಅಂತಿಮಗೊಂಡಿದೆ. ಆದರೆ, ಮಿತ್ರಪಕ್ಷಗಳಾದ ಹಿಂದೂಸ್ತಾನ್ ಅವಾಮ್ ಮೋರ್ಚಾ(ಜಾತ್ಯತೀತ) ಮುಖ್ಯಸ್ಥ ಜಿತನ್ ರಾಮ್ ಮಾಂಝಿ ಹಾಗೂ ರಾಷ್ಟ್ರೀಯ ಲೋಕ್ ಮೋರ್ಚಾ (ಆರ್‌ಎಲ್‌ಎಂ)ನ ಮುಖ್ಯಸ್ಥ ಉಪೇಂದ್ರ ಕುಶ್ವಾಹಾ ಅವರು ಹೆಚ್ಚಿನ ಕ್ಷೇತ್ರಗಳಿಗೆ ಪಟ್ಟು ಮುಂದುವರಿಸಿದ್ದಾರೆ.

ಮೂಲಗಳ ಪ್ರಕಾರ, ಸಂಯುಕ್ತ ಜನತಾದಳ 101–102 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಬಿಜೆಪಿ 100 ಕ್ಷೇತ್ರಗಳಿಂದ ಕಣಕ್ಕಿಳಿಯುವ ನಿರೀಕ್ಷೆಯಿದೆ.

'ಎನ್‌ಡಿಎ ಮಿತ್ರಕೂಟದಲ್ಲಿ ಎಲ್ಲವೂ ಸರಿಯಾಗಿದೆ. ಸೀಟು ಹಂಚಿಕೆಯನ್ನು ಭಾನುವಾರ ಬೆಳಿಗ್ಗೆ 11 ಗಂಟೆಗೆ ಪ್ರಕಟಿಸಲಾಗುವುದು. ಮಿತ್ರಕೂಟವು ಒಗ್ಗಟ್ಟಿನಲ್ಲಿದೆ' ಎಂದು ಸಭೆಯ ಬಳಿಕ ದಿಲೀಪ್ ಜೈಸ್ವಾಲ್ ತಿಳಿಸಿದರು.

ಸಭೆಯಲ್ಲಿ ಬಿಜೆಪಿಯ ರಾಜಕೀಯ ವ್ಯವಹಾರಗಳ ಮುಖ್ಯಸ್ಥ ವಿನೋದ್ ತಾವ್ಡೆ, ಬಿಜೆಪಿಯ ಬಿಹಾರ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ಬಿಹಾರದ ಉಪಮುಖ್ಯಮಂತ್ರಿ ಸಮ್ರಾಟ್ ಚೌಧರಿ ಅವರು ಸಭೆಯಲ್ಲಿ ಭಾಗವಹಿಸಿ ವಿಸ್ತೃತವಾಗಿ ಚರ್ಚೆ ನಡೆಸಿದ್ದರು.

ತೃತೀಯರಂಗ ರಚಿಸಲು ಎಐಎಂಐಎಂ ಚಿಂತನೆ: ಬಿಹಾರದಲ್ಲಿ ಇಂಡಿಯಾ ಮೈತ್ರಿಕೂಟದಿಂದ ಹೊರಗುಳಿದಿರುವ ಎಐಎಂಐಎಂ ಅಲ್ಲಿನ ವಿಧಾನಸಭಾ ಚುನಾವಣೆಯಲ್ಲಿ 100 ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವ ಮತ್ತು ತೃತೀಯರಂಗವನ್ನು ರಚಿಸುವ ಬಗ್ಗೆ ಚಿಂತನೆ ನಡೆಸುತ್ತಿದೆ.

ಕೆಮ್ಮಿನ ಕಲುಷಿತ ಸಿರಪ್ ಸೇವಿಸಿದ್ದ ಮಕ್ಕಳ ಸಾವು ● ಸಿರಪ್ ತಯಾರಕ ಕಂಪನಿ ವಿರುದ್ಧ ಸಿಡಿಎಸ್‌ಸಿಒ ತನಿಖೆ

'ನಿಯಮ ಪಾಲನೆ: ಟಿಎನ್‌ಎಫ್‌ಡಿಎ ಲೋಪ'

ನವದೆಹಲಿ(ಪಿಟಿಐ): ಔಷಧೀಯ ಉತ್ಪನ್ನಗಳ ತಯಾರಿಕೆಗೆ ಸಂಬಂಧಿಸಿದ ಮೂಲಭೂತ ನಿಯಮಗಳನ್ನು ತಮಿಳುನಾಡು ಆಹಾರ ಮತ್ತು ಔಷಧ ಆಡಳಿತ (ಟಿಎನ್‌ಎಫ್‌ಡಿಎ) ಇಲಾಖೆ ಪಾಲನೆ ಮಾಡದೇ ಇರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಮೂಲಗಳು ಹೇಳಿವೆ.



'ಕೋಲ್ಡ್ರಿಫ್' ಕೆಮ್ಮಿನ ಸಿರಪ್ ಸೇವಿಸಿದ ನಂತರ ಮೂತ್ರಪಿಂಡ ಸಮಸ್ಯೆ ಕಾಣಿಸಿಕೊಂಡ ಕಾರಣ ಮಧ್ಯಪ್ರದೇಶದಲ್ಲಿ 22 ಮಕ್ಕಳು ಮೃತಪಟ್ಟಿವೆ ಎಂಬ ಆರೋಪಗಳಿವೆ. ಇದರ ಬೆನ್ನಲ್ಲೇ, ಸಿರಪ್ ತಯಾರಕ ಕಂಪನಿ ತಮಿಳುನಾಡಿನ ಕಾಂಚಿಪುರ ಜಿಲ್ಲೆಯ ಸ್ರೇಸನ್ ಫಾರ್ಮಾಸ್ಯುಟಿಕಲ್ಸ್ ವಿರುದ್ಧ ಕೈಗೊಂಡ ತನಿಖೆ ವೇಳೆ ಈ ಸಂಗತಿ ಗೊತ್ತಾಗಿದೆ ಎಂದು ಇವೇ ಮೂಲಗಳು ಹೇಳಿವೆ.

ಕರ್ತವ್ಯದಲ್ಲಿ ಆಗಿರುವ ಈ ಲೋಪಗಳ ಕುರಿತು ಪ್ರತಿಕ್ರಿಯೆ ಪಡೆಯಲು ಕಂಪನಿಯ ಅಧಿಕಾರಿಗಳು ಲಭ್ಯರಾಗಲಿಲ್ಲ ಎಂದು ಪಿಟಿಐ ತಿಳಿಸಿದೆ.

ಸ್ರೇಸನ್ ಫಾರ್ಮಾ ಮಾಲೀಕನನ್ನು ಮಧ್ಯಪ್ರದೇಶ ಪೊಲೀಸರು ಅಕ್ಟೋಬರ್ 8ರಂದು ಬಂಧಿಸಿದ್ದಾರೆ. ಕೆಮ್ಮಿನ ಸಿರಪ್ ತಯಾರಿಕೆಯಲ್ಲಿ ಆಗಿರುವ ಲೋಪಕ್ಕೆ ಸಂಬಂಧಿಸಿ ತಮಿಳುನಾಡು ಸರ್ಕಾರವು ಕಂಪನಿ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮೂಲಗಳು ಹೇಳಿವೆ.

ಪತ್ತೆಯಾದ ಲೋಪಗಳು

- ಸ್ರೇಸನ್ ಫಾರ್ಮಾಸ್ಯುಟಿಕಲ್ಸ್‌ಗೆ 2011ರಲ್ಲಿ ಕೆಮ್ಮಿನ ಸಿರಪ್ ತಯಾರಿಕೆಗೆ ಟಿಎನ್‌ಎಫ್‌ಡಿಎ ಪರವಾನಗಿ ನೀಡಿದೆ. ಕಂಪನಿಯು ಸಿರಪ್ ತಯಾರಿಕೆಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಹೊಂದಿದೆಯೇ ಎಂಬ ಬಗ್ಗೆ ಟಿಎನ್‌ಎಫ್‌ಡಿಎ ದಶಕಗಳ ಕಾಲ ಪರಿಶೀಲನೆ ನಡೆಸಿಲ್ಲ
- ರಾಷ್ಟ್ರೀಯ ಔಷಧ ಸುರಕ್ಷತಾ ನಿಯಮಗಳನ್ನು ಕಂಪನಿ ಪದೇಪದೇ ಉಲ್ಲಂಘನೆ ಮಾಡಿದೆ
- ಔಷಧೀಯ ಉತ್ಪನ್ನಗಳ ತಯಾರಿಕೆಗೆ ಸಂಬಂಧಿಸಿದ ವಿಧಾನಗಳನ್ನು (ಜಿಎಂಪಿ) ಕಂಪನಿ ಅನುಸರಿಸಿಲ್ಲ ಹಾಗೂ ಕಾರ್ಖಾನೆಯ ಸ್ಥಿತಿ ಗಾಬರಿ ಮೂಡಿಸುವ ರೀತಿ ಇರುವುದು ಇತ್ತೀಚಿನ ತನಿಖೆ ವೇಳೆ ಕಂಡುಬಂದಿದೆ
- ಸಿಡಿಎಸ್‌ಸಿಒ, ಸ್ರೇಸನ್ ಫಾರ್ಮಾಸ್ಯುಟಿಕಲ್ಸ್ ಕುರಿತು ಟಿಎನ್‌ಎಫ್‌ಡಿಎ ನಡೆಸಿರುವ ತಪಾಸಣೆ ಪ್ರಕ್ರಿಯೆಯ ಭಾಗವಾಗಿರಲಿಲ್ಲ. ಕಂಪನಿಯಿಂದಾದ ನಿಯಮಗಳ ಉಲ್ಲಂಘನೆ ಹಾಗೂ ಅದು ಹೊಂದಿರುವ ಕಳಪೆ ಮೂಲಸೌಕರ್ಯಗಳ ಕುರಿತು ಸಿಡಿಎಸ್‌ಸಿಒಗೆ ಟಿಎನ್‌ಎಫ್‌ಡಿಎ ಮಾಹಿತಿ ನೀಡಿರಲಿಲ್ಲ. ಇದೇ ಕಾರಣಕ್ಕೆ, ಸಿಡಿಎಸ್‌ಸಿಒ ದತ್ತಾಂಶಗಳಲ್ಲಿ ಸ್ರೇಸನ್ ಫಾರ್ಮಾಸ್ಯುಟಿಕಲ್ಸ್ ಕುರಿತು ಯಾವುದೇ ಮಾಹಿತಿ ಇಲ್ಲ
- ನಿಯಮಗಳ ಪ್ರಕಾರ, ಅನುಮೋದನೆ ಪಡೆಯಲಾದ ತಮ್ಮ ಉತ್ಪನ್ನಗಳ ಕುರಿತು ಔಷಧ ತಯಾರಿಸುವ ಕಂಪನಿಗಳು 'ಸುಗಮ' ಪೋರ್ಟಲ್‌ನಲ್ಲಿ ಅಪ್‌ಡೇಟ್ ಮಾಡುವುದು ಕಡ್ಡಾಯ. ಸ್ರೇಸನ್ ಫಾರ್ಮಾ ತನ್ನ ಉತ್ಪನ್ನಗಳ ಕುರಿತು ಈ ಪೋರ್ಟಲ್‌ನಲ್ಲಿ ಮಾಹಿತಿ ಅಪ್‌ಡೇಟ್ ಮಾಡಿರಲಿಲ್ಲ
- ಔಷಧ ತಯಾರಕ ಕಂಪನಿಗಳ ಕುರಿತು ಕೇಂದ್ರೀಕೃತ ದತ್ತಾಂಶ ಸಿದ್ಧಪಡಿಸಲಾಗುತ್ತಿದ್ದು, ಮಾಹಿತಿ ಒದಗಿಸುವಂತೆ ಟಿಎನ್‌ಎಫ್‌ಡಿಎ ಹಾಗೂ ಎಲ್ಲ ತಯಾರಕರಿಗೆ 2023ರ ಅಕ್ಟೋಬರ್‌ನಲ್ಲಿ ಸೂಚಿಸಲಾಗಿತ್ತು. ನಂತರ, ಪ್ರತಿ ತಿಂಗಳು ನಡೆಯುವ ಪರಿಶೀಲನಾ ಸಭೆಯಲ್ಲಿಯೂ ಜ್ಞಾಪಿಸಲಾಗಿತ್ತು. ಆದರೆ, ಸ್ರೇಸನ್ ಫಾರ್ಮಾ ಆಗಲಿ ಅಥವಾ ಟಿಎನ್‌ಎಫ್‌ಡಿಎ ಆಗಲಿ ಮಾಹಿತಿ ಒದಗಿಸಿಲ್ಲ

ದೀಪಾವಳಿಗೆ ಸವಿಯೂಟ ಸಂಭ್ರಮ!

ಧನತ್ರಯೋದಶಿ, ದೀಪಾವಳಿ ಹಬ್ಬದ ಸಡಗರದ ನಡುವೆ ಪಾಕಪ್ರಯೋಗ ಮಾಡುವವರಿಗೆ ಸಿಹಿಕಹಿ ಚಂದ್ರು ಮತ್ತು ಆದರ್ಶ್ ತಟ್ಪತಿಯವರ ಅಡುಗೆ ಮಾರ್ಗದರ್ಶನ ಸಿಗುತ್ತಿದೆ. ಮನೆಮಂದಿಯೆಲ್ಲಾ ಹಬ್ಬದ ಸಂಭ್ರಮವನ್ನು ಸವಿಯೂಟದೊಂದಿಗೆ ಆನಂದಿಸುವ ಅವಕಾಶ ಇಲ್ಲಿದೆ.

ಬೋಂಡಾ ಸೂಪ್

ಸಿಹಿ ಕಹಿ ಚಂದ್ರು ಅವರಿಂದ

ಬೇಕಾಗುವ ಪದಾರ್ಥಗಳು: 1 ಕಪ್ ನೆನೆಸಿದ ಉದ್ದಿನ ಬೇಳೆ, ಅರ್ಧ ಚಮಚ ಬೇಕಿಂಗ್ ಸೋಡಾ, 3 ಹಸಿ ಮೆಣಸಿನಕಾಯಿ, 1 ಇಂಚು ಶುಂಠಿ, ತಲಾ ಅರ್ಧ ಚಮಚ ಮೆಣಸು, ಅರಿಶಿನ ಪುಡಿ, ಇಂಗು. ಅರ್ಧ ಕಪ್ ತುರಿದ ತೆಂಗು, 1 ಕಪ್ ನೆನೆಸಿದ ಹೆಸರುಕಾಳು, ತಲಾ 1 ಚಮಚ ಜೀರಿಗೆ, ಮೆಣಸು, ನಿಂಬೆರಸ. ಕತ್ತರಿಸಿದ ಒಂದು ಟೊಮೆಟೊ, ಕಾಲು ಕಪ್ ಕತ್ತರಿಸಿದ ಕೊತ್ತಂಬರಿ, 10 ಕರಿಬೇವು, ಎಣ್ಣೆ ಮತ್ತು ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಒಂದು ಗಂಟೆಯ ಕಾಲ ಹೆಸರು ಬೇಳೆಯನ್ನು ನೀರಿನಲ್ಲಿ ನೆನೆಸಿಡಿ. ನೆನೆಸಿದ ಹೆಸರು ಬೇಳೆಯನ್ನು ಪ್ರೆಶರ್ ಕುಕ್ಕರ್‌ಗೆ ಹಾಕಿ ಉಪ್ಪು, ಅರಿಶಿನ ಪುಡಿ, ಇಂಗು ಮತ್ತು ಎಣ್ಣೆ ಸೇರಿಸಿ. ಚೆನ್ನಾಗಿ ಮಿಶ್ರಣ ಮಾಡಿದ ನಂತರ ನೀರು ಸೇರಿಸಿ. ಸಾಧಾರಣ ಉರಿಯಲ್ಲಿ 3 ಸೀಟಿ ಬರುವವರೆಗೆ ಪ್ರೆಶರ್ ಕುಕ್ಕರ್‌ನಲ್ಲಿ ಬೇಯಿಸಿ. ಬೇಯಿಸಿದ ಬೇಳೆಯನ್ನು ಪಕ್ಕಕ್ಕೆ ಇರಿಸಿ. ಜೀರಿಗೆ ಮತ್ತು ಮೆಣಸನ್ನು ಕುಟಾಣಿಯನ್ನು ಬಳಸಿ ಒರಟಾಗಿ ಪುಡಿ ಮಾಡಿ. ಒಂದು ಪಾತ್ರೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿ. ತಯಾರಾದ ಜೀರಿಗೆ ಪುಡಿಯನ್ನು ಸ್ವಲ್ಪ ಇಂಗು ಸೇರಿಸಿ 1 ನಿಮಿಷ ಹುರಿಯಿರಿ. ಸಣ್ಣಗೆ ಹಚ್ಚಿದ ಶುಂಠಿ, ಕತ್ತರಿಸಿದ ಹಸಿರು ಮೆಣಸಿನಕಾಯಿ, ಕರಿಬೇವು ಸೇರಿಸಿ 1 ನಿಮಿಷ ಹುರಿಯಿರಿ. ಕತ್ತರಿಸಿದ ಟೊಮ್ಯಾಟೊ ಸೇರಿಸಿ, ಚೆನ್ನಾಗಿ ಮಿಶ್ರಣ ಮಾಡಿ ಮತ್ತು ಸ್ವಲ್ಪ ಉಪ್ಪು ಸೇರಿಸಿ. ಟೊಮೆಟೊ ಮೆತ್ತಗಾಗುವವರೆಗೆ ಹುರಿದು ಮಿಶ್ರಣ ಮಾಡಿ. ಬೇಯಿಸಿದ ಹೆಸರು ಬೇಳೆಯನ್ನು, ತಯಾರಾದ ಒಗ್ಗರಣೆಗೆ ಅಗತ್ಯವಿರುವ ಪ್ರಮಾಣದ ನೀರು ಹಾಕಿ ಕೆಲವು ನಿಮಿಷಗಳ ಕಾಲ ಕುದಿಸಿ. ಸೂಪ್ ಅನ್ನು 10 ನಿಮಿಷಗಳ ಕಾಲ ಬೇಯಿಸಿದ ನಂತರ ಅಗತ್ಯವಿದ್ದರೆ ಹೆಚ್ಚಿನ ನೀರನ್ನು ಸೇರಿಸುವ ಮೂಲಕ ಸರಿಯಾದ ಹದ ನೀಡಿ. ನಿಂಬೆ ರಸ, ಕತ್ತರಿಸಿದ ಕೊತ್ತಂಬರಿ ಸೊಪ್ಪು ಮತ್ತು ಕರಿಬೇವು ಸೇರಿಸಿ. ಸೂಪ್ ಅನ್ನು ಪಕ್ಕಕ್ಕೆ ಇರಿಸಿ.

ನೆನೆಸಿದ ಉದ್ದಿನ ಬೇಳೆಯನ್ನು ಮಿಕ್ಸರ್ ಜಾರ್‌ಗೆ ಹಾಕಿ ಸ್ವಲ್ಪ ನೀರು ಸೇರಿಸಿ ರುಬ್ಬಿಕೊಳ್ಳಿ. ನಂತರ ಹಿಟ್ಟನ್ನು ದೊಡ್ಡ ಬಟ್ಟಲಿಗೆ ಹಾಕಿ. ಉಪ್ಪು, ತುರಿದ ತೆಂಗಿನಕಾಯಿ, ಸಣ್ಣಗೆ ಹೆಚ್ಚಿದ ಹಸಿರು ಮೆಣಸಿನಕಾಯಿ, ಕತ್ತರಿಸಿದ ಶುಂಠಿ, ಕತ್ತರಿಸಿದ ಕರಿಬೇವು, ಮೆಣಸು ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ.

ಕಡಾಯಿಯಲ್ಲಿ ಹುರಿಯಲು ಬೇಕಾದಷ್ಟು ಎಣ್ಣೆಯನ್ನು ಬಿಸಿ ಮಾಡಿ, ಹಿಟ್ಟಿನ ಮಿಶ್ರಣವನ್ನು ಸಣ್ಣ ಭಾಗಗಳಲ್ಲಿ ನಿಧಾನವಾಗಿ ಬಿಡಿ. ಬೋಂಡಾಗಳನ್ನು ಸಾಧಾರಣ ಕಡಿಮೆ ಉರಿಯಲ್ಲಿ ಎಲ್ಲಾ ಕಡೆ ಚಿನ್ನದ ಕಂದು ಬಣ್ಣ ಬರುವವರೆಗೆ ಹುರಿದು ಕಡಾಯಿಯಿಂದ ತೆಗೆಯಿರಿ. ನಂತರ ಸೂಪ್‌ನೊಂದಿಗೆ ರುಚಿಕರ ಬೋಂಡಾ ಸವಿಯಿರಿ.

ತುಂಟಾಪುರ ಕೋಳಿ ಕಡ್ಡಿ

ಆದರ್ಶ್ ತಟ್ಪತಿ ಅವರಿಂದ

ಬೇಕಾಗುವ ಪದಾರ್ಥಗಳು: 500ಗ್ರಾಂ ಚಿಕನ್ ಪೀಸ್‌ಗಳು, 1 ಚಮಚ ಬ್ಯಾಡಗಿ ಮೆಣಸಿನ ಪುಡಿ, ಅರ್ಧ ಚಮಚ ಅರಿಶಿನ, 5 ಗುಂಟೂರು ಮೆಣಸಿನಕಾಯಿ, 2 ಇಂಚು ಶುಂಠಿ, 10 ಬೆಳ್ಳುಳ್ಳಿ, 1 ಸಣ್ಣ ಕಪ್ ಕೊತ್ತಂಬರಿ ಸೊಪ್ಪು, ಗರಂ ಮಸಾಲ 1 ಚಮಚ, ನಿಂಬೆರಸ 1 ಚಮಚ, 3 ಹಸಿ ಮೆಣಸಿನಕಾಯಿ, ಕರಿಬೇವು, ಎಣ್ಣೆ 2 ಚಮಚ, ರುಚಿಗೆ ತಕ್ಕಷ್ಟು ಉಪ್ಪು

ಮಾಡುವ ವಿಧಾನ: ಚಿಕನ್ ಅನ್ನು ನಿಂಬೆರಸ, ಉಪ್ಪು, ಅರಿಶಿನ ಮತ್ತು ಬ್ಯಾಡಗಿ ಮೆಣಸಿನಕಾಯಿ ಪುಡಿಯಿಂದ ಮಿಶ್ರಣ ಮಾಡಿ 10 ನಿಮಿಷ ಪಕ್ಕಕ್ಕೆ ಇರಿಸಿ. ಮಿಕ್ಸರ್ ಜಾರ್‌ನಲ್ಲಿ ಶುಂಠಿ, ಬೆಳ್ಳುಳ್ಳಿ, ಗುಂಟೂರು ಮೆಣಸಿನಕಾಯಿ ಮತ್ತು ಕೊತ್ತಂಬರಿ ಸೊಪ್ಪನ್ನು ಸ್ವಲ್ಪ ನೀರಿನೊಂದಿಗೆ ಸೇರಿಸಿ, ನುಣ್ಣಗೆ ಪುಡಿಮಾಡಿ ಜೊತೆಗೆ ಗರಂ ಮಸಾಲಾ ಸೇರಿಸಿ. ಚಿಕನ್‌ನೊಂದಿಗೆ ಚೆನ್ನಾಗಿ ಮಿಶ್ರಣ ಮಾಡಿ 15 ನಿಮಿಷಗಳ ಕಾಲ ರಸವತ್ತಾಗಲು ಬಿಡಬೇಕು.

ಬಿದಿರಿನ ಕಡ್ಡಿಗಳನ್ನು ಬಳಸಿ ಚಿಕನ್ ತುಂಡುಗಳನ್ನು ಕಡ್ಡಿಗೆ ಚುಚ್ಚಿ ಗ್ಯಾಸ್ ಬೆಂಕಿಯಲ್ಲಿ ಗ್ರಿಲ್ ಮಾಡಿ. ಚಿಕನ್ ತುಂಡುಗಳು ಚೆನ್ನಾಗಿ ಬೆಂದ ನಂತರ, ಕಡಾಯಿಯನ್ನು ಬಿಸಿ ಮಾಡಿ ಎಣ್ಣೆ, ಕರಿಬೇವು ಮತ್ತು ಹಸಿರು ಮೆಣಸಿನಕಾಯಿಗಳನ್ನು ಸೇರಿಸಿ. ಅದಕ್ಕೆ ಗ್ರಿಲ್ ಮಾಡಿದ ಚಿಕನ್ ತುಂಡುಗಳನ್ನು ಸೇರಿಸಿ, ಹೆಚ್ಚಿನ ಉರಿಯಲ್ಲಿ ಫ್ರೈ ಮಾಡಿ. ಸಿದ್ಧವಾದ ರಸವತ್ತಾದ ಚಿಕನ್ ಪೀಸ್‌ಗಳನ್ನು ಈರುಳ್ಳಿ ಮತ್ತು ಪುದೀನಾ ಚಟ್ನಿಯೊಂದಿಗೆ ಸವಿಯಿರಿ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಅಡುಗೆಯ ವಿಧಾನಗಳ ವೀಕ್ಷಣೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

LPG Partner: IndianOil Indane | Kitchen Partner: Prestige | Special Partner: BHIMA | Snacks Partner: Lay's | Associate Sponsors: SBI card, Vencobb, eco crystal Water Treatment

ಮಿಜೋರಾಂನಲ್ಲೊಂದು ಸುತ್ತು...
ಮಿಜೋ ಜನರ ಬದುಕು ಮಾತ್ರ ಬೆಟ್ಟದ ತುದಿಯಲ್ಲಿಲ್ಲ, ಅವರ ಶಿಸ್ತು ಮತ್ತು ಸಂಯಮವೂ ಅಷ್ಟೇ ಎತ್ತರದಲ್ಲಿದೆ
11



ಶೋಲೆ ಚಿತ್ರೀಕರಣಗೊಂಡಿದ್ದು ಇದೇ ರಾಮದೇವರ ಬೆಟ್ಟದ ತಪ್ಪಲಲ್ಲಿ... ಚಿತ್ರಗಳು: ಚಂದ್ರೇಗೌಡ

ಶೋಲೆ ನೆನಪಿನ ಅಟ್ಟ ರಾಮದೇವರ ಬೆಟ್ಟ

'ಶೋಲೆ' ಸಿನಿಮಾ ತೆರೆಕಂಡು ಆಗಸ್ಟ್ 15ಕ್ಕೆ 50 ವಸಂತಗಳಾಗಿವೆ. ಈಗ ಆ ಸಿನಿಮಾದ ಹೊಸ ಅವತರಣಿಕೆಯು ದೇಶದ ವಿವಿಧೆಡೆ ಪ್ರದರ್ಶಿತವಾಗುತ್ತಿದೆ. ಗಬ್ಬರ್ ಕ್ರೌರ್ಯ, ಠಾಕೂರ್ ಸೆಡವು, ಜೈ–ವೀರೂ ಸಾಹಸ, ದೇಸಿ ಹುಡುಗಿ ಬಸಂತಿಯ ಸೌಂದರ್ಯವನ್ನು ಮತ್ತೆ ಮತ್ತೆ ನೋಡುವಾಗ ರಾಮನಗರದ ಗುಡ್ಡದಲ್ಲಿ ಆ ಚಿತ್ರತಂಡ ಉಳಿಸಿರುವ ಹೆಜ್ಜೆ ಗುರುತುಗಳೂ ನೆನಪಾಗುತ್ತವೆ.

• ವಿಶಾಖ ಎನ್

ತೆಲುಗು ಚಿತ್ರರಂಗದಲ್ಲಿ 'ಪರುಚೂರಿ ಬ್ರದರ್ಸ್' (ಪರುಚೂರಿ ವೆಂಕಟೇಶ್ವರ ರಾವ್, ಪರುಚೂರಿ ಗೋಪಾಲಕೃಷ್ಣ) ಎಂಬಿಬ್ಬರು ಸಿನಿಮಾ ಬರಹಗಾರರು ಬಗಲಿನಲ್ಲಿ ಚೀಲ ಹಾಕಿಕೊಂಡು ಸಿನಿಮೋತ್ಸವಗಳಿಗೆ ದಶಕಗಳ ಹಿಂದೆ ಎಡತಾಕುತ್ತಿದ್ದರು. ಅವರನ್ನು ಕಂಡ ಆಂಧ್ರ ಪ್ರದೇಶದ ಅನೇಕರು, 'ಇವರು ಯಾವ್ಯಾವುದೋ ದೇಶಗಳ ಚಿತ್ರಕಥೆಗಳನ್ನು ಮೊದಲು ಎತ್ತಿಕೊಂಡು ಈ ಜೋಳಿಗೆಗೆ ಹಾಕಿಕೊಳ್ಳುತ್ತಾರೆ. ಆಮೇಲೆ ಅದಕ್ಕೆ ದೇಸಿ ಸೊಗಡನ್ನು ಕೊಟ್ಟು, ಹೊಸತೇ ಎನ್ನುವಂಥ ಚಿತ್ರಕಥೆಗಳನ್ನು ಕಟ್ಟುತ್ತಾರೆ' ಎಂದು ತಮಾಷೆ ಮಾಡುತ್ತಿದ್ದರು. ಹಿಂದಿ ಚಿತ್ರರಂಗದಲ್ಲಿ ಸಲೀಂ–ಜಾವೆದ್ ಜೋಡಿಯ ಮನದ ಜೋಳಿಗೆಯಲ್ಲಿನ ಕಥೆಗಳ ಬಗೆಗೂ ಇಂಥವೇ ಆಸಕ್ತಿಕರವಾದ ವಿವರಗಳಿವೆ. ಸಲೀಂ ಎಂದರೆ ಸಲೀಂ ಖಾನ್ (ಸಲ್ಮಾನ್ ಖಾನ್ ತಂದೆ) ಎಂಬ ಹೆಸರಿನ ಕ್ಲುಪ್ತ ರೂಪ, ಜಾವೆದ್ ಎನ್ನುವುದು ಜಾವೆದ್ ಅಖ್ತರ್ ಎನ್ನುವ ನಾಮಬಲದ ಸಂಕ್ಷಿಪ್ತವೂ ಆಪ್ತವೂ ಆದ ಹೆಸರು. ಈ ಲೇಖಕರ ಜೋಡಿ ಬರೆದ 'ಶೋಲೆ' ಹಿಂದಿ ಸಿನಿಮಾ ತೆರೆಕಂಡು 50 ವಸಂತಗಳು ಉರುಳಿವೆ. 'ಸೆವೆನ್ ಸಮುರಾಯ್', 'ಗಂಗಾ ಜಮುನಾ', 'ಮೇರಾ ಗಾಂವ್ ಮೇರಾ ದೇಶ್' ತರಹದ ಹಿಂದಿ ಸಿನಿಮಾಗಳ ಸತ್ವವನ್ನೇ ಇಟ್ಟುಕೊಂಡೂ 'ಶೋಲೆ' ಚಿತ್ರಕಥೆಯನ್ನು ಅವರು ನೆಲದ ಕಥನವಾಗಿ ರೂಪಿಸಿದರು.

ಗಬ್ಬರ್ ಸಿಂಗ್ ಹೆಸರಿನ ದಢೂತಿ ಖಳನಾಯಕ, ಠಾಕೂರ್ ಬಲದೇವ್ ಸಿಂಗ್ ಎಂಬ ಮಿದುಮಾತಿನ ಪೊಲೀಸ್ ಅಧಿಕಾರಿ, ಉಡಾಳರಂತೆ ಕಾಣುವ ತುಡುಗು ಬುದ್ಧಿಯ ಉತ್ಸಾಹಿ ಯುವಕರಾದ ಜೈ ಹಾಗೂ ವೀರೂ, ಹಳ್ಳಿಗಾಡಿನಲ್ಲಿದ್ದೂ ತಾನೇ ದುಡಿಯುವ ಆತ್ಮವಿಶ್ವಾಸದ ಬನಿ ಬಸಂತಿ, ಪ್ರೇಮ ಪಲ್ಲವಿಸಿದರೂ ಗುಪ್ತಗಾಮಿನಿಯಾಗಿಯೇ ಅದನ್ನು ಕಾಣಿಸುವ ವಿಧವೆ ರಾಧಾ... ಹೀಗೆ ಸಲೀಂ–ಜಾವೆದ್ ಜೋಡಿ ಹೆಣೆದ ಪಾತ್ರಗಳು ಇಂದಿಗೂ ಪ್ರಸ್ತುತವಾಗಿವೆ.

ಲಾಗಾಯ್ತಿನಿಂದಲೂ ಯಶಸ್ವಿ ಜನಪ್ರಿಯ ಸಿನಿಮಾಗಳಿಗೆ ಒಂದು ಸೂತ್ರವಿದೆ. 'ಕೆಜಿಎಫ್', 'ಕಾಂತಾರ', 'ಪುಷ್ಪ' ಸಿನಿಮಾಗಳೂ ಈ ಸೂತ್ರಕ್ಕೆ ಹೊರತಾದವೇನೂ ಅಲ್ಲ. ನಾಟಕೀಯತೆ, ಭಾವುಕತೆ, ಸಾಹಸ ಇವುಗಳೇ ಆ ಸೂತ್ರದ ಪ್ರಧಾನ ಅಂಶಗಳು. 'ಶೋಲೆ' ಕೂಡ 70ರ ದಶಕದಲ್ಲೇ ಈ ಸೂತ್ರವನ್ನು ನೆಚ್ಚಿಕೊಂಡು, ಬಹುತಾರಾಗಣವನ್ನು ಇಟ್ಟುಕೊಂಡು ಸಿದ್ಧಗೊಂಡಿತ್ತು. 'ದೀವಾರ್' ಹಿಂದಿ ಚಿತ್ರದಲ್ಲಿ ತಾಯಿಯನ್ನು ಕೇಂದ್ರ ಪಾತ್ರವಾಗಿಸಿ ಬರವಣಿಗೆ ಮಾಡಿದ್ದ ಸಲೀಂ–ಜಾವೆದ್, 'ಶೋಲೆ'ಯಲ್ಲಿ ಮದರ್ ಸೆಂಟಿಮೆಂಟ್ ಅನ್ನು ಪಕ್ಕಕ್ಕೆ ಇಟ್ಟರು. ಮಾಮೂಲಿ ನಾಯಕ–ಖಳನಾಯಕನ ಸೇಡಿನ ಕಥನವನ್ನು ಬದಿಗೆ ಸರಿಸಿ, ನಿವೃತ್ತ ಪೊಲೀಸ್ ಅಧಿಕಾರಿಯನ್ನು ಗಾಯಗೊಂಡ ಹುಲಿಯಂತಾಗಿಸಿದರು. ಎದುರಲ್ಲಿ ಚಿಕ್ಕಮಕ್ಕಳೂ ಹೆಸರು ಕೇಳಿದರೆ ಚೀರಬೇಕು ಅಂತಹ ಪ್ರತಿನಾಯಕನನ್ನು ಸೃಷ್ಟಿಸಿದರು. ಪೊಲೀಸ್ ವ್ಯವಸ್ಥೆಯಲ್ಲೇ ಇದ್ದು, ಕೈಗಳನ್ನು ಖೂಳನಿಂದ ಕಳೆದುಕೊಂಡು ಅಸಹಾಯಕನಾಗಿರುವ ಅಧಿಕಾರಿ ಆಮೇಲೆ ಆ ವ್ಯವಸ್ಥೆಯಿಂದ ಹೊರಗೇ ಮುಯ್ಯಿ ತೀರಿಸಿಕೊಳ್ಳುವ ವಸ್ತುವಿಷಯವನ್ನು ನಿರೂಪಿಸುತ್ತಾ ಹೋದರು. ಆ ಅಧಿಕಾರಿಗೆ ಜೈ ಹಾಗೂ ವೀರೂ ಎಂಬ ಯುವಕರೇ ದಾಳಗಳು. ಇವಿಷ್ಟರ ಮೇಲೆ ಆರ್.ಡಿ. ಬರ್ಮನ್ ಸಂಗೀತದ ಬೋನಸ್ಸು.

ರಾಮನಗರ ರೈಲು ನಿಲ್ದಾಣದಲ್ಲೂ ಶೋಲೆ ನೆನಪು...

ತೇರಾ ಕ್ಯಾ ಹೋಗ ಕಾಲಿಯಾ....?

ನಮ್ಮವೇ ಬೆಟ್ಟಸಾಲು...

ಚಿತ್ರಕಥೆ ಪಕ್ಕಾ ಆದಮೇಲೆ ನಮ್ಮ ರಾಮನಗರದ ಬೆಟ್ಟಸಾಲನ್ನು ಚಿತ್ರೀಕರಣಕ್ಕೆ ಆಯ್ಕೆ ಮಾಡಿಕೊಂಡರು. ನಿರ್ದೇಶಕ ರಮೇಶ್ ಸಿಪ್ಪಿ ಸೃಷ್ಟಿಸಿದ ಸಿನಿಮಾದಲ್ಲಿನ ರಾಮಗಢ ಅಸಲಿಗೆ ಇದ್ದುದು ರಾಮದೇವರ ಬೆಟ್ಟದಲ್ಲಿ.

ಅಲ್ಲಿನ ನೀರಿನ ಟ್ಯಾಂಕ್ ಏರಿ ಧರ್ಮೇಂದ್ರ ಚೀರಿದ ಕ್ಷಣಗಳು ಚಿತ್ರೀಕರಣ ನಡೆದ ಈ ಊರಿನ ಕೆಲವರ ಚಿತ್ತಭಿತ್ತಿಯಲ್ಲಿ ಈಗಲೂ ಅಚ್ಚೊತ್ತಿದೆ.

ನಾಗರಿಕ ಸಮಾಜದಿಂದ ತುಸು ಹೊರಗೇ ಇರುವಂತಹ, ಗುಡ್ಡಗಾಡುಗಳು ಇರುವ ಭೂಪ್ರದೇಶ ಚಿತ್ರೀಕರಣಕ್ಕೆ ಬೇಕು ಎಂದು ರಮೇಶ್ ಸಿಪ್ಪಿ ಮೊದಲು ನಿರ್ಧರಿಸಿದರು. ಆ ಕಾಲಘಟ್ಟದಲ್ಲಿ ಪೂರ್ಣ ಪ್ರಮಾಣದಲ್ಲಿ ಹೊರಾಂಗಣ ಚಿತ್ರೀಕರಣ ಮಾಡುವುದು ದೊಡ್ಡ ರಿಸ್ಕ್ ಆಗಿತ್ತು. ಹವಾಮಾನ ವೈಪರೀತ್ಯಗಳನ್ನು ಎದುರಿಸಿ, ಸ್ಟುಡಿಯೊ ಸೆಟ್‌ಅಪ್‌ನಿಂದ ಹೊರಗೆ ಒಂದು ಇಡೀ ಸಿನಿಮಾ ಚಿತ್ರೀಕರಿಸುವುದು ಸುಲಭದ ಮಾತಾಗಿರಲಿಲ್ಲ. ಛಾಯಾಚಿತ್ರಗ್ರಹಣ ಮಾಡುವವರಿಗೂ ಅದು ತಲೆಬಿಸಿಯ ವ್ಯವಹಾರವೇ ಆಗಿತ್ತು. ಬಜೆಟ್ ದೃಷ್ಟಿಯಲ್ಲಿ ಅಷ್ಟೇ ಅಲ್ಲದೆ ಭೌತಿಕವಾಗಿ ಕೆಲಸ ಬೇಡುವ ಸಮಯ–ಶ್ರಮದ ಕಾರಣಕ್ಕೆ ಬಹುತೇಕರು ಇಂತಹ ರಿಸ್ಕ್‌ಗೆ ಕೈಹಾಕುತ್ತಿರಲಿಲ್ಲ. ರಮೇಶ್ ಸಿಪ್ಪಿ ಅದಕ್ಕೆ ಎದೆಗೊಟ್ಟರು. ಕಲಾ ನಿರ್ದೇಶಕ ರಾಮ್ ಯೆಡೇಕರ್ ಅವರೂ ಈ ಪ್ರದೇಶ ಗಬ್ಬರ್ ಸಿಂಗ್ ಅಡಗುದಾಣಕ್ಕೆ ಹೇಳಿ ಮಾಡಿಸಿದ್ದು ಎಂದು ಒಪ್ಪಿದರು. ರಾಮಗಢ ಎಂಬ ಕಲ್ಪಿತ ನಗರವನ್ನೇ ಅವರು ಸೆಟ್ ಹಾಕಿ ರೂಪಿಸಿದರು. ಎರಡು ವರ್ಷ ಅಲ್ಲಿ ಇಡೀ ಚಿತ್ರತಂಡ ಬೀಡುಬಿಟ್ಟಿತು. ಸಿನಿಮಾ ಚಿತ್ರೀಕರಣದಲ್ಲಿ ತೊಡಗುವವರು ತಂಗಲೆಂದೇ 'ಸಿಪ್ಪಿ ಟೌನ್‌ಶಿಪ್' ಕೂಡ ತಯಾರಾಗಿಬಿಟ್ಟಿತು. ಚಿತ್ರೀಕರಣವೆಂದ ಮೇಲೆ ಸ್ಥಳೀಯರ ಜೊತೆಗೆ ಬಾಂಧವ್ಯ ಬೆಳೆಯದೇ ಇದ್ದೀತೆ? ಸಹಜವಾಗಿಯೇ ರಾಮನಗರದ ಜನರಿಗೂ 'ಶೋಲೆ' ಸಿನಿಮಾಗೂ ಒಂದು ಸಾವಯವ ಸಂಬಂಧ ಏರ್ಪಟ್ಟಿತು. ಎಷ್ಟೋ ಜನರಿಗೆ ತಾತ್ಕಾಲಿಕವಾಗಿ ಉದ್ಯೋಗಗಳೂ ಸಿಕ್ಕವೆನ್ನಿ. ಸಿನಿಮಾದಲ್ಲಿ ಕಾಣುವ ಜೈಲು, ರೈಲ್ವೆ ಟ್ರ್ಯಾಕ್, ಸ್ಟೀಮ್ ಎಂಜಿನ್ ಎಲ್ಲವೂ ಸೆಟ್ ಹಾಕಿಯೇ ಚಿತ್ರೀಕರಿಸಿದ್ದು.

ಸಿನಿಮಾಟೊಗ್ರಾಫರ್ ದ್ವಾರಕಾ ದ್ವಿವೇಚ ಅವರಿಗೆ ಅದುವರೆಗೆ ಇಡೀ ಸಿನಿಮಾವನ್ನು ಹೊರಾಂಗಣದಲ್ಲಿ ಚಿತ್ರೀಕರಿಸಿದ ಅನುಭವವೇ ಇರಲಿಲ್ಲ. ಅವರಿಗೂ ಪ್ರಯೋಗದ ದೃಷ್ಟಿಯಿಂದ ಇದು ಮಹತ್ವದ ಹೆಜ್ಜೆಯಾಯಿತು. ಎಲ್ಲವೂ ಕೂಡಿಬಂದಿದ್ದರಿಂದ 'ಶೋಲೆ' ಎಂಬ ಜನಪ್ರಿಯ ಕಲಾಕೃತಿ ರೂಪತಾಳಿತು.

ರಾಮನಗರದ ಬೆಟ್ಟಗಳಿರುವ ಪ್ರದೇಶದಲ್ಲಿ ಅದಕ್ಕೂ ಮೊದಲು ಕನ್ನಡ ಸಿನಿಮಾಗಳ ಚಿತ್ರೀಕರಣ ನಡೆದಿತ್ತು. 1960ರ ದಶಕದ ಕೊನೆಯಲ್ಲಿ 'ಬೀದಿ ಬಸವಣ್ಣ', 'ಮನಸ್ಸಿದ್ದರೆ ಮಾರ್ಗ' ಸಿನಿಮಾಗಳು ಅಲ್ಲೇ ಚಿತ್ರಿತಗೊಂಡಿದ್ದ ನೆನಪನ್ನು ರಾಮನಗರದ ರಾಮಯ್ಯ ಎಂಬುವವರು ಮೆಲುಕುಹಾಕಿದರು.

ಅಲ್ಲಿ ಚಿತ್ರೀಕರಣ ನಡೆಸಲು ಯೋಗ್ಯ ಸ್ಥಳವಿದೆ ಎನ್ನುವುದು ಕೆಲವರ ಬಾಯಿಂದ ಬಾಯಿಗೆ ಹರಿದು, 'ಶೋಲೆ' ಚಿತ್ರತಂಡದವರಿಗೆ ಗೊತ್ತಾಗಿರಬಹುದು. ಆಗ ರಾಮದೇವರ ಬೆಟ್ಟದ ಬಳಿ ದೊಡ್ಡ ಸೆಟ್ ಹಾಕಿದ್ದರು. ಊರಿನ ಅನೇಕರು ದನ–ಕುರಿಗಳನ್ನು ಹೊಡೆದುಕೊಂಡು ಅಲ್ಲಿಗೆ ಹೋಗುತ್ತಿದ್ದರು. ಎಲ್ಲರೂ ಜಾನುವಾರುಗಳನ್ನು ಮೇಯಿಸಲು ಕರೆದುಕೊಂಡು ಹೋಗುತ್ತಿರುವುದಾಗಿ ಹೇಳುವ ಕಾಲದಲ್ಲಿ ಅವರು ಚಿತ್ರೀಕರಣಕ್ಕೆ ಹೊಡೆದುಕೊಂಡು ಹೋಗುತ್ತಿರುವುದಾಗಿ ಹೇಳುತ್ತಿದ್ದರು. ಕಣ್ಣಾಡಿಸಿದಷ್ಟೂ ಕಡೆ ಟೆಂಟ್‌ಗಳು ಕಾಣುತ್ತಿದ್ದವು. ಬೆಟ್ಟದಿಂದ ಪಟ್ಟಣಕ್ಕೆ, ಪಟ್ಟಣದಿಂದ ಬೆಟ್ಟಕ್ಕೆ ಓಡಾಡುತ್ತಿದ್ದವರ ಸಂಖ್ಯೆಯೂ ದೊಡ್ಡದಿತ್ತು... ಹೀಗೆ ರಾಮಯ್ಯ ತುಸುವಷ್ಟೇ ನೆನಪನ್ನು ಜೀಕಿದರು. ಎಂಬತ್ತು ದಾಟಿದ ವಯಸ್ಸಿನ ಅವರಿಗೆ ಈಗ ಎಲ್ಲವೂ ಅಷ್ಟಾಗಿ ನೆನಪಿಲ್ಲ. ಆದರೆ, 'ಶೋಲೆ' ಸಿನಿಮಾವನ್ನು ಅವರು ಮೂರ್ನಾಲ್ಕು ಸಲ ನೋಡಿ, ಚಿತ್ರೀಕರಣದಲ್ಲಿ ನೋಡಿದ್ದಕ್ಕೂ ತೆರೆಮೇಲೆ ಕಾಣುವುದಕ್ಕೂ ಎಷ್ಟೊಂದು ವ್ಯತ್ಯಾಸವಿದೆ ಎಂದು ಚಕಿತಪಟ್ಟಿದ್ದನ್ನು ಹೇಳಿಕೊಂಡರು.

'ಶೋಲೆ' ಸಿನಿಮಾ ಸೆಟ್ ಹಾಕಿದ್ದ ಕಲಾ ನಿರ್ದೇಶಕ ರಾಮ್ ಯೆಡೇಕರ್ ಅವರಿಗೆ ಬಂಗಾಳ ಪತ್ರಕರ್ತರ ಸಂಘವು ಕೊಡುವ ಪ್ರತಿಷ್ಠಿತ ಪ್ರಶಸ್ತಿಯೊಂದು ಆ ಸಿನಿಮಾ ಕೆಲಸಕ್ಕಾಗಿ ಸಂದಿದ್ದು ಅವರು ಮಾಡಿದ್ದ ಕೆಲಸಕ್ಕೆ ಸಿಕ್ಕ ಬಹುಮುಖ್ಯ ಮನ್ನಣೆ.

9ನೇ ಪುಟಕ್ಕೆ...

ಇಂತಹದ್ದೇ ಜಾಗ ಹುಡುಕುತ್ತಿದ್ದರು ರಮೇಶ್ ಸಿಪ್ಪಿ

ಬೆಟ್ಟದ ತುದಿಯಲ್ಲಿರುವ ವಿಶಾಲವಾದ ಕೃತಕ ಕೆರೆ

ಹುಚ್ಚನೆಂದು ಕರೆಸಿಕೊಂಡವರ ಹಚ್ಚ ಹಸುರಿನ ಕಥೆ

• ಎಂ.ಎಸ್.ಸುಂದರ ರಾಜ್

ಇದು ಹತ್ತು ವರ್ಷಗಳ ಹಿಂದಿನ ಮಾತು. ಶಂಕರ್ ಲಾಲ್ ಗಾರ್ಗ್ ರಸಾಯನ ಶಾಸ್ತ್ರದ ಪ್ರಾಧ್ಯಾಪಕ ಹುದ್ದೆಯಿಂದ ನಿವೃತ್ತರಾದರು. ಆಗ ಅವರಿಗೆ ಕೈತುಂಬ ನಿವೃತ್ತಿ ಪರಿಹಾರ ಸಿಕ್ಕಿತು. ಅಲ್ಲದೆ ಪ್ರತಿತಿಂಗಳೂ ಕೈತುಂಬಾ ನಿವೃತ್ತಿ ವೇತನ. ಅವರು ತಮ್ಮ ಆಕರ್ಷಕ ಶೈಲಿಯ ಬೋಧನೆಯಿಂದಾಗಿ ವಿದ್ಯಾರ್ಥಿ ವಲಯದಲ್ಲಿ ಒಳ್ಳೆಯ ಹೆಸರು ಗಳಿಸಿದ್ದರು. ಹೀಗಾಗಿ ತಾವು ಗಳಿಸಿದ ಹಣದಿಂದ ಕಾಲೇಜು ಸ್ಥಾಪಿಸಲು ಮಧ್ಯಪ್ರದೇಶದ ಇಂದೋರ್ ಬಳಿ 22 ಎಕರೆ ಬಂಜರುಗುಡ್ಡವನ್ನು ಖರೀದಿಸಿದರು. ಯೋಜನೆ ತಯಾರಿಸುವಾಗ ಅವರಿಗನ್ನಿಸಿತು, ಕಾಲೇಜು ತೆರೆದರೆ ಒಂದಷ್ಟು ವಿದ್ಯಾರ್ಥಿಗಳಿಗೆ ಅನುಕೂಲವಾದೀತು. ಮತ್ತು ಅದರಿಂದ ಸ್ವಲ್ಪ ಹಣ ಸಂಪಾದನೆಯೂ ಆಗಬಹುದು. ಆದರೆ ಅದು ನಾನು ಸಮಾಜಕ್ಕೆ ನೀಡುವ ಕೊಡುಗೆ ಆಗುವುದೇ ಎಂಬ ಆಲೋಚನೆ ಮನದಲ್ಲಿ ಸುಳಿದಾಡಿತು. ಅದಕ್ಕಾಗಿ ಏನು ಮಾಡಬೇಕು ಎಂದು ಯೋಚಿಸಿ, ಆ ಬರಡುಗುಡ್ಡದಲ್ಲಿ ಕಾಡನ್ನೇಕೆ ಬೆಳೆಸಬಾರದು ಎಂದು ಅಂದುಕೊಂಡರು.

ಸರಿ, ಬೆಂಗಾಡಾಗಿದ್ದ ಆ ಸ್ಥಳದಲ್ಲಿ ಕಾಡು ಬೆಳೆಸುವುದೇ ಉತ್ತಮ. ಇದರಿಂದ ಪರಿಸರ ಸಂರಕ್ಷಣೆಗೆ ಅಲ್ಪ ಕೊಡುಗೆಯಾದಂತೆ ಆಗುವುದು ಎಂದು ನಿರ್ಧರಿಸಿದರು. ಆ ಬೆಟ್ಟದಲ್ಲಿದ್ದ ಕಲ್ಲುಗಳನ್ನೆಲ್ಲಾ ಆರಿಸಿ ತೆಗೆದು ಅದನ್ನೊಂದು ಕಡೆ ಸಂಗ್ರಹಿಸುವ ಕಾರ್ಯ ನಡೆಸಿದರು. ಎಷ್ಟು ಕಲ್ಲುಗಳನ್ನು ತೆಗೆಸಿದರೂ ಮುಗಿಯದೇ ಇದ್ದಾಗ, ಇವರ ಈ ಹುಚ್ಚು ಸಾಹಸವನ್ನು ಜನ ಗೇಲಿ ಮಾಡಲಾರಂಭಿಸಿದರು. ಸುತ್ತಮುತ್ತಲಿನ ರೈತರು 'ಈ ಒಣಭೂಮಿಯಲ್ಲಿ ಹುಲ್ಲುಕಡ್ಡಿಯೂ ಬೆಳೆಯುವುದಿಲ್ಲ, ನೀವೇಕೆ ಇಷ್ಟು ಪರಿಶ್ರಮ ಪಡುತ್ತೀರಿ? ಹಣ ಜಾಸ್ತಿಯಾಗಿದೆಯೇ?' ಎಂದು ಮೂದಲಿಸಿ, ಉತ್ಸಾಹಕ್ಕೆ ತಣ್ಣೀರೆರಚುವ ಕೆಲಸ ಮಾಡಿದರು. ಆದರೆ ಅದ್ಯಾವುದಕ್ಕೂ ಗಮನಕೊಡದ ಗಾರ್ಗ್ ಅವರ ನಿರ್ಧಾರ ಅಚಲವಾಗಿತ್ತು. ಅಲ್ಲಿ ಸಹಜ ಕೃಷಿ ಪದ್ಧತಿಯಲ್ಲಿ ಗಿಡಗಳನ್ನು ಬೆಳೆಸಲು ಮುಂದಾದರು. ಅದಕ್ಕೆ ನೀರಿನ ವ್ಯವಸ್ಥೆಗಾಗಿ ಬೆಟ್ಟದ ತುದಿಯಲ್ಲಿ ವಿಶಾಲವಾದ ಕೃತಕ ಕೆರೆ ನಿರ್ಮಾಣ ಮಾಡಿದರು. ಅದಕ್ಕೆ ನೀರನ್ನು ಬೆಟ್ಟದ ಬುಡದಲ್ಲಿದ್ದ ರೈತರ ಬಾವಿಗಳಿಂದ ಹಣ ಕೊಟ್ಟು ಖರೀದಿಸಿ ನೀರನ್ನು ಕೆರೆಗೆ ಪಂಪ್ ಮಾಡಲು ಪ್ರಾರಂಭಿಸಿದರು. ಇಂದಿಗೂ ಇದು ನಡೆಯುತ್ತಲೇ ಇದೆ. ಆ ಕೆರೆ ಗಿಡಗಳಿಗೆ ನೀರು ಉಣಿಸುತ್ತಿದೆ. ಆ ನೀರಿನಲ್ಲಿ ಮೀನು ಸಾಕಣೆ ಕೂಡ ಮಾಡಲಾಗುತ್ತಿದೆ.

ಇಂದೋರ್‌ನಿಂದ 40 ಕಿಲೋಮೀಟರ್ ದೂರದಲ್ಲಿರುವ ಈ ಗುಡ್ಡದಲ್ಲಿ ಐದಾರು ಇಂಚು ಮಾತ್ರ ಅಗೆಯಲು ಸಾಧ್ಯವಾಗುತ್ತಿತ್ತು. ಗಾರ್ಗ್ ಅವರು ತಮ್ಮ ಪ್ರಯತ್ನದಿಂದ ವಿಮುಖರಾಗಲಿಲ್ಲ. ತಾವು ತಂದ ಗಿಡಗಳನ್ನು ನೆಟ್ಟು, ಪ್ರತಿ ದಿನವೂ ನೀರುಣಿಸಿದಾಗ ಅವು ತಂತಾನೆ ಚಿಗುರಲು ಮತ್ತು ಬೆಳೆಯಲು ಪ್ರಾರಂಭಿಸಿದವು. ಗಿಡ ಸತ್ತರೆ ಅದೇ ಜಾಗದಲ್ಲಿ ಮತ್ತೊಂದು ಗಿಡ ನೆಟ್ಟು ಬೆಳೆಸಿದರು. ಕೆಲವೇ ವರ್ಷಗಳಲ್ಲಿ ನಳನಳಿಸುವ ಹಚ್ಚ ಹಸಿರು ಅವರ ಉತ್ಸಾಹಕ್ಕೆ ಇಂಬುಕೊಟ್ಟಿತು.

ಇಂದು ಆ ಬೆಟ್ಟದಲ್ಲಿ ಸುಮಾರು ಐವತ್ತು ಸಾವಿರಕ್ಕೂ ಹೆಚ್ಚು ಗಿಡಮರಗಳು ಬೃಹದಾಕಾರವಾಗಿ ಬೆಳೆದಿವೆ. ಗುಡ್ಡದ ಮೇಲೇರಿ ಒಳ ಹೋದಂತೆಲ್ಲಾ, ದಟ್ಟಾರಣ್ಯದಲ್ಲಿ ಸಂಚರಿಸುತ್ತಿದ್ದೇವೆಯೋ ಎಂಬ ಭಾವ ಮೂಡುತ್ತದೆ. ಈ ಸ್ಥಳದಲ್ಲಿ ಕಾಡು ಬೆಳೆಸಲು ಸಾಧ್ಯವೆ? ಎಂದು ನಗುತ್ತಿದ್ದವರೇ ಇಂದು ಕೊಂಡಾಡುತ್ತಿದ್ದಾರೆ.

ತಮ್ಮ ಈ ವನಸಂಪತ್ತಿಗೆ ಅವರು 'ಕೇಶರ್ ಪರ್ವತ್' ಎಂದು ಹೆಸರಿಟ್ಟಿದ್ದಾರೆ. ಹೀಗೆ ಹೆಸರಿಡುವುದಕ್ಕೆ ಕಾರಣವೂ ಇದೆ. ಕಾಶ್ಮೀರದಲ್ಲಿ ಮಾತ್ರ ಬೆಳೆಯುವ ಕೇಸರಿಯ ಗಿಡಗಳನ್ನು ತಂದು ಇಲ್ಲಿ ಸಹಜ ಕೃಷಿಯಲ್ಲಿ ಬೆಳೆಯಲಾಗುತ್ತಿದೆ. 43 ಡಿಗ್ರಿ ಉಷ್ಣಾಂಶದಲ್ಲಿಯೂ ಕೇಸರಿ ಬೆಳೆ ಬೆಳೆಯುತ್ತಿರುವ ಗಾರ್ಗ್ ಅವರ ಸಾಹಸವನ್ನು ಮೆಚ್ಚಲೇಬೇಕು. ಇಲ್ಲಿರುವ ಕೆಲ ಅಪರೂಪದ ಗಿಡ ಮರಗಳನ್ನು ನೋಡುತ್ತಿದ್ದರೆ ನಿಜಕ್ಕೂ ಆಶ್ಚರ್ಯವಾಗುತ್ತದೆ. ಇಟಲಿಯ ಆಲಿವ್ ಮರಗಳು, ಮರುಭೂಮಿಯಲ್ಲಿ ಬೆಳೆಯುವ ಮೆಕ್ಸಿಕೊ ಖರ್ಜೂರದ ಮರಗಳು, ನೇಪಾಳದ ರುದ್ರಾಕ್ಷಿ, ಮಲೆನಾಡಿನ ಏಲಕ್ಕಿ, ಲೀಚ್, ಆಫ್ರಿಕಾ ದೇಶದ ಟುಲಿಪ್, ಮಾವು, ಬೇವು, ಪೇರಲೆ, ಥಾಯ್ಲೆಂಡ್‌ನ ಡ್ರಾಗನ್ ಫ್ರೂಟ್, ಶ್ರೀಗಂಧ, ಮಹಾಗನಿ, ದೇವದಾರು, ಪೈನ್, ತೆಂಗು, ಬಾಳೆ, ಸಿಲ್ವರ್ ಓಕ್ ಮರಗಳು ಇಲ್ಲಿವೆ.

10ನೇ ಪುಟಕ್ಕೆ...

ಶಂಕರ್ ಲಾಲ್ ಗಾರ್ಗ್

ಗಡಿ ಭಾಗದಲ್ಲಿ ಬಾಂಧವ್ಯ ಬೆಸೆಯುವ ಭಂಡಾರ ಜಾತ್ರೆ

ಭಂಡಾರ ಜಾತ್ರೆಯ ವೈಭೋಗ... ಚಿತ್ರಗಳು: ಇಂದ್ರಕುಮಾರ ದಸ್ತೇನವರ

> **ಕರ್ನಾಟಕ-ಮಹಾರಾಷ್ಟ್ರದ ನಡುವೆ ಭಂಡಾರ ಜಾತ್ರೆಗಳು ಬಾಂಧವ್ಯ ಬೆಸೆಯುವ ಕೊಂಡಿ ಎಂದು ಹೇಳಬಹುದು. ಎರಡೂ ರಾಜ್ಯಗಳ ಜನರ ನಡುವಿನ ಬಾಂಧವ್ಯ ಇಂತಹ ಜಾತ್ರೆಗಳಿಂದ ಮತ್ತಷ್ಟು ಗಟ್ಟಿಗೊಳ್ಳುತ್ತವೆ**
> **ಶಿವಪ್ರಸಾದ ದೇವರು,**
> ಅಲ್ಲಮಪ್ರಭು ಸಿದ್ಧಸಂಸ್ಥಾನ ಮಠ, ಚಿಂಚಣಿ.

• ಚಂದ್ರಶೇಖರ ಎಸ್. ಚಿನಕೇಕರ

ಬೆಳಕಿನ ಹಬ್ಬ ದೀಪಾವಳಿ ಬಂತೆಂದರೆ ಸಾಕು, ನಡೆದಾಡುವ ಬೀದಿಗಳೂ ಹಳದಿ. ಆಗಸದತ್ತ ಮುಖ ಮಾಡಿದರೆ ಕಾಣುವ ಹೊಂಬಣ್ಣದ ಓಕುಳಿ. ಬೇವು–ಬೆಲ್ಲ ಸವಿಯುವ ಯುಗಾದಿ ಹಬ್ಬದವರೆಗೂ ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳ ಗಡಿ ಭಾಗದಲ್ಲಿ ಭಂಡಾರ ಜಾತ್ರೆಗಳ ಸಂಭ್ರಮ ಕಳೆಗಟ್ಟಿರುತ್ತದೆ. ಈ ಭಾಗದಲ್ಲಿ ನಡೆಯುವ ಜಾತ್ರೆಗಳು ಕೇವಲ ಜಾತ್ರೆಗಳಷ್ಟೇ ಆಗಿರುವುದಿಲ್ಲ. ಭಂಡಾರದ ಜಾತ್ರೆಗಳಾಗಿರುತ್ತವೆ. ಹೀಗಾಗಿ ದೀಪಾವಳಿ ಮತ್ತು ಯುಗಾದಿ ಹಬ್ಬದ ನಡುವಿನ ಅವಧಿಯಲ್ಲಿ ಅಷ್ಟ ದಿಕ್ಕುಗಳಲ್ಲೆಲ್ಲ ಹೊಂಬಣ್ಣದ ಹೊಂಗಿರಣಗಳ ನೋಟ ಕಾಣಬಹುದಾಗಿದೆ.

ಇಲ್ಲಿನ ಕೆಲವೊಂದು ಜಾತ್ರೆಗಳಲ್ಲಿ ಭಂಡಾರವನ್ನು ಹಾರಿಸಲಾಗುತ್ತದೆ. ಶುದ್ಧವಾಗಿರುವ ಅರಿಸಿನದ ಪುಡಿಯನ್ನೇ ಭಂಡಾರ ಎಂದು ಕರೆಯಲಾಗುತ್ತದೆ. ಇಂತಹ ಭಂಡಾರವನ್ನು ದೇವರ ಮೇಲೆ ತೂರುವುದರಿಂದ ತಮ್ಮ ಇಷ್ಟಾರ್ಥಗಳು ಈಡೇರುತ್ತವೆ ಎಂಬ ಬಲವಾದ ನಂಬಿಕೆ ಗಡಿಭಾಗದ ಜನರಲ್ಲಿದೆ. ಬೀರದೇವರ, ಮಾಳಿಂಗರಾಯ, ಲಕ್ಷ್ಮಿದೇವಿ, ದುರ್ಗಾದೇವಿ, ಮಲಕಾರಿಸಿದ್ಧ, ಅಮೋಘಸಿದ್ಧ, ವಿಠ್ಠಲದೇವರ, ಆಂಜನೇಯ ಸೇರಿದಂತೆ ವಿವಿಧ ದೇವರ ಜಾತ್ರೆಗಳಲ್ಲಿ ಭಂಡಾರ ತೂರಿ ಭಕ್ತರು ಸಂಭ್ರಮಿಸುವ ದೃಶ್ಯಗಳು ಅದ್ಭುತ ಅನುಭವ ನೀಡುತ್ತವೆ.

ಬೆಳಗಾವಿ ಜಿಲ್ಲೆಯ ಅಪ್ಪಾಚಿವಾಡಿಯ ಹಾಲಸಿದ್ಧನಾಥ, ಕೇರೂರಿನ ಮಲಕಾರಿಸಿದ್ಧ, ಯಲ್ಪಾರಟ್ಟಿಯ ಅರಣ್ಯಸಿದ್ಧ, ಯಕ್ಸಂಬಾದ ಬೀರೇಶ್ವರ, ವಿಜಯಪುರ ಜಿಲ್ಲೆಯ ಅರಕೇರಿಯ ಅಮೋಘಸಿದ್ಧ ದೇವಸ್ಥಾನಗಳಲ್ಲಿ ಭಂಡಾರ ಜಾತ್ರೆಗಳು ವೈಭವದಿಂದ ನಡೆಯುತ್ತವೆ. ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಜಿಲ್ಲೆಯ ಹುಲಜಂತಿ ಮಾಳಿಂಗರಾಯ, ಕೊಲ್ಹಾಪುರ ಜಿಲ್ಲೆಯ ಪಟ್ಟಣಕಡೋಲಿಯ ವಿಠ್ಠಲ ಬೀರದೇವರ ಜಾತ್ರೆಗಳೂ ಭಂಡಾರ ಜಾತ್ರೆಯೆಂದೇ ಪ್ರಸಿದ್ಧಿ ಪಡೆದಿವೆ.

ಇಪ್ಪತ್ತು ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ಹುಲಜಂತಿ ಮಾಳಿಂಗರಾಯ, ಅಪ್ಪಾಚಿವಾಡಿಯ ಹಾಲಸಿದ್ಧನಾಥ, ಪಟ್ಟಣಕಡೋಲಿಯ ವಿಠ್ಠಲ ಬೀರದೇವರ ಜಾತ್ರೆಗಳಲ್ಲಿ ನೂರು ಟನ್‌ಗೂ ಹೆಚ್ಚು ಭಂಡಾರವನ್ನು ತೂರಲಾಗುತ್ತದೆ. ಕೇರೂರಿನ ಮಲಕಾರಿಸಿದ್ಧ, ಯಕ್ಸಂಬಾದ ಬೀರೇಶ್ವರದಂತಹ ದೇವಸ್ಥಾನಗಳ ಜಾತ್ರೆಗಳಲ್ಲಿ ಹತ್ತರಿಂದ ಇಪ್ಪತ್ತು ಟನ್‌ಗಳಷ್ಟು ಭಂಡಾರ ಹಾರಿಸಿ ಭಕ್ತರು ಹರಕೆ ತೀರಿಸುತ್ತಾರೆ. ಭಂಡಾರದಲ್ಲಿ ಮಿಂದೆದ್ದ ಭಕ್ತರು ಆಗಮಿಸುತ್ತಿದ್ದಂತೆಯೇ ಇವರು ಯಾವ ಜಾತ್ರೆಗೆ ಹೋಗಿ ಬಂದಿದ್ದಾರೆ ಎನ್ನುವುದು ಸುಲಭವಾಗಿ ಗೊತ್ತಾಗಿ ಬಿಡುತ್ತದೆ. ಕೆಲವೊಂದು ಕಡೆಗೆ ಲಕ್ಷ್ಮಿದೇವಿ, ರೇಣುಕಾದೇವಿ, ದುರ್ಗಾದೇವಿ ಸೇರಿದಂತೆ ವಿವಿಧ ದೇವರ ಜಾತ್ರೆಗಳಲ್ಲೂ ಭಂಡಾರ ಹಾರಿಸಲಾಗುತ್ತದೆ.

ಎಲ್ಲೆಲ್ಲಿ ಭಂಡಾರದೋಕುಳಿ ನಡೆಯುತ್ತದೆಯೋ, ಅಲ್ಲೆಲ್ಲ ಆಯಾ ದೇವರ ಹೆಸರಿನೊಂದಿಗೆ 'ಚಾಂಗ್ ಭಲೋ..ಚಾಂಗ್ ಭಲೋ' ಎಂಬ ಉದ್ಘೋಷಗಳು ಲಯಬದ್ಧವಾಗಿ ಕೇಳಿ ಬರುತ್ತದೆ. ಬಹುತೇಕ ಜಾತ್ರೆಗಳಲ್ಲಿ ಕೊನೆಯ ದಿನವೇ ಭಂಡಾರ ಹಾರಿಸಲಾಗುತ್ತದೆ. ಅಂದು ಮಳೆ ಬೆಳೆ ಹೇಗೆಲ್ಲ ಇದೆ ಎಂಬ ಹೇಳಿಕೆಗಳನ್ನು (ಭವಿಷ್ಯ ನುಡಿ) ಜನರು ಕುತೂಹಲದಿಂದ ಕೇಳುತ್ತಾರೆ. ದೇವರ ನಿವ್ವಾಳಕಿಯು ಆಗಮಿಸುತ್ತಿದ್ದಂತೆ ಭಕ್ತ ಸಮೂಹ ದೇವರಮೂರ್ತಿ, ಪಲ್ಲಕ್ಕಿ, ಶಿಖರ, ದೇವರ ಕುದುರೆ, ಎತ್ತುಗಳ ಮೇಲೆಲ್ಲ ಭಂಡಾರ ತೂರಿ ಕೈ ಮುಗಿದು ನಮಿಸಿ ತಮ್ಮ ತಮ್ಮ ಊರಿನತ್ತ ಹೆಜ್ಜೆ ಹಾಕುವ ಮೂಲಕ ಜಾತ್ರೆಗಳು ಸಂಪನ್ನಗೊಳ್ಳುತ್ತವೆ.

ಲಕ್ಷಾಂತರ ಭಕ್ತರು ಸೇರುವ ಪಟ್ಟಣಕಡೋಲಿ, ಹುಲಜಂತಿ, ಅಪ್ಪಾಚಿವಾಡಿ, ಅರಕೇರಿ ಮುಂತಾದ ಕಡೆ ನಡೆಯುವ ಭಂಡಾರ ಜಾತ್ರೆಯಲ್ಲಿ ಬೇರೆ ಬೇರೆ ಗ್ರಾಮಗಳಿಂದ ನೂರಾರು ಪಲ್ಲಕ್ಕಿಗಳು ಸಮಾಗಮ ಆಗುವುದನ್ನು ನೋಡುವುದೇ ಬಲು ಚೆಂದ. ಡೊಳ್ಳು ಭಾರಿಸುವ ಮೂಲಕ ಛತ್ರಿ ಚಾಮರಗಳೊಂದಿಗೆ ಸಾಲಾಗಿ ಪಲ್ಲಕ್ಕಿ ಬರುತ್ತಲೇ ಭಕ್ತಗಣ 'ಉಫೇ ಉಫೇ' ಎನ್ನುತ್ತ ಭಂಡಾರ ತೂರುತ್ತಿದ್ದರೆ ಆಗಸದಿಂದ ಹಳದಿ ಬಣ್ಣದ ಉಲ್ಕೆಗಳು ಬೀಳುತ್ತಿರುವಂತೆ ಶೋಭಿಸುತ್ತದೆ.

9ನೇ ಪುಟಕ್ಕೆ...

ಅರಸಿನದಲ್ಲಿ ಮಿಂದ ಭಕ್ತರು

ಬಂದರೋ ಬಂದರೋ ಕಳ್ಳಿಪೀರರರು!

• ಕೆ.ಓಂಕಾರ ಮೂರ್ತಿ

ಒಂದು ಕಾಲದಲ್ಲಿ ಚಿನ್ನದ ಗಣಿ ಮೂಲಕ ಇಡೀ ವಿಶ್ವದ ಗಮನ ಸೆಳೆದಿದ್ದ ಕೆಜಿಎಫ್ ಈಗ ವಿದೇಶಿ ಹಕ್ಕಿಗಳನ್ನೂ ಆಕರ್ಷಿಸುತ್ತಿದೆ. ಇಲ್ಲಿನ ಅಜ್ಜಪಲ್ಲಿ ಸುತ್ತಮುತ್ತಲಿನ ಗುಡ್ಡ ಪ್ರದೇಶದಲ್ಲಿ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಈ ವಿಶೇಷ ಅತಿಥಿಗಳದ್ದೇ ಚಿಲಿಪಿಲಿ ನಿನಾದ. ಈ ಪ್ರದೇಶ ಈಗ ಪಕ್ಷಿ ಪ್ರಿಯರನ್ನು ಸೂಜಿಕಲ್ಲಿನಂತೆ ಸೆಳೆಯುತ್ತಿದೆ.

ವಿಶೇಷ ಅತಿಥಿಗಳಾಗಿ ಯುರೋಪಿನಿಂದ ಬೀ ಈಟರ್ ಪಕ್ಷಿಗಳು ಈ ಪ್ರದೇಶಕ್ಕೆ ವಲಸೆ ಬಂದಿವೆ. ಇವುಗಳನ್ನು ‘ಯೂರೋಪಿಯನ್ ಬೀ ಈಟರ್’ ಎಂದೇ ಕರೆಯುತ್ತಾರೆ. ಜೇನು ಹುಳುಗಳನ್ನು ಇಷ್ಟಪಡುವುದರಿಂದ ಕನ್ನಡದಲ್ಲಿ ‘ಜೇನುಹಿಡುಕ’, ‘ಜೇನ್ನೊಣ ಬಾಕ’, ‘ಕಳ್ಳಿಪೀರ’ ಎಂದೂ ಕರೆಯುತ್ತಾರೆ. ಹಾರಾಟದಲ್ಲಿರುವಾಗಲೇ ಬೇಟೆಯಾಡುವುದು ಇವುಗಳ ವಿಶೇಷ.

ಈ ಕಳ್ಳಿಪೀರರು ಬೆಣಚು ಕಲ್ಲು ಮಿಶ್ರಿತ ಕೆಂಪು ಮಣ್ಣು ಹೊಂದಿರುವ ಬಂಗಾರದ ಗಣಿ ಪ್ರದೇಶಕ್ಕೆ ಸೆಪ್ಟೆಂಬರ್ ವೇಳೆಗೆ ಬಂದು ನವೆಂಬರ್ ಮಧ್ಯಭಾಗದವರೆಗೆ ಇದ್ದು ಹೋಗುತ್ತವೆ. ನಂತರ ಶ್ರೀಲಂಕಾ, ದಕ್ಷಿಣ ಆಫ್ರಿಕಾ ಮೂಲಕ ತಮ್ಮ ಮೂಲ ಸ್ಥಾನಕ್ಕೆ ಮರಳುತ್ತವೆ. ಪ್ರತಿ ವರ್ಷ ತಪ್ಪದೆ ಅದೇ ಸ್ಥಳಕ್ಕೆ ಕರಾರುವಾಕ್ಕಾಗಿ ನಿರ್ದಿಷ್ಟ ದಾರಿಯನ್ನು ಅನುಸರಿಸಿ ಸಾವಿರಾರು ಕಿಲೋ ಮೀಟರ್ ಪ್ರಯಾಣ ಮಾಡಿ ತಲುಪುತ್ತವೆ. ಇದು ಪ್ರಕೃತಿಯ ಸೋಜಿಗ ಕೂಡ. ಪಕ್ಷಿಗಳು ಒಂದು ಪರಿಸರದ ಆರೋಗ್ಯ ನಿರ್ಧರಿಸುವ ಜೈವಿಕ ಸೂಚಕಗಳು ಎನ್ನುತ್ತಾರೆ ಪಕ್ಷಿ ತಜ್ಞರು.

ಕೆಜಿಎಫ್ ತಾಲ್ಲೂಕಿನ ಬೇತಮಂಗಲ ಜಲಾಶಯ, ಕೃಷ್ಣಮೃಗಗಳು ವಾಸ ಮಾಡುತ್ತಿರುವ ಬಿಜಿಎಂಎಲ್ ಪ್ರದೇಶ ಮತ್ತು ಐಸಂದ್ರ ಮಿಟ್ಟೂರು ಗ್ರಾಮದ ಬಳಿ ಆಗಾಗ್ಗೆ ವಿದೇಶಿ ಹಕ್ಕಿಗಳು ಕಾಣಸಿಗುತ್ತವೆ. ಆದರೆ ಬೀ ಈಟರ್‌ಗಳು ಮೂರು ವರ್ಷಗಳಿಂದ ಒಂದೇ ಸ್ಥಳ ಆಯ್ಕೆ ಮಾಡಿಕೊಳ್ಳುತ್ತಿವೆ. ವಿದೇಶಿ ಪಕ್ಷಿಗಳಲ್ಲದೆ; ದೇಶದ ಉತ್ತರ ಭಾಗದಿಂದಲೂ ಹಕ್ಕಿಗಳು ಇಲ್ಲಿಗೆ ವಲಸೆ ಬರುತ್ತವೆ. ಹೀಗಾಗಿ, ಈ ಪ್ರದೇಶದ ಈಗ ಪಕ್ಷಿ ಪ್ರಿಯರಿಗೆ ಹಾಗೂ ಫೋಟೊಗ್ರಾಫರ್‌ಗಳಿಗೆ ಹಬ್ಬದ ಸಮಯ.

ಬೀ ಈಟರ್‌ಗಳು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಯುರೋಪ್‌ನಿಂದ ವಲಸೆ ಬಂದು ಸಾಮಾನ್ಯವಾಗಿ ಒಂದೇ ಕಡೆ ಎರಡರಿಂದ ಮೂರು ತಿಂಗಳು ಇರುತ್ತವೆ.

ಬಂಗಾರದ ಗಣಿ ಪ್ರದೇಶದ ಅಜ್ಜಪಲ್ಲಿ ಸುತ್ತಮುತ್ತಲಿನ ಸಣ್ಣಗುಡ್ಡಗಳ ಮರಗಳಲ್ಲಿ, ರೈತರ ಜಮೀನಿನ ನೀಲಗಿರಿಮರಗಳಲ್ಲಿ ಮತ್ತು ಹೈಟೆನ್ಷನ್ ತಂತಿಗಳ ಮೇಲೆ ಈ ಪಕ್ಷಿಗಳು ಕುಳಿತಿರುತ್ತವೆ. ದಟ್ಟವಾದ ನೀಲಗಿರಿ ತೋಪಿನಲ್ಲಿ ಆಶ್ರಯ ಪಡೆಯುತ್ತವೆ.

ಬೀ ಈಟರ್ ಹೆಸರೇ ಸೂಚಿಸುವಂತೆ ಕೀಟಗಳೇ ಪ್ರಮುಖ ಆಹಾರ. ಚಿಟ್ಟೆ, ಜೇನ್ನೊಣ, ದುಂಬಿ, ಡ್ರ್ಯಾಗನ್ ಫ್ಲೈ, ಮಿಡತೆಗಳನ್ನು ಇಷ್ಟಪಡುತ್ತವೆ. ಹಾರುತ್ತಿರುವ ಕೀಟಗಳನ್ನು ಗುರುತಿಸಿ ಕೊಕ್ಕಿನಲ್ಲಿ ಭದ್ರವಾಗಿ ಹಿಡಿದು ಮರದ ಕೊಂಬೆ ಅಥವಾ ತಂತಿಯ ಮೇಲೆ ಕುಳಿತು ತಿನ್ನುತ್ತವೆ.

ಪಕ್ಷಿ ತಜ್ಞರಿಗೆ, ವೀಕ್ಷಕರಿಗೆ ಮತ್ತು ಅಧ್ಯಯನಶೀಲರಿಗೆ ಇದು ಸಕಾಲ. ವಿದೇಶ ಅತಿಥಿಗಳನ್ನು ಸೆರೆ ಹಿಡಿಯಲು ವಿವಿಧ ರಾಜ್ಯಗಳಿಂದಲೂ ಫೋಟೊಗ್ರಾಫರ್‌ಗಳು ಬರುತ್ತಾರೆ. ನಸುಕಿನಲ್ಲೇ ಈ ಪ್ರದೇಶದಲ್ಲಿ ಓಡಾಡುತ್ತಾ ಪಕ್ಷಿಗಳ ಚಲನವಲನ ಸೆರೆ ಹಿಡಿದು ಸಂಭ್ರಮಿಸುತ್ತಾರೆ. ಕೀಟ ಹಿಡಿಯುವ ಕ್ಷಣ, ಜೋಡಿಯಾಗಿ ಕುಳಿತು ಚೆಲ್ಲಾಟ ಆಡುವ ಸಂದರ್ಭ, ಲಾಲನೆ, ವಿವಿಧ ಭಂಗಿಗಳನ್ನು ಸೆರೆಹಿಡಿಯಲು ಕಸರತ್ತು ನಡೆಸುವುದನ್ನು ಕಾಣಬಹುದು.

ಪಕ್ಷಿ ಪ್ರಿಯರು ಕೂಡ ತಮ್ಮ ಮಕ್ಕಳನ್ನು ಕರೆದುಕೊಂಡು ಈ ಪ್ರದೇಶದಲ್ಲಿ ಅಲೆದಾಡುತ್ತ ವಿವರಿಸುವುದು ಸಾಮಾನ್ಯ. ಬೀ ಈಟರ್‌ಗಳು ಸಾಮಾನ್ಯವಾಗಿ ಶಾಂತ ಪ್ರದೇಶ ಬಯಸುತ್ತವೆ. ಸೂರ್ಯ ಮರೆಯಾಗುತ್ತಿದ್ದಂತೆ ಗಿಡಮರಗಳ ಕೊಂಬೆ, ಪೊದೆಗಳ ಮೊರೆ ಹೋಗುತ್ತವೆ. ರಾತ್ರಿ ವೇಳೆ ಮರದ ಕೊಂಬೆಗಳಲ್ಲೇ ವಿಶ್ರಾಂತಿ ಪಡೆಯುತ್ತವೆ, ನಿದ್ರಿಸುತ್ತವೆ. ಗಂಡು, ಹೆಣ್ಣು ಹಾಗೂ ಮರಿ ಹಕ್ಕಿಗಳು ವಿವಿಧ ಬಣ್ಣ ಹೊಂದಿರುತ್ತವೆ.

ಯುರೋಪ್ ಖಂಡದ ಬೀ ಈಟರ್ ಪಕ್ಷಿಯು ಸಾಮಾನ್ಯವಾಗಿ ಕುರುಚಲು ಪ್ರದೇಶದ ಬಯಲು ತಪ್ಪಲನ್ನು ಬಯಸುತ್ತದೆ. ಈ ಅವಧಿಯಲ್ಲಿ ಯುರೋಪಿನಲ್ಲಿನ ಚಳಿ, ಮಳೆ ತಡೆಯಲಾರದೆ ಈ ಪಕ್ಷಿಗಳು ಇಂಥ ಪ್ರದೇಶ ಹುಡುಕಿಕೊಂಡು ಬರುತ್ತವೆ. ಏಕೆಂದರೆ ಅಲ್ಲಿ ಈ ಅವಧಿಯಲ್ಲಿ ತಮಗೆ ಬೇಕಾದ ಆಹಾರ ಸಿಗುವುದಿಲ್ಲ. ಜೊತೆಗೆ ವಲಸೆ ಬಂದಿರುವ ಈ ಪ್ರದೇಶ ಸುರಕ್ಷಿತ ಎಂಬ ವಿಚಾರವೂ ಅವುಗಳಿಗಿದೆ. ಅವಶ್ಯಕ್ಕೆ ತಕ್ಕಂತೆ ವಲಸೆ ಹೋಗುತ್ತವೆ ಎಂದು ಪಕ್ಷಿ ಪ್ರಿಯ ಫೋಟೊಗ್ರಾಫರ್ ಶಂಕರ್ ತಿಳಿಸಿದರು.

ಕೆಜಿಎಫ್ ಜಿಲ್ಲಾ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಂಕರ್ ಸುಮಾರು ಐದು ವರ್ಷಗಳಿಂದ ಪಕ್ಷಿಗಳ ಚಲನವಲನ ಸೆರೆ ಹಿಡಿಯುತ್ತಿದ್ದಾರೆ. ಜಿಲ್ಲೆಯಲ್ಲಿ 272 ಪಕ್ಷಿ ಪ್ರಭೇದಗಳಿವೆ ಎನ್ನುತ್ತಾರೆ. ಕರ್ತವ್ಯದ ಜೊತೆ ಫೋಟೊಗ್ರಫಿ ಹವ್ಯಾಸ ಹೊಂದಿರುವ ಅವರು ಕೆಜಿಎಫ್‌ಗೆ ವಲಸೆ ಬಂದಿರುವ ಪಕ್ಷಿಗಳ ಚಿತ್ರಗಳನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. ಬೀ ಈಟರ್‌ಗಳು ತಮಗೆ ಬೇಕಾದ ಕೀಟ ಆಹಾರ ಹುಡುಕಿಕೊಂಡು ಎಲ್ಲಿಗೆ ಹೋಗಲೂ ಸಿದ್ಧ ಎನ್ನುತ್ತಾರೆ.

ಕೆಜಿಎಫ್‌ನಲ್ಲಿ ಧ್ಯಾನಸ್ಥ ಬೀ ಈಟರ್
ಚಿತ್ರಗಳು: ಶಂಕರ್

ಕೈಗಾರಿಕೆಗೆ ಮೀಸಲು–ಪಕ್ಷಿ ಪ್ರಿಯರ ಆತಂಕ

ಕೆಜಿಎಫ್‌ನ ಬಂಗಾರದ ಗಣಿಯ ಈ ಜಾಗವನ್ನು ಕೈಗಾರಿಕಾ ಪ್ರದೇಶಕ್ಕೆಂದು ಮೀಸಲು ಇಡಲಾಗಿದೆ. ಮುಂದಿನ ದಿನಗಳಲ್ಲಿ ಕೈಗಾರಿಕೆಗಳು ಬಂದರೆ ಹಕ್ಕಿಗಳ ವಲಸೆ ನಿಲ್ಲಬಹುದು ಎಂಬುದು ಪಕ್ಷಿ ಪ್ರಿಯರ ಹಾಗೂ ಪಕ್ಷಿ ತಜ್ಞರ ಆತಂಕ. ಹೀಗಾಗಿ, ಸುತ್ತಮುತ್ತಲಿನ ಜಾಗವನ್ನು ಸಂರಕ್ಷಿಸಬೇಕು ಎಂಬ ಕೂಗು ಎದ್ದಿದೆ. ಈಗಾಗಲೇ ಕೆಲ ಭಾಗದಲ್ಲಿ ನೀಲಗಿರಿ ಮರ ಕತ್ತರಿಸಲಾಗಿದೆ. ಹೀಗಾಗಿ, ಹಕ್ಕಿಗಳು ಆಶ್ರಯ ಪಡೆಯಲು ತೊಂದರೆ ಆಗತೊಡಗಿದೆ.

ಶೋಲೆ ನೆನಪಿನ...

8ನೇಪುಟದಿಂದ...
‘ಶೋಲೆ’ಯಲ್ಲಿ ತುಡುಗು ಬುದ್ಧಿಯ ಯುವಕರಿದ್ದಾರೆ. ‘ಯೇ ಹಾತ್ ಹಮ್ಕೋ ದೇ ದೇ ಠಾಕೂರ್’ ಎನ್ನುವ ಪ್ರತಿನಾಯಕನ ಹರಿತ ಸಂಭಾಷಣೆ ಇದೆ.

ಗಾಜಿನ ಚೂರುಗಳ ಮೇಲೆ ಬಸಂತಿ ರಕ್ತ ಒಸರುವಾಗಲೂ ಕುಣಿಯುವ ಮೆಲೋಡ್ರಾಮಾವನ್ನು ನಗುನಗುತ್ತಲೇ ನೋಡಿದ್ದೇವೆ. ಎಲ್ಲರ ಮಧ್ಯೆ ಬದುಕಿನ ಸಂಧ್ಯಾಕಾಲದಲ್ಲಿ ಇರುವ ಠಾಕೂರ್ ಎಂಬ ತಣ್ಣಗಿನ ಪಾತ್ರ ಉಕ್ಕಿಸುವ ಸೇಡಿನ ತೀವ್ರವಾದ ಪಸೆ ಕಾಡುತ್ತದೆ. ವಿಧವಾ ವಿವಾಹಕ್ಕೆ ಈ ಸಮಾಜ ಒಪ್ಪೀತೆ ಎಂಬ ಸಣ್ಣ ಪ್ರಶ್ನೆಯೂ ಸಿನಿಮಾದಲ್ಲಿ ಬಂದು ಹೋಗುತ್ತದೆ. ಕೊಲೆ ನಡೆದ ಮರುಕ್ಷಣವೇ ಕಂಡ ‘ಮೆಹಬೂಬಾ ಮೆಹಬೂಬಾ’ ಎಂಬ ಆಶಾ ಭೋಂಸ್ಲೆ ಕಂಠದ ಲಯಬದ್ಧ ಐಟಂ ಗೀತೆ. ‘ಶೋಲೆ’ ಸಿನಿಮಾದಲ್ಲಿ ನಾಟಕೀಯತೆ, ಭಾವುಕತೆ, ಸಾಹಸ, ಮೆಲೋಡ್ರಾಮಾ ಎಲ್ಲವುಗಳ ಮಿಸಳಭಾಜಿ ಇಡುಕಿರಿದಿರುವುದು ಹೀಗೆ.

ರಮೇಶ್ ಸಿಪ್ಪಿ ಅವರ ತಂದೆ ಜಿ.ಪಿ. ಸಿಪ್ಪಿ ಆ ಕಾಲದಲ್ಲಿ ಎರಡು ಮೂರು ಕೋಟಿ ರೂಪಾಯಿ ಬಜೆಟ್ಟನ್ನು ಚಿತ್ರಕ್ಕೆ ವ್ಯಯಿಸಿದ್ದೇ ದೊಡ್ಡ ವಿಷಯ. ಠಾಕೂರ್ ಪಾತ್ರದಲ್ಲಿ ಸಂಜೀವ್ ಕುಮಾರ್ ನಿಯಂತ್ರಿತ ಅಭಿನಯ, ಜೈ ಪಾತ್ರದಲ್ಲಿ ಅಮಿತಾಭ್ ಬಚ್ಚನ್ ಖದರು, ದೇವ್ ಆಗಿ ಧರ್ಮೇಂದ್ರ ಫಾರ್ಮ್, ಹಳ್ಳಿಹುಡುಗಿ ಬಸಂತಿಯಾಗಿ ಹೇಮಾಮಾಲಿನಿ ತುಂಟ ಕಣ್ಣುಗಳು, ರಾಧೆಯಾಗಿ ಕಾಡುವ ಜಯಾ ಬಚ್ಚನ್...ಎಲ್ಲಕ್ಕೂ ಮಿಗಿಲಾಗಿ ಗಬ್ಬರ್ ಸಿಂಗ್ ಪಾತ್ರದಲ್ಲಿ ಮನಸೂರೆಗೊಂಡ ಅಮ್ಜದ್ ಖಾನ್. ಕಂಠ ಪರೀಕ್ಷೆ ಆದಮೇಲೆ ಈ ಪಾತ್ರಕ್ಕೆ ಅವರು ಸೂಕ್ತ ಹೌದೋ ಅಲ್ಲವೋ ಎಂಬ ಜಿಜ್ಞಾಸೆ ರಮೇಶ್ ಅವರಿಗೆ ಇತ್ತು. ಚಿತ್ರ ತೆರೆಕಂಡ ಮೇಲೆ ಆ ಪಾತ್ರ ದೊಡ್ಡ ಮಟ್ಟದಲ್ಲಿ ಕ್ಲಿಕ್ ಆದದ್ದು ಅವರಿಗೇ ಪರಮಾಶ್ಚರ್ಯ.

‘ಶೋಲೆ’ ಚಿತ್ರದ ಬರವಣಿಗೆಯನ್ನು ಈಗಲೂ ಬಗೆದುನೋಡುವ ಸಿನಿಮಾ ವಿದ್ಯಾರ್ಥಿಗಳಿದ್ದಾರೆ. ಅವರಿಗೆ ಅನುಕೂಲವಾಗಲೆಂದೇ ಈಗ ಚಿತ್ರದ ‘4ಕೆ ರಿಸ್ಟೋರೇಷನ್’ ಆಗಿದೆ. ಹೊಸಕಾಲದ ಚಿತ್ರಮಂದಿರಗಳ ತಾಂತ್ರಿಕ ಶ್ರೀಮಂತಿಕೆಗೆ ತಕ್ಕಂಥ ಗುಣಮಟ್ಟದಲ್ಲಿ ಸಿನಿಮಾ ನೋಡುವ ಅವಕಾಶ ಮತ್ತೆ ದೇಶದ ಹಲವೆಡೆ ಪ್ರೇಕ್ಷಕರಿಗೆ ಸಿಕ್ಕಿದೆ. ಲಂಡನ್ ಚಿತ್ರೋತ್ಸವದಲ್ಲಿ ‘ಶೋಲೆ’ ಚಿತ್ರದ ವಿಶೇಷ ಪ್ರದರ್ಶನಕ್ಕೆ ಅವಕಾಶ ದೊರೆತಿದೆ. ಅಷ್ಟೇ ಅಲ್ಲ, ಮೂಲ ಸಿನಿಮಾದಲ್ಲಿ ಕಟ್ ಮಾಡಲಾಗಿದ್ದ ಕ್ಲೈಮ್ಯಾಕ್ಸ್ ದೃಶ್ಯದ ಒಂದಂಶವನ್ನು ಮಾರ್ಪಾಟಾದ ಅವತರಣಿಕೆಯಲ್ಲಿ ಸೇರಿಸಲಾಗಿದೆ. ಗಬ್ಬರ್ ಸಿಂಗ್ ಅನ್ನು ಸ್ಪೈಕ್‌ಗಳಿರುವ ಬೂಟಿನಿಂದ ಠಾಕೂರ್ ತುಳಿದುಹಾಕುವ ಆರು ನಿಮಿಷ ಅವಧಿಯ ಸನ್ನಿವೇಶ ಮೊದಲಿಗೆ ಕಟ್ ಆಗಿತ್ತು. ಅದೇ ಈಗ ಮರುಸೇರ್ಪಡೆ ಆಗಿದೆ. ಹೊಸಕಾಲದ ಹಿಂಸಾವಿನೋದಪ್ರಿಯರಿಗೆ ಈ ಸನ್ನಿವೇಶ ಇಷ್ಟವಾಗಬಹುದು.

‘ಮೇಕಿಂಗ್ ಆಫ್ ಶೋಲೆ’ ಎಂಬ ಕಿರುಚಿತ್ರವನ್ನೂ ಸಿದ್ಧಪಡಿಸಲಾಗಿದ್ದು, ಒಟಿಟಿಗಳಲ್ಲಿ ಅದು ಬಿಡುಗಡೆಯಾಗಲಿದೆ.

ಭಾರತದ ವಿವಿಧೆಡೆ ಹೊಸ ಸ್ವರೂಪದ ‘ಶೋಲೆ’ ನೋಡುವ ಅವಕಾಶ ಸಿನಿಪ್ರಿಯರಿಗೆ ಸಿಗುತ್ತಿದೆ. ಹಾಕಿದ ಬಂಡವಾಳದ ಇಪ್ಪತ್ತು ಪಟ್ಟು ಹಣವನ್ನು ‘ಶೋಲೆ’ ಬಾಚಿಹಾಕಿ, ಭಾರತೀಯ ಚಿತ್ರರಂಗದ ಮೈಲಿಗಲ್ಲುಗಳಲ್ಲಿ ಒಂದೆನಿಸಿತ್ತು.

ರಾಮದೇವರ ಗುಡ್ಡದ ಶೂಟಿಂಗ್ ಸ್ಪಾಟ್‌ನಲ್ಲಿ ಅಡ್ಡಾಡುವ ಜನರು ‘ಇಲ್ಲೇ ಬಸಂತಿ ಕುಣಿದಿದ್ದು’ ಎಂದು ಕಣ್ಣರಳಿಸುವುದು ಸಿನಿಮಾ ಕೊಟ್ಟ ದೀರ್ಘಾವಧಿ ಸುಖಕ್ಕೆ ಇನ್ನೊಂದು ಉದಾಹರಣೆ. ‘ಯೇ ಹಾತ್ ಹಮ್ಕೋ ದೇ ದೇ ಠಾಕೂರ್’ ಎನ್ನುವ ಅಮ್ಜದ್ ಖಾನ್ ಕ್ರೌರ್ಯದ ವರ್ತನೆಯೇ ಈ ಕಾಲದ ಹಿಂಸಾವಿನೋದ ಸಿನಿಮಾಗಳ ಬೀಜಮಂತ್ರವೂ ಆಗಿದ್ದಿರಬೇಕು. ‘ಶೋಲೆ’ ಇಂತಹ ಹಲವು ಆಲೋಚನೆಗಳ ಟಿಸಿಲು ಮೂಡಿಸಲು ಕಾರಣವಾಗಿರುವುದೂ ದಿಟವೆನ್ನಿ.

ಶೋಲೆ ಚಿತ್ರದ ದೃಶ್ಯ

ಬಾಂಧವ್ಯ ಬೆಸೆಯುವ...

ಭಂಡಾರ ಜಾತ್ರೆಯ ನೋಟ

8 ನೇ ಪುಟದಿಂದ...
ಭಕ್ತರು ತಮ್ಮ ಭಕ್ತಿ ಹಾಗೂ ಶಕ್ತಿ ಅನುಸಾರ ಐದು ಕೆಜಿ, ಹತ್ತು ಕೆಜಿ, ಐವತ್ತು ಕೆಜಿ, ಒಂದು ಕ್ವಿಂಟಲ್, ಎರಡು ಕ್ವಿಂಟಲ್, ಐದು ಕ್ವಿಂಟಲ್ ಭಂಡಾರವನ್ನು ದೇವರ ಮೇಲೆ ಹಾರಿಸುವುದಾಗಿ ಹರಕೆ ಹೊರುತ್ತಾರೆ. ಕೆಲವರು ತಮ್ಮ ಇಷ್ಟಾರ್ಥ ಈಡೇರಲಿ ಎಂದು ಭಂಡಾರ ತೂರಿದರೆ, ಇನ್ನು ಕೆಲವರು ಇಷ್ಟಾರ್ಥ ಈಡೇರಿದ್ದಕ್ಕೆ ಭಂಡಾರ ತೂರುವ ಮೂಲಕ ಹರಕೆ ತೀರಿಸುತ್ತಾರೆ. ಭಕ್ತವೃಂದ ಭಂಡಾರ ತೂರಿದರೆ, ನೆಲ ಮುಗಿಲಿಗೆ ಹಳದಿ ಬಣ್ಣ ಏಣಿ ಹಾಕಿದಂತೆ ಕಾಣುತ್ತದೆ. ನೇಸರನ ಬೆಳಕಿನ ಕಿರಣಗಳಿಂದ ಭಂಡಾರ ಧೂಳಿನ ಕಣಗಳು ಚಿನ್ನದ ಮಳೆಯೇ ಸುರಿಯುತ್ತಿರುವಂತೆ ತೋರುತ್ತದೆ. ದೇವಸ್ಥಾನದ ಆವರಣವೂ ಸೇರಿದಂತೆ ಇಡೀ ಊರಿಗೆ ಊರೇ ಹಳದಿಮಯವಾಗಿ ಕಾಣುತ್ತಿರುತ್ತದೆ.

> ಅರಿಸಿನಕ್ಕೆ ಹೃದಯದ ಆರೋಗ್ಯ ಕಾಪಾಡುವ, ಉರಿಯೂತ ನಿವಾರಿಸುವ, ಕೀಲುಗಳ ಬಿಗಿತನ ತಡೆಯುವ ಹಾಗೂ ಚರ್ಮದ ಆರೋಗ್ಯ ಕಾಪಾಡುವ ಶಕ್ತಿ ಇದೆ ಎಂಬ ಕಾರಣಕ್ಕಾಗಿ ಭಂಡಾರ ರೂಪದಲ್ಲಿ ಬಳಸುವುದೇ ಆಚರಣೆಯ ಉದ್ದೇಶ ಇರಬಹುದು ಎಂದೆನಿಸುತ್ತದೆ.
>
> **ರವೀಂದ್ರ ಪಾಟೀಲ** ಕೇರೂರ

ಕೆಲವೊಂದು ಕಡೆಗೆ ರಾಸಾಯನಿಕ ಮಿಶ್ರಣ ಮಾಡಿದ ಭಂಡಾರವನ್ನು, ಇನ್ನು ಕೆಲವು ಕಡೆಗೆ ಶುದ್ಧ ಅರಿಸಿನದಿಂದ ತಯಾರಿಸಿದ ಭಂಡಾರವನ್ನು ಜಾತ್ರೆಗಳಲ್ಲಿ ವ್ಯಾಪಾರಿಗಳು ಮಾರಾಟ ಮಾಡುತ್ತಾರೆ. ಬಹುತೇಕ ದೇವಸ್ಥಾನಗಳ ಜಾತ್ರೆಯಲ್ಲಿ ಆಯಾ ಜಾತ್ರಾ ಸಮಿತಿಯು ರಾಸಾಯನಿಕ ಮಿಶ್ರಿತ ಭಂಡಾರ ಮಾರಾಟ ನಿಷೇಧಿಸಿದ್ದು, ಅಂತಹ ಪ್ರಕರಣ ಕಂಡು ಬಂದಲ್ಲಿ ಅವರಿಗೆ ದಂಡ ಹಾಕಿದ ಉದಾಹರಣೆಗಳೂ ಇವೆ.

ಗಡಿ ಭಾಗದಲ್ಲಿ ನಡೆಯುವ ಭಂಡಾರ ಜಾತ್ರೆಗಳಲ್ಲಿ ವರ್ಷದಿಂದ ವರ್ಷಕ್ಕೆ ಭಾಗವಹಿಸುವವರ ಸಂಖ್ಯೆ ಹೆಚ್ಚುತ್ತಲೇ ಇದ್ದು, ಭಂಡಾರ ತೂರುವ ಪ್ರಮಾಣವೂ ಹೆಚ್ಚಾಗುತ್ತಿದೆ.

ಕಥೆ
ಮೂಲ: ಎಂ. ಎಂ. ವಿನೋದಿನಿ
ಕನ್ನಡಕ್ಕೆ: ಜಿ. ವೀರಭದ್ರಗೌಡ
ಅವರ
ಬ್ಲಾಕ್ ಇಂಕ್
prajavani.net/short-story

ಕವನ
ಲಕ್ಷ್ಮಣ ವಿ ಎ
ಅವರ
ಕಾಗದದ ದೋಣಿ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ರೇಷ್ಮೆಗೂಡಿನ ಗೊಂಬೆಗಳು

• ಎಂ.ಆರ್.ಮಂಜುನಾಥ್

ನವಿರಾದ ರೇಷ್ಮೆಗೂಡುಗಳಿಂದ ಮನಮೋಹಕ ಗೊಂಬೆಗಳನ್ನು ಬೆಂಗಳೂರಿನ ಉಮಾ ವೆಂಕಟರಾಮ್ ನಲವತ್ತೈದು ವರ್ಷಗಳಿಂದ ಮಾಡುತ್ತಿದ್ದಾರೆ. ಇವರ ಕೈಯಲ್ಲಿ ರೇಷ್ಮೆಗೂಡುಗಳು ಜೀವಪಡೆಯುತ್ತವೆ. ಪುರಾಣ ಕಥೆಗಳು ಆಧಾರವಾಗಿರುವ ರಾಮನ ಪಟ್ಟಾಭಿಷೇಕ, ರಾಮನ ಘಟಾನಾವಳಿಗಳು, ಮಹಾಭಾರತ, ಕೃಷ್ಣಲೀಲೆ ಹಾಗೂ ಇನ್ನಿತರ ಕಲಾಕೃತಿಗಳು ಇವರ ಕೈಯಲ್ಲಿ ಅರಳಿವೆ.

ಕೇವಲ ಈ ಕಥೆಗಳಿಗಷ್ಟೇ ಸೀಮಿತರಾಗದೆ ವಿಶ್ವಕಪ್ ಕ್ರಿಕೆಟ್ ಆಟಗಾರರನ್ನು ಸಿದ್ಧಪಡಿಸಿದ್ದಾರೆ. ಭಾರತ ಹಾಗೂ ಆಸ್ಟ್ರೇಲಿಯಾ ಆಟಗಾರರು ಪಂದ್ಯ ಆಡುತ್ತಿರುವ ಕಲಾಕೃತಿಯನ್ನು ನಿರ್ಮಿಸಿದ್ದಾರೆ. ಇಷ್ಟಲ್ಲದೆ ಯಕ್ಷಗಾನ, ಗಾಂಧೀಜಿ, ಬುದ್ಧ, ಸರ್ವಜ್ಞ, ಸಂತಾಕ್ಲಾಸ್, ಕುರಾನ್ ಓದುತ್ತಿರುವುದು, ಆದಿಶೇಷನ ಮೇಲೆ ಮಲಗಿರುವ ರಂಗನಾಥ, ಕೃಷ್ಣನ ರಂಗಿನಾಟ, ವರಹಾದೇವಿ, ಹಳ್ಳಿ ಸೊಗಡು, ಮದುಮಕ್ಕಳು ಹೀಗೆ ಸಾಕಷ್ಟು ಆಕಾರದ ಕಲಾಕೃತಿಗಳನ್ನು ರೂಪಿಸಿದ್ದಾರೆ.

ಮನೆ ಗೋಡೆಗಳ ಅಲಂಕಾರದ ತೂಗು ಉಯ್ಯಾಲೆ ರೀತಿ ಇವುಗಳನ್ನು ಬಳಸಬಹುದು. ಆಕೃತಿಗೆ ತಕ್ಕಂತೆ ರೇಷ್ಮೆಗೂಡುಗಳನ್ನು ಕತ್ತರಿಸಿ ಜೋಡಿಸಿ ಅವುಗಳಿಗೆ ಬಣ್ಣಗಳ ಲೇಪನ ಮಾಡುತ್ತಾರೆ. ಬಳಿಕ ಮಣಿಸರಗಳು, ವಸ್ತ್ರ ವಿನ್ಯಾಸದಿಂದ ಅಲಂಕರಿಸುತ್ತಾರೆ.

ಅಜ್ಜಿಯ ಪ್ರೇರಣೆಯಿಂದ ಸ್ವತಃ ಈ ಕಲೆ ಕಲಿತು, ಮನೆಯಲ್ಲಿ ಬಿಡುವಿನ ವೇಳೆ ವಿವಿಧ ಬಗೆಯ ಗೊಂಬೆಗಳನ್ನು ಮಾಡುತ್ತಿದ್ದಾರೆ. 1979ರಿಂದ ರೇಷ್ಮೆಗೂಡುಗಳನ್ನು ನಮ್ಮದೇ ರಾಜ್ಯದ ರಾಮನಗರ ಹಾಗೂ ರಾಜಸ್ಥಾನದಿಂದ ತಂದು ಕಲಾಕೃತಿಗಳನ್ನು ತಯಾರಿಸುತ್ತಿದ್ದಾರೆ. ಇದರ ಜೊತೆಗೆ ಕೊಬ್ಬರಿ, ಮೇಣ, ಅಡಿಕೆ, ಸೋಪ್, ಬೆಲ್ಲದ ಅಚ್ಚು, ತೆಂಗಿನ ವಸ್ತುಗಳಿಂದಲೂ ಗೊಂಬೆಗಳನ್ನು ಮಾಡುತ್ತಾರೆ. ಮದುವೆ ಸಮಾರಂಭ, ಉಡುಗೊರೆಗಳಿಗೆ ನಾನಾ ವಿಧದ ಕಲಾಕೃತಿಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾರೆ. ಒಂದು ಕಲಾಕೃತಿ ತಯಾರಿಸಲು ಸುಮಾರು ಇಪ್ಪತ್ತು ದಿನಗಳು ಬೇಕು ಎನ್ನುತ್ತಾರೆ ಉಮಾ.

ರೇಷ್ಮೆಗೂಡಿನಿಂದ ಸಿದ್ಧಗೊಂಡ ಕಲಾಕೃತಿ

ಮುನ್ನೋಟ 12-10-2025 ರಿಂದ 18-10-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕ್ರೀಡಾಪಟುಗಳಿಗೆ ಬಹಳ ಹುಮ್ಮಸ್ಸು ಇರುತ್ತದೆ. ಆದಾಯವು ಕಡಿಮೆ ಇದ್ದು ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ಗುರುಹಿರಿಯರೊಡನೆ ಅನುಬಂಧ ಹೆಚ್ಚುತ್ತದೆ. ಎದುರಾದ ಸಮಸ್ಯೆಗಳಿಗೆ ಸ್ನೇಹಿತರಿಂದ ಸೂಕ್ತ ಪರಿಹಾರಗಳು ಸಿಗುತ್ತವೆ. ದೂರ ಪ್ರಯಾಣದ ಸಲುವಾಗಿ ಖರ್ಚು ಹೆಚ್ಚುತ್ತದೆ. ವಿದೇಶಿ ವ್ಯಾಪಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸಾಲದಿಂದ ಮುಕ್ತರಾಗಿ ನೆಮ್ಮದಿ ದೊರಕುವುದು. ಆದಾಯವು ಅವಶ್ಯಕತೆಯನ್ನು ಪೂರೈಸುತ್ತದೆ. ರೈತಾಪಿ ವರ್ಗದವರಿಗೆ ಬೆಳೆದ ಬೆಳೆಗಳಿಗೆ ತಕ್ಕಬೆಲೆ ದೊರೆಯುತ್ತದೆ. ಸಂಗಾತಿಯ ಸಂತೋಷಕ್ಕಾಗಿ ಹಣ ವ್ಯಯವಾಗುತ್ತದೆ. ವಿದ್ಯುತ್ ಉಪಕರಣಗಳ ದುರಸ್ತಿಗಾಗಿ ಹಣ ಖರ್ಚಾಗಬಹುದು. ವಿದ್ಯಾರ್ಥಿಗಳ ಅಭ್ಯಾಸ ಉತ್ತಮವಾಗಿರುತ್ತದೆ. ಬಂಧುಗಳ ನಡುವಿನ ವ್ಯವಹಾರಗಳು ನಷ್ಟಕ್ಕೆ ಕಾರಣವಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಉತ್ತಮ ಯಶಸ್ಸು ಲಭಿಸುತ್ತದೆ. ನಿಮ್ಮ ಆದಾಯದಲ್ಲಿ ಕೊರತೆಯನ್ನು ಕಾಣಬಹುದು. ಬಂಧುಗಳ ಮನೆಯಲ್ಲಿ ಧಾರ್ಮಿಕ ಕಾರ್ಯಗಳಿಗಾಗಿ ಹೋಗಿ ಬರುವಿರಿ. ಆಸ್ತಿ ಖರೀದಿಗಾಗಿ ಮುಂದಡಿ ಇಡಬಹುದು. ಕ್ರೀಡಾಪಟುಗಳಿಗೆ ಉತ್ತಮ ಅಭಿವೃದ್ಧಿ ಇರುತ್ತದೆ. ತಂದೆಯಿಂದ ನಿಮ್ಮ ಕೆಲಸಗಳಿಗೆ ಸ್ವಲ್ಪ ಮಟ್ಟಿನ ಆರ್ಥಿಕ ಸಹಾಯ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮನಸ್ಸಿನಲ್ಲಿ ವ್ಯಸನವಿದ್ದರೂ ಹೊರಗೆ ತೋರಿಸಿಕೊಳ್ಳುವುದಿಲ್ಲ. ಆದಾಯವು ಕಡಿಮೆ ಇರುತ್ತದೆ. ಬಂಧುಗಳು ಸ್ವಲ್ಪಮಟ್ಟಿಗೆ ಸಹಕರಿಸಬಹುದು. ಸಣ್ಣಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚು ನಿಗಾವಹಿಸಿರಿ. ಹೊಸ ಉದ್ಯೋಗದಲ್ಲಿ ಹಿರಿಯ ಅಧಿಕಾರಿಗಳ ಗಮನ ಸೆಳೆಯುವಿರಿ. ಖರ್ಚು ವೆಚ್ಚದಲ್ಲಿ ನಿಯಂತ್ರಣವನ್ನು ಸಾಧಿಸಿ ಹಣ ನಿರ್ವಹಣೆಯನ್ನು ಮಾಡಿರಿ. ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಇದ್ದ ಕೆಲವು ಸಂಕಷ್ಟಗಳು ದೂರವಾಗುತ್ತವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಾರದ ಆರಂಭದಲ್ಲಿ ಸಾಕಷ್ಟು ಆಲಸಿತನ ಇರುತ್ತದೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಬಂಧುಗಳ ನಡುವೆ ಮುಸುಕಿನ ಗುದ್ದಾಟ ಇರುತ್ತದೆ. ವಾಹನ ಚಲಾಯಿಸುವಾಗ ಸಾಕಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳಿರಿ. ಈಗ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ರಸ್ತೆ ನಿರ್ಮಾಣ ಮಾಡುವ ಗುತ್ತಿಗೆದಾರರಿಗೆ ಹೊಸ ಗುತ್ತಿಗೆಗಳು ಸಿಗುವ ಸಂದರ್ಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಸ್ವಂತ ಗೌರವದ ಮೇಲೆ ಆಸಕ್ತಿ ಹೆಚ್ಚುತ್ತದೆ. ವೈಯಕ್ತಿಕ ಜೀವನದಲ್ಲಿ ಸ್ವಲ್ಪಮಟ್ಟಿನ ಅಭಿವೃದ್ಧಿಯನ್ನು ಕಾಣಬಹುದು. ಆಸ್ತಿ ವ್ಯವಹಾರಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಕಾಣುವಿರಿ. ಪ್ರತಿಭಾವಂತರಿಗೆ ಈಗ ಉತ್ತಮ ಉದ್ಯೋಗಗಳು ದೊರೆಯುವ ಸಾಧ್ಯತೆಗಳಿವೆ. ಹೊಸ ಗೃಹೋದ್ಯಮ ಆರಂಭಿಸುವ ಸಲುವಾಗಿ ಸೂಕ್ತವ್ಯಕ್ತಿಗಳ ಜೊತೆ ಮಾತುಕತೆಯನ್ನು ನಡೆಸುವಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಮನಸ್ಸಿನಲ್ಲಿ ದ್ವಂದ್ವಗಳಿರುತ್ತವೆ. ಗೃಹ ನಿರ್ಮಾಣದಲ್ಲಿ ಇದ್ದ ತೊಡಕುಗಳು ನಿವಾರಣೆಯಾಗಿ ಪ್ರಗತಿಯನ್ನು ಕಾಣಬಹುದು. ನಿಮ್ಮ ಆದಾಯವೂ ಕಡಿಮೆ ಇರುತ್ತದೆ. ಬಂಧುಗಳ ಸಹಾಯ ಸಿಗುವುದು ಅನುಮಾನ. ವಿದೇಶದಲ್ಲಿರುವವರಿಗೆ ಸ್ಥಿರಾಸ್ತಿಯನ್ನು ಕೊಳ್ಳುವ ಯೋಗವಿದೆ. ಮಹಿಳಾ ಕಲಾವಿದರುಗಳಿಗೆ ಪ್ರೋತ್ಸಾಹ ಕಡಿಮೆಯಾಗಬಹುದು. ಪತ್ರಿಕಾರಂಗದಲ್ಲಿ ಇರುವವರಿಗೆ ಹೆಸರು ತರುವಂತಹ ಘಟನೆಗಳು ಸಂಭವಿಸುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕೆಲವರಿಗೆ ಸ್ವಲ್ಪ ನಿರಾಸಕ್ತಿ ಇರುತ್ತದೆ. ಈಗ ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿ ಸಂಬಂಧಿತ ಆದಾಯ ಕಡಿಮೆಯಾಗುವುದು. ಸಂಗಾತಿ ಮಾಡುವ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಹಿರಿಯರಿಂದ ಆರ್ಥಿಕ ಸಹಾಯ ದೊರೆಯುವುದು. ವೃತ್ತಿ ಜೀವನದ ಸಮಸ್ಯೆಗಳಿಗೆ ಅಲ್ಪಮಟ್ಟಿನ ಪರಿಹಾರ ದೊರೆಯುತ್ತದೆ. ಹೊಸ ವಾಹನ ಮಾರಾಟವನ್ನು ಮಾಡುವವರಿಗೆ ಮಾರಾಟದಲ್ಲಿ ಪ್ರಗತಿ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಏನೇ ಬಂದರೂ ಎದುರಿಸುವ ಛಲ ನಿಮ್ಮಲ್ಲಿ ಇರುತ್ತದೆ. ಆದಾಯ ಕಡಿಮೆ ಇದ್ದರೂ ಹಣ ನಿರ್ವಹಣೆಯನ್ನು ಸರಿಯಾಗಿ ಮಾಡುವಿರಿ. ಬಂಧುಗಳು ಒಳಸಂಚನ್ನು ಮಾಡಬಹುದು. ಮೂಳೆ ನೋವುಗಳು ಸ್ವಲ್ಪ ಹೆಚ್ಚಾಗಬಹುದು. ದೈನಂದಿಕ ಚಟುವಟಿಕೆಗಳಲ್ಲಿ ಸಾಕಷ್ಟು ಉತ್ಸಾಹವನ್ನು ಕಾಣಬಹುದು. ದೇವತಾ ದರ್ಶನವನ್ನು ಮಾಡುವ ಯೋಗವಿದೆ. ಸಂಗಾತಿಯ ವೈಯಕ್ತಿಕ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವ್ಯಕ್ತಿ ಗೌರವಕ್ಕೆ ಹೆಚ್ಚು ಗಮನ ಕೊಡುವಿರಿ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಎಲ್ಲರೊಂದಿಗೂ ಹೊಂದಾಣಿಕೆ ಮಾಡಿಕೊಳ್ಳುವ ಗುಣದಿಂದ ಎಲ್ಲರೂ ನಿಮಗೆ ಸಹಕಾರ ನೀಡುವರು. ಶತ್ರುಗಳನ್ನು ಅವರದೇ ರೀತಿಯಲ್ಲಿ ಮಣಿಸುವಿರಿ. ಹಣಕಾಸಿನ ವ್ಯವಹಾರಗಳು ಬೇಡ. ಹೆಚ್ಚಿನ ವಿದ್ಯೆಯನ್ನು ಕಲಿಯಲು ದೂರ ಪ್ರಯಾಣ ಮಾಡಬೇಕಾಗಿರುತ್ತದೆ. ಸುಗಂಧ ದ್ರವ್ಯಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಣೆಯಾಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದೇಶದಲ್ಲಿ ಇರುವವರಿಗೆ ಅಭದ್ರತೆ ಕಾಡಬಹುದು. ಈಗ ಆದಾಯವು ಕಡಿಮೆ ಇದ್ದು ಎಚ್ಚರದಿಂದ ಹಣ ನಿರ್ವಹಣೆ ಮಾಡಿರಿ. ಮನೆಗೆ ಕೆಲವೊಂದು ಗೃಹಪಯೋಗಿ ವಸ್ತುಗಳನ್ನು ಖರೀದಿ ಮಾಡುವಿರಿ. ಗೊಂದಲದ ಸ್ಥಿತಿಯಿಂದ ಯುವಕರು ವ್ಯವಹಾರಗಳಲ್ಲಿ ನಷ್ಟವನ್ನು ಅನುಭವಿಸುವ ಸಾಧ್ಯತೆ ಇದೆ. ಮಹಿಳೆಯರ ರೆಡಿಮೇಡ್ ಬಟ್ಟೆಗಳನ್ನು ಮಾರುವವರಿಗೆ ಸಾಕಷ್ಟು ಲಾಭ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಮುಂದೂಡಿಕೆಯ ಅಭ್ಯಾಸದಿಂದ ಕೆಲವು ಅವಕಾಶಗಳನ್ನು ಕಳೆದುಕೊಳ್ಳುವಿರಿ. ಆದಾಯವು ಇದ್ದರೂ ಅದು ನಿಮ್ಮನ್ನು ತಲುಪುವುದು ನಿಧಾನವಾಗುತ್ತದೆ. ಒಡಹುಟ್ಟಿದವರಿಂದ ಮತ್ತು ಬಂಧುಗಳಿಂದ ನಿರೀಕ್ಷಿತ ಸಹಕಾರ ದೊರೆಯುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಹೊಟ್ಟೆಯೊಳಗೆ ಸ್ವಲ್ಪ ತೊಂದರೆಗಳು ಕಾಣಿಸಬಹುದು.

ಪದಬಂಧ 2913

ಮೇಲಿನಿಂದ ಕೆಳಕ್ಕೆ
1. ರವಿಗೆ ಬರುವವ ಮಧ್ಯದಲ್ಲಿ ಹಾಯಬಹುದೆ? 4
2. ಇದು ಬಂದರೆ ಗ್ರಾಮ ಗ್ರಾಮಗಳೇ ಕೊಚ್ಚಿ ಹೋಗಬಹುದು 4
3. ಕೆಲವರಿಗೆ ಶ್ವಾನವನ್ನು ಕಂಡರೆ ಬಲುಭೀತಿ 4
4. ಕಲ್ಲಿನಲ್ಲಿ ಎತ್ತಬಹುದಾದ ದೀಪದ ಬೆಳಗು 4
7. ಕೋಪಗೊಂಡ ಮಹಾ ಶಿವನ ಮಹಾ ನರ್ತನ 5
8. ನುಡಿ, ನಡೆ, ತಾಳ್ಮೆ ಇತ್ಯಾದಿ ಎಲ್ಲಾ ಒಳ್ಳೆ ಸ್ವಭಾವದ ಸಮ್ಮಿಲನ 5
9. ಹಾವಿನಂತಹ ಹೆರಳಿಗಿಟ್ಟ ಹಾವಿನ ಬಿಲ್ಲೆ 5
10. ಯುದ್ಧದಷ್ಟು ಭಯಂಕರ 5
13. ಕೂಪದ ಕೇಂದ್ರ 4
14. ನಾಲಿಗೆಯಲ್ಲಿ ನೀರೂರಿಸುವ ಅಡಿಗೆ 4
16. ಮಧ್ಯಪ್ರದೇಶದಲ್ಲಿ ಹುಟ್ಟಿ ಒರಿಸ್ಸಾದಲ್ಲಿ ಹರಿಯುವ ಶ್ರೇಷ್ಠವಾದ ದೊಡ್ಡ ಹೊಳೆ 4
17. ಭೂಮಿ ಸಾಗರದ ಸಂಗಮ ರೇಖೆ 4

ಎಡದಿಂದ ಬಲಕ್ಕೆ
1. ಎದುರು ಬದುರು ಪರಸ್ಪರ ಒಂದೇ ರೀತಿಯ ಮನ್ನಣೆ 4
3. ನಗರದ ರೀತಿ ನೀತಿಗಳನ್ನು ಕಲಿತು ಮೈಗೂಡಿಸಿಕೊಂಡವ 4
5. ಬೇವಿನ ಕಹಿಗೆ ಸಾಕ್ಷಿಯಾದದ್ದು 5
6. ‘ಅಯ್ಯೋ ಪಾಪ’ ಎಂಬ ದಯಾಭಾವ ದ್ರವವಾಗಿ ಹರಿದಿದೆ 5
9. ಉಫೇ ನಮ್ಮೆಲ್ಲರ ಭಾರ ಹೊತ್ತ ನಮ್ಮ ರಾಷ್ಟ್ರ ಜನನಿಗೆ 5
11. ಜ್ಯೋತಿಷ್ಯಾಸ್ತ್ರದಲ್ಲಿ ಎಣಿಕೆಗೆ ಬರುವ ಸಾಗರೋತ್ಪನ್ನ 3
12. ತುಳುನಾಡಲ್ಲಿ ಶಿವನೆಸದ ಕಲ್ಲಿಂದ ಹುಟ್ಟಿದ ದೈವ 3
13. ಹೊಸದಾಗಿ ಕಾಣಿಸುವ ಉತ್ಸಾಹಿ ಯುವಕ 5
15. ಮುಗಿಲ ನಕ್ಷತ್ರವನ್ನು ಮುಟ್ಟುವ ದಶರಥಾತ್ಮಜನ ನಾಮ 5
18. ಅಡುಗೆಯ ಕಾನೂನು ಸಂಹಿತೆ 5
19. ಮುಂದಾಳೇ ಇಲ್ಲದ ಇವನಿಗೆ ಅಗ್ರಪೂಜೆ 4
20. ಹಣತೆ ಹಚ್ಚಿ, ಪಟಾಕಿ ಸಿಡಿಸುವ ಬೆಳಕಿನ ಹಬ್ಬ 4



ಪದಬಂಧ ಉತ್ತರ -2912

ಮೇಲಿಂದ ಕೆಳಕ್ಕೆ
1. ಶ್ಯಾಮಲಾ 2.ಗಳಹು 3.ಕುಂತಿ 4.ರಜತಾಚಲ 5.ಅರವ 7.ಬಹುಬೀಜಾಫಲ 9.ರಿಪುಸಂಹಾರಿಣಿ 11.ರುತ 14.ಕವಿ 15.ಶಕ್ತಿದೇವತೆ 18.ಕುಸುಮ 20.ಮಮತಾ 21.ಪಟಲ 22.ಬಾಳು

ಎಡದಿಂದ ಬಲಕ್ಕೆ
1. ಶ್ಯಾನುಭೋಗ 3.ಕುಂಬಾರ 5.ಅಪಖ್ಯಾತಿ 6.ಲಾಲಬಹದ್ದೂರ 8.ವಶಂಕರಿ 10.ಬೀರೂರು 12.ಪುಕ್ಕಲ 13.ತವಕ 15.ಶರೀಫ 16.ವಿರಹಾ 17.ಲಗ್ಗೆಹಾಕು 19.ಸುಧಾಮಣಿದ್ವೀಪ 22.ಬಾಲರಾಮ 23.ತೆರಳು 24.ತಾರಾಬಲ

ಸಂಗೀತದ ಮಹಾ ಮಹೋಪಾಧ್ಯಾಯ!

• ಉಮಾ ಅನಂತ್

ಹಿಂದೂಸ್ತಾನಿ ಗಾಯನವಲ್ಲದೆ ತಬಲಾ, ಕೊಳಲು ಗಿಟಾರ್, ಮ್ಯಾಂಡೊಲಿನ್‌ನಂತಹ ವಾದ್ಯಗಳ ನುಡಿಸಾಣಿಕೆಯಲ್ಲೂ ಪ್ರಾವೀಣ್ಯರಾಗಿರುವ ಪಂಡಿತ ವಿ.ಎಂ. ನಾಗರಾಜ್, ಸಂಗೀತದ ಅಪರೂಪದ ಬಿರುದು 'ಮಹಾಮಹೋಪಾಧ್ಯಾಯ' ತನ್ನ ಮುಡಿಗೇರಿಸಿಕೊಂಡಿದ್ದಾರೆ.

ಸಂಗೀತದಲ್ಲಿ 'ಮಹಾಮಹೋಪಾಧ್ಯಾಯ' ಎಂಬುದು ಬಹು ದೊಡ್ಡ ಬಿರುದು. 'ಮಹಾ ವಿದ್ವಾಂಸ', 'ಮಹಾ ಪಂಡಿತ', 'ಅತ್ಯಂತ ಶ್ರೇಷ್ಠ ಶಿಕ್ಷಕ' ಎಂಬುದು ಇದರ ಅರ್ಥ. ಹಿಂದೂಸ್ತಾನಿ ಸಂಗೀತದಲ್ಲಿ ಪಂಡಿತ ಆರ್.ವಿ. ಶೇಷಾದ್ರಿ ಗವಾಯಿಗಳು ಸ್ವತಃ ಉತ್ತಮ ಗಾಯಕರಾಗಿ, ವಾದಕರಾಗಿ, ಬೋಧಕರಾಗಿ, ಸಂಘಟಕರಾಗಿದ್ದಲ್ಲದೆ ನೂರಾರು ಶಿಷ್ಯಂದಿರನ್ನು ತಯಾರು ಮಾಡಿ 'ಮಹಾಮಹೋಪಾಧ್ಯಾಯ' ಬಿರುದು ಪಡೆದವರು. ಈ ಬಿರುದು ಒಲಿಯಬೇಕಾದರೆ ಅಸಾಧಾರಣ ಸಾಧನೆ, ಪರಿಶ್ರಮ ಬೇಕು. ಗವಾಯಿ ಅವರದೇ ಗರಡಿಯಲ್ಲಿ ಸುಮಾರು ಎರಡೂವರೆ ದಶಕಗಳ ಕಾಲ ಪಳಗಿ, ಮಹತ್ತರ ಸಾಧನೆ ಮಾಡಿ 'ಮಹಾಮಹೋಪಾಧ್ಯಾಯ' ಬಿರುದನ್ನು ಈಗ ತನ್ನದಾಗಿಸಿಕೊಂಡವರು ಹಿಂದೂಸ್ತಾನಿ ವಿದ್ವಾಂಸ, ಬೆಂಗಳೂರಿನ ಪಂಡಿತ ವಿ.ಎಂ. ನಾಗರಾಜ್.

ಮುಂಬಯಿಯ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ನೀಡುವ 'ಮಹಾಮಹೋಪಾಧ್ಯಾಯ' ಬಿರುದು, ಅಗಣಿತ ಗುಣವನ್ನು ಸಂಗೀತದಲ್ಲಿ ನಿರೀಕ್ಷಿಸುತ್ತದೆ. ತಮ್ಮ ಗುರುಗಳಂತೆಯೇ ಪಂಡಿತ ವಿ.ಎಂ. ನಾಗರಾಜ್ ಅವರೂ ಗಾಯನ, ವಾದನ, ಬೋಧನೆ, ಸಂಗೀತ ಕೃತಿ ರಚನೆ, ತಾಳಗಳ ರಚನೆ, ಸಂಗೀತ ಬರವಣಿಗೆ, ಸಂಗೀತ ಪರೀಕ್ಷಾ ನಿರ್ವಹಣೆಯಲ್ಲಿ ತೊಡಗಿ ಸುಮಾರು ಏಳು ದಶಕಗಳು ಸಂಗೀತಕ್ಕಾಗಿ ಶಕ್ತಿಮೀರಿ ಶ್ರಮಿಸಿದ್ದಾರೆ. ಹಿಂದೂಸ್ತಾನಿ ಸಂಗೀತದ ಗ್ವಾಲಿಯರ್ ಘರಾಣೆಯಲ್ಲಿ ಹಾಡುವ ಪಂಡಿತ ನಾಗರಾಜ್ ಗಾಯನ ಮಾತ್ರವಲ್ಲದೆ ತಬಲಾ, ಕೊಳಲು, ಗಿಟಾರ್, ಹಾರ್ಮೋನಿಯಂ ಮುಂತಾದ ವಾದ್ಯಗಳನ್ನು ನುಡಿಸುವುದರಲ್ಲೂ ಪರಿಣತರು.

ಕರ್ನಾಟಕ ಸರ್ಕಾರ ನಡೆಸುವ ಸಂಗೀತ ಬೋರ್ಡ್ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ, ಅನೇಕ ಸಂಗೀತ ಪರೀಕ್ಷೆ ಹಾಗೂ ಸ್ಪರ್ಧೆಗಳ ನಿರ್ಣಾಯಕರಾಗಿ ಸಂಗೀತಕ್ಕಾಗಿ ಅವಿರತವಾಗಿ ದುಡಿದವರು. ಪುರಂದರದಾಸರು, ಕನಕದಾಸರು, ಹಿಂದಿ ಭಜನ್, ವಚನಗಳು, ಕನ್ನಡ ಗೀತೆಗಳಿಗೆ ರಾಗ ಸಂಯೋಜನೆ ಮಾಡಿ ನಿರಂತರವಾಗಿ ಸಂಗೀತ ಕೈಂಕರ್ಯ ಮಾಡುತ್ತಾ ಬಂದವರು. ಅನೇಕ ಪುಸ್ತಕ, ಸೀಡಿಗಳನ್ನು ಬಿಡುಗಡೆ ಮಾಡಿ ಸಂಗೀತವನ್ನು ಮುಂದಿನ ಪೀಳಿಗೆಗೂ ತಲುಪುವಂತೆ ಜತನವಾಗಿ ಕಾಪಿಟ್ಟವರು ಈ ವಿದ್ವಾಂಸರು.

ಅಖಿಲ ಭಾರತ ಮಟ್ಟದಲ್ಲಿ ಮುಂಬಯಿಯ ಗಂಧರ್ವ ಮಹಾವಿದ್ಯಾಲಯ ವರ್ಷಕ್ಕೆರಡು ಬಾರಿ ಸಂಗೀತದ ವಿವಿಧ ಹಂತಗಳ ಪರೀಕ್ಷೆಗಳನ್ನು ನಡೆಸುತ್ತಾ ಬರುತ್ತಿದೆ. ದೇಶ ಹಾಗೂ ವಿದೇಶಗಳ ಒಟ್ಟು 800 ಕೇಂದ್ರಗಳಲ್ಲಿ ಈ ಪರೀಕ್ಷೆ ನಡೆಯುತ್ತದೆ. ಬೆಂಗಳೂರಿನಲ್ಲಿ ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯದ ಸಮಸ್ತ ಹೊಣೆ ಹೊತ್ತು ಸಾವಿರಾರು ಮಕ್ಕಳಿಗೆ ಸಂಗೀತ ಪರೀಕ್ಷೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದವರು ಇವರು.

ಪಂ. ವಿ.ಎಂ. ನಾಗರಾಜ್

ಎಲ್ಲ ಸಾಧಕರ ಬದುಕಿನಲ್ಲೂ ಅವಿಸ್ಮರಣೀಯ ಘಟನೆಗಳಿರುತ್ತವೆ. ಪಂಡಿತ ನಾಗರಾಜ್ ಅವರ ಬದುಕಿನ ಮರೆಯಲಾಗದ ಕ್ಷಣವನ್ನು ನೆನಪಿಸುವಂತೆ ಕೇಳಿದಾಗ ಅವರು ಹೇಳಿದ್ದಿಷ್ಟು. 'ಅದು ನಾನು ಹೈಸ್ಕೂಲ್ ಓದುತ್ತಿದ್ದ ದಿನಗಳು. ಅಂದರೆ 1958ನೇ ಇಸವಿ. ಬೆಂಗಳೂರಿನ ಸೈಂಟ್ ಜೋಸೆಫ್ ಸ್ಕೂಲ್‌ನಲ್ಲಿ ಓದುತ್ತಿದೆ. ಆಗ ನಡೆಸಿದ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸಿದೆ. ನನಗೆ ಪ್ರಥಮ ಬಹುಮಾನವೂ ಬಂತು. ಇದನ್ನು ಸರ್.ಎಂ. ವಿಶ್ವೇಶ್ವರಯ್ಯ ಅವರಿಂದ ಪಡೆದೆ. ಅದೂ ಕುವೆಂಪು ಅವರ ಸಮ್ಮುಖದಲ್ಲಿ. ಇದು ನನ್ನ ಸೌಭಾಗ್ಯ ಎಂದೇ ಭಾವಿಸುತ್ತೇನೆ'. ಹಳೆಯ ಘಟನೆಯನ್ನು ಮೆಲುಕು ಹಾಕಿದ ಪಂಡಿತರ ಮುಖದಲ್ಲಿ ಸಂತೃಪ್ತ ಭಾವ.

ಸಂಗೀತ ಬರವಣಿಗೆ

ಎಷ್ಟೋ ಸಂದರ್ಭದಲ್ಲಿ ಚೆನ್ನಾಗಿ ಹಾಡುವ ಗಾಯಕ, ಬರವಣಿಗೆಯಲ್ಲಿ ಯಶ ಸಾಧಿಸಲು ಆಗದು. ಆದರೆ ಪಂಡಿತ ನಾಗರಾಜ್, ಗಾಯನ, ವಾದನ, ಬೋಧನೆ ಜೊತೆಗೆ ಬರವಣಿಗೆಯಲ್ಲೂ ನಿಸ್ಸೀಮರು. ಪಂಡಿತ ಶೇಷಾದ್ರಿ ಗವಾಯಿಗಳು 'ಗಾಯನ ಗಂಗಾ' ಎಂಬ ಸಂಗೀತ ಮ್ಯಾಗಸಿನ್ ಹೊರತರುತ್ತಿದ್ದರು. ಸುಮಾರು 50 ವರ್ಷಗಳು ಅಚ್ಚುಕಟ್ಟಾಗಿ ಹೊರಬಂದ ಈ ಮ್ಯಾಗಸಿನ್‌ಗೆ ವಿ.ಎಂ. ನಾಗರಾಜ್ ಅವರು, ಸುಮಾರು 25 ವರ್ಷಗಳು ನಿರಂತರವಾಗಿ ಸಂಗೀತ ಲೇಖನಗಳನ್ನು ಬರೆದಿದ್ದಾರೆ.

ಸಂಗೀತ ಕೃತಿ ರಚನೆಯಲ್ಲೂ ತೊಡಗಿಕೊಂಡಿರುವ ಇವರು, ಕನ್ನಡ, ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿಯೂ ಅನೇಕ ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಅಲ್ಲದೆ ಹತ್ತು ತಾಳಗಳನ್ನೂ ರಚಿಸಿದ್ದಾರೆ. ಹಿಂದೂಸ್ತಾನಿ ಶೈಲಿಯ 12 ಸ್ವರಗಳ ಮೇಲೆ ಒಂದು ಸರ್‌ಗಮ್ ಗೀತೆ ಮತ್ತು ತರಾನ ರಚನೆ ಮಾಡಿದ್ದಾರೆ. ಸಂಗೀತದ 'ಥಾಟ್' ರಾಗಗಳ ಮೇಲೆ 'ಥಾಟ್ ಮಾಲಿಕಾ' ಎಂದು ಹಾಡುಗಳನ್ನು ರಚಿಸಿದ್ದಾರೆ. ಭೈರವ್, ಭೈರವಿ, ಕಾಫಿ, ಅಸಾವರಿ, ತೋಡಿ.. ಹೀಗೆ ಎಲ್ಲ ಥಾಟ್‌ಗಳನ್ನು ತೆಗೆದುಕೊಂಡು ಇದರ ಮೇಲೆ ಹೊಸ ಕೃತಿ ರಚನೆ ಮಾಡಿದ್ದಾರೆ. ಅಲ್ಲದೆ ಪುರಂದರದಾಸ, ಕನಕದಾಸರ ಕೃತಿಗಳಿಗೆ, ಹಿಂದಿ ಭಜನ್, ವಚನಗಳು, ಕನ್ನಡ ಗೀತೆಗಳಿಗೆ ರಾಗ ಸಂಯೋಜನೆ ಮಾಡಿರುವುದು ಇವರ ಸಾಧನೆಗೆ ಸಾಕ್ಷಿ.

ಬೆಂಗಳೂರಿನ ಕೆಂಗೇರಿ ಸಮೀಪ ನಾದವಾಹಿನಿ ಶ್ರೀ ದತ್ತ ಸಂಗೀತ ವಿದ್ಯಾನಿಕೇತನ ಸಂಗೀತ ಸಂಸ್ಥೆ ನಡೆಸುತ್ತಿರುವ ವಿ.ಎಂ. ಎನ್. ತಮ್ಮ ಎಂಬತ್ತರ ಇಳಿವಯಸ್ಸಿನಲ್ಲೂ ಸಂಗೀತ ಪಾಠ ಹೇಳಿಕೊಡುತ್ತಿದ್ದಾರೆ. ಬಡಮಕ್ಕಳ ಪರೀಕ್ಷಾ ಶುಲ್ಕವನ್ನೂ ಭರಿಸಿ ತಮ್ಮ ಸಂಗೀತಾಭಿಮಾನ ಮೆರೆದಿರುವುದು ಅನುಕರಣೀಯ ಆದರ್ಶವೂ ಹೌದು. ತಮ್ಮ ಸಂಸ್ಥೆಯಲ್ಲಿ ಗಾಯನ, ತಬಲಾ, ಕೊಳಲು, ಮ್ಯಾಂಡೊಲಿನ್, ಹಾರ್ಮೋನಿಯಂ, ವಯೊಲಿನ್, ಗಿಟಾರ್ ಮುಂತಾದ ವಾದ್ಯಗಳನ್ನು ಸಹ ಮಕ್ಕಳಿಗೆ ಕಲಿಸುತ್ತಿದ್ದಾರೆ.

ಪ್ರಶಸ್ತಿಗಳು

ಹಿಂದೂಸ್ತಾನಿ ಸಂಗೀತ ಸುಧಾರ್ಣವ, ಸಂಗೀತ ಕಲಾರವಿಂದ, ಸಂಗೀತ ಕೇಸರಿ, ಸ್ವರಕಲಾ, ಸವಿಗಾನ ರತ್ನ, ಕರ್ನಾಟಕ ಕಲಾಶ್ರೀ, ಕೆಂಪೇಗೌಡ ಪ್ರಶಸ್ತಿ, ಸಂಗೀತ ಸಾಧಕ ಮುಂತಾದ ಪ್ರಶಸ್ತಿಗಳನ್ನು ಮುಡಿಗೇರಿಸಿರುವ ಅವರಿಗೆ ಸಂಗೀತದ ಅತ್ಯುನ್ನತ ಗೌರವ 'ಮಹಾಮಹೋಪಾಧ್ಯಾಯ' ಲಭಿಸಿರುವುದು ಸಂಗೀತ ಪ್ರಿಯರಿಗೆ ಹೆಮ್ಮೆಯ ವಿಷಯ. ❖

ನಾಟಕದ ದೃಶ್ಯ

ಚಿತ್ರರೂಪಕ ಶಕ್ತಿಯಿಂದಲೇ ಗಮನ ಸೆಳೆಯುವ ಕುಹೂ

• ಎಂ.ರಾಘವೇಂದ್ರ

ಸಾಹಿತ್ಯ ಕೃತಿಗಳನ್ನು ಆಧರಿಸಿ ಕಟ್ಟುವ ರಂಗ ಪ್ರಯೋಗಗಳು 'ಶಬ್ದ'ವನ್ನು ಆಧರಿಸಿರುತ್ತವೆ. ಸಾಹಿತ್ಯ ಕೃತಿಯ ನೆರವಿಲ್ಲದೆ 'ಚಿತ್ರ' (ಇಮೇಜ್) ಗಳ ಮೂಲಕವೇ ಒಂದು ರಂಗ ಪ್ರಯೋಗವನ್ನು ಹೇಗೆ ಸಶಕ್ತಗೊಳಿಸಬಹುದು ಎಂಬುದಕ್ಕೆ ಕೇರಳದ ಲಿಟ್ಲ್ ಅರ್ಥ್ ಸ್ಕೂಲ್ ಆಫ್ ಥಿಯೇಟರ್ ತಂಡದ 'ಕುಹೂ' ನಾಟಕ ಉತ್ತಮ ಉದಾಹರಣೆ.

'ನಿರ್ದಿಗಂತ' ನಿರ್ಮಿಸಿರುವ ಅರುಣ ಲಾಲ್ ನಿರ್ದೇಶನದ 'ಕುಹೂ' ನಾಟಕ ಈಚೆಗೆ ಹೆಗ್ಗೋಡಿನಲ್ಲಿ ನೀನಾಸಂ ಆಯೋಜಿಸಿದ್ದ 'ಕಲೆಗಳ ಸಂಗಡ ಮಾತುಕತೆ' ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ರೈಲು, ರೈಲು ನಿಲ್ದಾಣವನ್ನೇ ರೂಪಕವಾಗಿಟ್ಟುಕೊಂಡು ಭಾರತದ ಇತಿಹಾಸ, ಸಾಮಾಜಿಕ, ರಾಜಕಾರಣದ ಕಥನಗಳನ್ನು ಬಿಚ್ಚಿಡುತ್ತ ನಾಟಕ ವರ್ತಮಾನಕ್ಕೆ ಮುಖಾಮುಖಿಯಾಗುತ್ತದೆ. ರೈಲು, ರೈಲು ನಿಲ್ದಾಣಗಳ ಕುರಿತು ಇರುವ ಕತೆಗಳೇ 'ಕುಹೂ' ನಾಟಕದ ಪಠ್ಯ.

ರೈಲು ಪ್ರಯಾಣ ಎಂಬುದೇ ಒಂದು 'ಜೀವನ ದರ್ಶನ' ಎಂಬ ತಾತ್ವಿಕತೆ ಈ ನಾಟಕದ ಹಿಂದಿದೆ.

ರೈಲು, ರೈಲು ನಿಲ್ದಾಣದ ಕುರಿತ ಆಟವೊಂದರ ಮೂಲಕ ಬಿಚ್ಚಿಕೊಳ್ಳುವ ಕಥನ ಒಂದೊಂದೆ 'ಚಿತ್ರ'ಗಳ ಮೂಲಕ ನಿರೂಪಿತಗೊಳ್ಳುತ್ತ ಸಾಗುತ್ತದೆ. 70-80ರ ದಶಕದವರೆಗೆ ಪ್ರಯಾಣದಲ್ಲಿ ಬಳಕೆಯಾಗುತ್ತಿದ್ದ ಟ್ರಂಕ್‌ಗಳೇ ಇಲ್ಲಿನ ರೈಲು ಬೋಗಿಗಳು, ಹಳಿಗಳು ಚಕ್ರಗಳಾಗುವ ಜೊತೆಗೆ ನಿಲ್ದಾಣದ ಪರಿಕರಗಳಾಗಿಯೂ ಬಳಕೆಯಾಗಿವೆ.

ಜನಸಂದಣಿಯ ರೈಲು ಪ್ರಯಾಣದ ಸಂಕಟ, ಶೌಚಾಲಯದ ಅವ್ಯವಸ್ಥೆ, ನಿಲ್ದಾಣದಲ್ಲಿನ ಪ್ರೇಮ ಪ್ರಸಂಗಗಳು, ಸಮಯಕ್ಕೆ ಸರಿಯಾಗಿ ನಿಲ್ದಾಣಕ್ಕೆ ಬಾರದೆ ರೈಲು ತಪ್ಪಿಸಿಕೊಂಡವರ ದುಗುಡ, ರೈಲುಗಳಲ್ಲಿನ ಕಳ್ಳತನ-ಹೀಗೆ ವಿವಿಧ ಘಟನೆಗಳನ್ನು ವಿಡಂಬನಾತ್ಮಕ ಶೈಲಿಯಲ್ಲಿ ಅಳವಡಿಸಲಾಗಿದೆ.

ರೈಲು ನಿಲ್ದಾಣದಲ್ಲಿ ನಡೆಯುವ ಕಳ್ಳ-ಪೊಲೀಸ್ ಆಟದಲ್ಲಿ ಪೊಲೀಸನೆ ಕಳ್ಳನಾಗಿ ಪರಿವರ್ತನೆಯಾದಾಗ ಬರುವ 'ಚೌಕಿದಾರ್ ಚೋರ್ ಹೈ' ಎಂಬ ಮಾತು ಇಂದಿನ ರಾಜಕೀಯದ ಪರಿಭಾಷೆಯನ್ನು ಪ್ರತಿಬಿಂಬಿಸುತ್ತದೆ. ನಿಲ್ದಾಣದಲ್ಲಿ ಮಹಿಳೆಯೊಬ್ಬಳ ಸಾವಾಗಿ ಆಕೆಯೆ ದೆವ್ವವಾಗಿ ಕಾಡುತ್ತಾಳೆ ಎಂಬ ನಂಬಿಕೆಯಿಂದ ಒಂದು ರೈಲು ನಿಲ್ದಾಣವನ್ನೆ ಬಂದ್ ಮಾಡಿದ ಕತೆಯೂ ನಾಟಕದಲ್ಲಿ ಅನಾವರಣಗೊಂಡಿದೆ. ಈ ಭಾಗವನ್ನು ಕೇರಳದ ಜನಪದೀಯ ಶೈಲಿಯಲ್ಲಿ ಪ್ರಸ್ತುತಪಡಿಸುತ್ತ ಮೌಢ್ಯವೆ ಹೇಗೆ ನಿಜದ ನಂಬಿಕೆಯಾಗುತ್ತದೆ ಎಂಬ ವಿದ್ಯಮಾನವನ್ನು ನಾಟಕ ನಿರೂಪಿಸುತ್ತದೆ.

ಹೆಚ್ಚಿನ ಸಂದರ್ಭಗಳಲ್ಲಿ ಸೈನಿಕರು ತಮ್ಮ ಪ್ರಯಾಣಕ್ಕೆ ರೈಲನ್ನೆ ಅವಲಂಬಿಸಿರುತ್ತಾರೆ. ಯುದ್ಧಕ್ಕೆ ಹೊರಟು ನಿಂತ ಸೈನಿಕನಿಗೆ ಆತನ ಪತ್ನಿ ಹಸುಗೂಸಿನೊಂದಿಗೆ 'ಯುದ್ಧ ಯಾವಾಗ ಮುಗಿಯುತ್ತದೆ' ಎಂದು ಕೇಳಿದ ಪ್ರಶ್ನೆಗೆ ಉತ್ತರಿಸದೆ ಆತ ಪಯಣಿಸುತ್ತಾನೆ. ಮುಂದೆ ಅದೇ ರೈಲಿನಲ್ಲಿ ಸೈನಿಕ ಧರಿಸಿದ್ದ ಶೂ ಮಾತ್ರ ಮರಳುತ್ತದೆ. 'ಎಲ್ಲೋ ದೂರದಲ್ಲಿ ಯುದ್ಧ ನಡೆಯುತ್ತಿದೆ ಎಂದು ವಿರಮಿಸಬೇಡಿ, ಅದು ನಿಮ್ಮ ಮನೆ ಬಾಗಿಲಿಗೂ ಬಂದೀತು' ಎಂಬ ಎಚ್ಚರವನ್ನು ನಾಟಕ ಧ್ವನಿಸುತ್ತದೆ.

ಹಿಡಿದಿಡುವ ಚಿತ್ರಕ ಶಕ್ತಿಯ ರೂಪಕ

ಚಲಿಸುವ ರೈಲು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಾಣುತ್ತದೆ. ದೋಣಿಯಲ್ಲಿ ಕುಳಿತು ಬಲೆ ಬೀಸಿ ಮೀನು ಹಿಡಿಯುತ್ತಿದ್ದ ಮೀನುಗಾರನಿಗೆ ನದಿಗೆ ಅಡ್ಡಲಾಗಿ ಕಟ್ಟಿದ ಸೇತುವೆ ಮೇಲೆ ಚಲಿಸುವ ರೈಲಿನ ಚಲನೆ ವಿಭಿನ್ನವಾಗಿ ಕಾಣುವ ದೃಶ್ಯ ನಾಟಕದ ಹೈಲೈಟ್‌ಗಳಲ್ಲಿ ಒಂದು. ಇಂತಹ ಚಿತ್ರಕ ಶಕ್ತಿಯ ರೂಪಕಗಳೆ ನಾಟಕ ಪರಿಣಾಮಕಾರಿಯಾಗಲು ಕಾರಣವಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ಕರಿಯ ಎಂಬ ಕಾರಣಕ್ಕೆ ಗಾಂಧಿಯನ್ನು ರೈಲಿನಿಂದ ಹೊರಕ್ಕೆ ದಬ್ಬಿದ ಘಟನೆ, ದೇಶ ವಿಭಜನೆ ಸಂದರ್ಭದಲ್ಲಿ ಎರಡೂ ಕಡೆಯವರೂ ಪಟ್ಟ ಪರಿಪಾಟಲು, ಯುದ್ಧದಲ್ಲಿ ಮಡಿದ ಅಸಂಖ್ಯಾತ ಯೋಧರ ಶವಗಳಿಗೆ ಸಾಕ್ಷಿಯಾಗುವ ನಾಗಾಲ್ಯಾಂಡ್‌ನ ರೈಲು ನಿಲ್ದಾಣ, ರೈಲಿನ ಕಿಟಕಿ ಬಾಗಿಲುಗಳನ್ನು ಮುಚ್ಚಿ ಹೋರಾಟಗಾರರು ಸಾವು ಕಾಣುವಂತೆ ಮಾಡಿದ್ದು, ಗೋದ್ರಾ ಸೇರಿದಂತೆ ವಿವಿಧ ರೈಲು ದುರಂತದ ಘಟನೆಗಳು, ಮಣಿಪುರದ ಮಹಿಳೆಯರ ಮೇಲಿನ ದೌರ್ಜನ್ಯ... ಇವೆಲ್ಲವನ್ನೂ ರಂಗದ ಮೇಲೆ ಅತ್ಯಂತ ಸಶಕ್ತವಾಗಿ ಚಿತ್ರಿಸಲಾಗಿದೆ.

ದೇಶ ವಿಭಜನೆ ಕುರಿತಂತೆ 'ವಿಭಜನೆ ಮುಗಿದ ಅಧ್ಯಾಯವಲ್ಲ. ಈಗಲೂ ವಿಭಜಿಸುವ ಕೆಲಸ ನಡೆಯುತ್ತಲೆ ಇದೆ' ಎಂದು ನಾಟಕದಲ್ಲಿ ಬರುವ ಮಾರ್ಮಿಕ ಮಾತು ಸಮಕಾಲೀನ ರಾಜಕಾರಣಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಬಾಲಿವುಡ್‌ನ ಜನಪ್ರಿಯ ಸಿನಿಮಾ 'ದಿಲ್ ವಾಲೆ ದುಲ್ಹನಿಯಾ ಲೇ ಜಾಯೆಂಗೆ' ನ ಕ್ಲೈಮ್ಯಾಕ್ಸ್ ನಲ್ಲಿ ಚಲಿಸುವ ರೈಲಿನಲ್ಲಿ ನಿಂತ ಶಾರುಖ್ ಖಾನ್ ಸ್ಲೋಮೋಶನ್‌ಲ್ಲಿ ಫ್ಲಾಟ್‌ಫಾರಂ ಮೇಲೆ ಓಡಿ ಬರುವ ಪ್ರೇಯಸಿ ಕಾಜೋಲಳ ಕೈ ಹಿಡಿದು ರೈಲಿನೊಳಗೆ ಕರೆದುಕೊಳ್ಳುವ ದೃಶ್ಯವನ್ನೂ ನಾಟಕ ಒಳಗೊಂಡಿದೆ.

ಹೀಗೆ ರೈಲುಗಳೆ ನಾಯಕರಾಗಿರುವ 'ಕುಹೂ' ನಾಟಕದಲ್ಲಿ ನಮ್ಮ ಇತಿಹಾಸ, ಸಾಮಾಜಿಕ, ರಾಜಕೀಯ ಕಥನಗಳನ್ನು ರೈಲಿನ ಆವರಣದೊಳಗೆ ರಂಗ ಪ್ರತಿಮೆಗಳ ಮೂಲಕ ಪ್ರಸ್ತುತಪಡಿಸಿ ವಿಶಿಷ್ಟ ರಂಗಾನುಭವ ನೀಡುವಲ್ಲಿ ಪ್ರಯೋಗ ಯಶಸ್ವಿಯಾಗುತ್ತದೆ.

ನಾಟಕದ ಪಠ್ಯ ಬಿಡಿ ಬಿಡಿ ಪ್ರತ್ಯೇಕ ಘಟನೆಗಳನ್ನು ಒಳಗೊಂಡಿದ್ದರೂ ಅವುಗಳ ಹೆಣಿಗೆ ಬಿಗಿಯಾಗಿರುವುದರಿಂದ ಎಲ್ಲೂ ಸೂತ್ರ ತಪ್ಪದೆ ಪ್ರೇಕ್ಷಕರನ್ನು ಹಿಡಿದಿಡುತ್ತದೆ. ನಾಟಕ ಮುಗಿದ ನಂತರವೂ ಟ್ರಂಕ್‌ಗಳ ಮೂಲಕ ಪಾತ್ರಧಾರಿಗಳು ಹೊರಡಿಸುವ ರೈಲಿನ ಚಲನೆಯ ಶಬ್ಧ ಚಿತ್ರರೂಪದಲ್ಲಿ ಪ್ರೇಕ್ಷಕರಲ್ಲಿ ಮತ್ತೆ ಮತ್ತೆ ಅನುರಣಿಸುತ್ತದೆ.

'ಯುವರ್ ಅಟೆನ್ಷನ್ ಪ್ಲೀಸ್' (ದಯವಿಟ್ಟು ಗಮನ ಕೊಡಿ) ಇದು ರೈಲು ನಿಲ್ದಾಣಗಳಲ್ಲಿ ಮತ್ತೆ ಮತ್ತೆ ಪುನರಾವರ್ತನೆಯಾಗುವ ಒಂದು ಉದ್ಘೋಷ. ನಾಟಕದಲ್ಲಿ ಈ ಉದ್ಘೋಷ 'ನಮ್ಮ ಸುತ್ತಮುತ್ತ ಏನೇನು ನಡೆಯುತ್ತದೆ ಎಂಬುದನ್ನು ಗಮನಿಸಿ ನೋಡಿಯೂ ನೋಡದಂತಿರಬೇಡಿ' ಎಂಬ ಎಚ್ಚರದ ಧ್ವನಿಯನ್ನು ದಾಟಿಸುತ್ತದೆ ❖

...ಹಚ್ಚ ಹಸುರಿನ ಕಥೆ

'ಕೇಶರ್ ಪರ್ವತ'ದಲ್ಲಿ ಬೆಳೆಸಿದ ಗಿಡಗಳು

8ನೇ ಪುಟದಿಂದ...

ಜೊತೆಗೆ ವಿವಿಧ ಬಗೆಯ ಸುವಾಸನಾಭರಿತ ಹೂಗಳ ಬಳ್ಳಿಗಳು, ಗಿಡಗಳು ಮುಂತಾದ ಐದುನೂರಕ್ಕೂ ಹೆಚ್ಚು ವಿವಿಧ ತಳಿಯ ಮರಗಿಡಗಳನ್ನು ಇಲ್ಲಿ ಕಾಣಬಹುದು. ಇದರ ಜೊತೆಗೆ ವೈವಿಧ್ಯಮಯ ಹಣ್ಣು ಮತ್ತು ಹೂವಿನ ಗಿಡಗಳು ಬೀಸುವ ತಂಗಾಳಿಗೆ ತೊನೆಯುತ್ತಾ ಭೇಟಿ ನೀಡುವ ಪರಿಸರ ಪ್ರಿಯರನ್ನು ಸ್ವಾಗತಿಸುತ್ತವೆ. ಬೆಂಗಾಡಾಗಿದ್ದ ಈ ಸ್ಥಳವೀಗ ತಂಗಾಳಿ ಬೀಸುವ, ಸುಡುಬೇಸಿಗೆಯಲ್ಲಿ ನೆರಳು ನೀಡುವ ಸ್ಥಳವಾಗಿ ಮಾರ್ಪಟ್ಟು, ಪಟ್ಟಣದ ಬವಣೆಯಿಂದ ಕೆಲಕಾಲ ಇಲ್ಲಿ ಕಾಲ ಕಳೆಯಲು ವಿಶ್ರಾಂತಿ ಸ್ಥಳವಾಗಿ ಮಾರ್ಪಟ್ಟಿದೆ.

ಈ ದಟ್ಟಾರಣ್ಯದಲ್ಲಿ ಸುಮಾರು ಮೂವತ್ತು ಜಾತಿಯ ಹಕ್ಕಿಗಳು, ಇಪ್ಪತ್ತೈದು ವಿವಿಧ ರೀತಿಯ ಚಿಟ್ಟೆಗಳು, ನರಿಗಳು, ಮೊಲಗಳು, ಕಾಡು ಹಂದಿಗಳು ಮತ್ತು ಹೈನಾಗಳು ಇವೆ. ಇಡೀ ಅರಣ್ಯವನ್ನು ಸ್ವಚ್ಛವಾಗಿ ಇಡಲಾಗಿದ್ದು, 'ಪರಿಸರ ರಕ್ಷಿಸಿ, ಭೂಮಿ ಉಳಿಸಿ' ಘೋಷಣೆಯ ಅಡಿಯಲ್ಲಿ ಪ್ರತಿವರ್ಷ ಹತ್ತು ಸಾವಿರ ಗಿಡಗಳನ್ನು ನೆಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಇಲ್ಲಿಗೆ ಭೇಟಿ ನೀಡುವ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮರಗಿಡಗಳನ್ನು ಪರಿಚಯಿಸಿ, ಪ್ರತಿಯೊಬ್ಬರೂ ತಮ್ಮ ಜೀವಿತಾವಧಿಯಲ್ಲಿ ಒಂದಾದರೂ ಗಿಡ ನೆಟ್ಟು ಬೆಳೆಸಲು ಪ್ರೋತ್ಸಾಹಿಸಲಾಗುತ್ತದೆ. ಈ ಸುಂದರ ಶಾಂತ ವಾತಾವರಣದಲ್ಲಿ ಧ್ಯಾನ ಮಂದಿರವಿದೆ. ಅಲ್ಲಿ ಧ್ಯಾನ ಮಾಡಲು ಅನುಕೂಲ ಕಲ್ಪಿಸಲಾಗಿದೆ. ಮಕ್ಕಳಿಗಾಗಿ ಕ್ರಿಕೆಟ್ ಮೈದಾನವಿದೆ. ಈ ಮಹತ್ಕಾರ್ಯದಲ್ಲಿ ಭಾಗವಹಿಸಲಿಚ್ಛಿಸುವವರಿಗೆ ಒಂದು ಗಿಡ ನೆಟ್ಟು ಪೋಷಿಸಲು ಅವಕಾಶವಿದೆ. ಅದಕ್ಕಾಗಿ ಅಲ್ಪ ಶುಲ್ಕವನ್ನು ಪಡೆದು ಅಂತಹ ದಾನಿಗಳ ಹೆಸರಿನಲ್ಲಿ ಒಂದು ಮರವನ್ನು ಬೆಳೆಸಲಾಗುವುದು. ಇದಲ್ಲದೆ ದಾನಿಗಳು ಪ್ರತಿಷ್ಠಾನಕ್ಕೆ ಧನಸಹಾಯ ಮಾಡಬಹುದು.

'ಕೇಶರ್ ಪರ್ವತ'ದಲ್ಲಿ ಬಿಡುವ ಹಣ್ಣುಗಳನ್ನು ಉಚಿತವಾಗಿ ತೃಪ್ತಿ ಆಗುವಷ್ಟು ತಿನ್ನಬಹುದು. ಅನುಮತಿ ಪಡೆದು ಮನೆಗೂ ಒಯ್ಯಬಹುದು. ಪ್ರಕೃತಿ ನೀಡಿರುವುದನ್ನು ಜನರು ಉಪಯೋಗಿಸಿದರೆ ತಪ್ಪೇನು? ಎಂದು ಗಾರ್ಗ್ ಪ್ರಶ್ನಿಸುತ್ತಾರೆ. ಆದಾಗ್ಯೂ ಅಲ್ಲಿ ಉಳಿಯುವ ಹಣ್ಣುಗಳು ಬಿದ್ದು ಮಣ್ಣಿನೊಡನೆ ಬೆರೆತು ಗೊಬ್ಬರವಾಗುತ್ತವೆ ಎಂಬ ಸಾರ್ಥಕ ಭಾವ ಅವರದ್ದು. ಇಲ್ಲಿಗೆ ಅಬ್ದುಲ್ ಕಲಾಂ ಸೇರಿ ಅನೇಕ ಗಣ್ಯಾತಿಗಣ್ಯರು ಭೇಟಿ ನೀಡಿ ಶ್ಲಾಘಿಸಿದ್ದಾರೆ. ಸಸ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಇದೊಂದು ಸಂಶೋಧನಾ ಕೇಂದ್ರವಾಗಿ ರೂಪುಗೊಂಡಿದೆ.

ಪರಿಸರ ಪಾಠ ಹೇಳುವ ಸೈಕಲ್ ಕಲಾಕೃತಿ

ಇಂತಹ ಮಹಾನ್ ಸಾಧಕನಿಗೆ ಶಿವಮೊಗ್ಗದ ಶ್ರೀ ದೊಡ್ಡಮ್ಮ ಚಾರಿಟಬಲ್ ಟ್ರಸ್ಟ್ ಇತ್ತೀಚೆಗೆ 2025 ನೇ ಸಾಲಿನ 'ಶ್ರೀ ದೊಡ್ಡಮ್ಮ ದೇವಿ ಅನುಗ್ರಹ ರಾಷ್ಟ್ರೀಯ ಪ್ರಶಸ್ತಿ' ಯನ್ನು ಒಂದು ಲಕ್ಷ ರೂಪಾಯಿ ನಗದು ಸಹಿತ ನೀಡಿ ಗೌರವಿಸಿದೆ. ❖

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ನೋವ್‌ಗರ

ನೋವ್‌ಗರ (ನಾ). ನೋವಿನ ವಿಷ

ಇಂದ್ರಜಿತು ಮರಣ ಹೊಂದಲು ಪತ್ನಿ ತಾರಾಕ್ಷಿ ಅಗ್ನಿ ಪ್ರವೇಶ ಮಾಡಲು ನಿಶ್ಚಯಿಸುವಳು. ಅದನ್ನು ಕೇಳಿ ಅಲ್ಲಿಗೆ ಬಂದ ರಾವಣನನ್ನು ಕುರಿತು ಅನಲೆ ಹೇಳುವ ಮಾತಿನ ಸಂದರ್ಭದಲ್ಲಿ ಕುವೆಂಪು 'ನೋವ್‌ಗರ' ಪದವನ್ನು ಹೀಗೆ ಪ್ರಯೋಗಿಸಿದ್ದಾರೆ.

'ಸಖೀ,
ಮಾವನದೊ! ಸುತನ ಸಾವಿನ ಸಿಡಿಲ್ ಬಡಿದುಸಿರ್
ಕಟ್ಟಿದೋಲುಸಿಕನಿರ್ಪನ್, ನಿನ್ನ ನೋವ್‌ಗರಂ
ತನಗೆರಗಿದಂತೆ!'

ಗೆಲ್ವೆಣ್ಣು

ಗೆಲ್ವೆಣ್ಣು (ನಾ). ಜಯವನಿತೆ

ಯುದ್ಧರಂಗದಲ್ಲಿ ಸ್ನೇಹಿತರಾದ ವಹ್ನಿ ಮತ್ತು ರಂಹರು ಪರಸ್ಪರ ಮಾತನಾಡುತ್ತಿರುತ್ತಾರೆ. 'ಇಂದು ಏಕೆ ನಮ್ಮವರ ಕೈ ಸೋಲುತ್ತಿದೆ?' ಎಂಬ ವಹ್ನಿಯ ಪ್ರಶ್ನೆಗೆ ರಂಹ ನೀಡುವ ಉತ್ತರದಲ್ಲಿ ಕುವೆಂಪು 'ಗೆಲ್ವೆಣ್ಣು' ಪದರೂಪಿಸಿ ಹೀಗೆ ಪ್ರಯೋಗಿಸಿದ್ದಾರೆ:

'ಸೋಲೊಮ್ಮೆ ಗೆಲುವೊಮ್ಮೆ,
ಗೆಲ್ವೆಣ್ಣಿಗದೆ ಹೆಮ್ಮೆ!'

ಗೂಬೆಗತ್ತಲು

ಗೂಬೆಗತ್ತಲು (ನಾ). ಗೂಬೆಗಳಿಗೆ ಹಿತವಾಗಿರುವ ಕತ್ತಲು; ಕಗ್ಗತ್ತಲು

ರಾವಣನು ನಡುರಾತ್ರಿ ಮಹಾದುರ್ಗೆಯ ಧ್ಯಾನದಲ್ಲಿದ್ದಾಗ ಮನೋಮಯ ಸಮಾಧಿಗೆ ಒಳಗಾಗುವನು. ಆ ಕನಸಿನಲ್ಲಿ ಧಾನ್ಯಮಾಲಿಯನ್ನು ಕಂಡು ಪ್ರಶ್ನಿಸುವ ನುಡಿಯಲ್ಲಿ ಕುವೆಂಪು ಅವರು 'ಗೂಬೆಗತ್ತಲು' ಪದರಚಿಸಿ ಹೀಗೆ ಪ್ರಯೋಗಿಸಿದ್ದಾರೆ.

'ಅದಾರಲ್ಲಿ?
ಧಾನ್ಯಮಾಲಿನಿ! ಅದೇಕಿಲ್ಲಿ ನೀನೀ ಪಾಳು
ದೇಗುಲದಿ? ಏನ್‌ಗೆಯ್ವೆಯೀ ಗೂಬೆಗತ್ತಲೊಳ್
ನೀನೋರ್ವಳೆಯೆ, ಪ್ರಿಯೆ?'

(ಈ ಅಂಕಣ ಇಲ್ಲಿಗೆ ಮುಗಿಯಿತು.)

ಮೊದಲ ಓದು

ಗಾಂಧೀ ಜೋಡಿನ ಮಳಿಗೆ
ಲೇ: ಪ್ರಕಾಶ್ ಪುಟ್ಟಪ್ಪ
ಪ್ರ: ಅಮೂಲ್ಯ ಪುಸ್ತಕ
ಸಂ: 94486 76770

ಹಲವು ಸಂಗತಿಗಳ ಸಮಪಾಕದ ಕಥೆಗಳು

'ಮನುಷ್ಯ ಏಕಾಂತವಾದಗೆಲ್ಲ ಒಂದೋ ಅಸಾಧಾರಣವಾಗಿ ಉದ್ಧಾರವಾಗುತ್ತಾನೆ ಇಲ್ಲ ಸಂಪೂರ್ಣವಾಗಿ ಹಾಳಾಗುತ್ತಾನಂತೆ' ಇಂಥದ್ದೆ ಚುರುಕು ಸಾಲುಗಳ ಮೂಲಕ ಹಲವು ಹೊಳಹುಗಳನ್ನು ಬಹಳ ಅನಾಯಾಸವಾಗಿ ದಕ್ಕಿಸಿಕೊಡುತ್ತದೆ 'ಗಾಂಧೀ ಜೋಡಿನ ಮಳಿಗೆ' ಕಥಾ ಸಂಕಲನ.

ಇಲ್ಲಿರುವ ಕಥೆಗಳು ವರ್ತಮಾನ ಹಾಗೂ ಭೂತಕಾಲದ ಹಲವು ಸಂಗತಿಗಳ ಸಮಪಾಕದಂತೆ ಕಾಣುತ್ತವೆ. ಇಲ್ಲಿರುವ ಕೆಲ ಕಥೆಗಳು ತನ್ನೊಳಗನ್ನು ಅಷ್ಟು ಸುಲಭಕ್ಕೆ ಬಿಟ್ಟುಕೊಡದೆ ಅಂತರ್ಮುಖಿಯಾಗಿದ್ದುಕೊಂಡೇ ಓದುಗರನ್ನು ಸೆಳೆಯುತ್ತವೆ.

ಹಾಗೆಯೇ ಕಾಗದದ ದೋಣಿಗಳು ಎನ್ನುವ ಕಥೆಯಲ್ಲಿ ನಿರ್ದಯಿ ಬದುಕು ತಂದೊಡ್ಡುವ ಸಂಕಟವನ್ನು ಮನಸ್ಸಿಗೆ ನಾಟುವಂತೆ ಚಿತ್ರಿಸಲಾಗಿದೆ. ಹಳ್ಳಿ ಹಾಗೂ ಪಟ್ಟಣ ಬದುಕಿನ ನಡುವಿನ ದ್ವಂದ್ವಗಳ ನಡುವೆ, ತಾಯಿಯಿಂದ ದೂರ ಉಳಿದು ಸುಖದ ಲೋಲುಪತೆಯಲ್ಲಿಯೇ ಕಳೆದು ಹೋದ ಯುವಕನೊಬ್ಬನ ಕಥೆಯಾದರೂ ಅದರ ಕೊನೆಯ ತಿರುವು ಓದುಗರನ್ನು ಒಂದು ಕ್ಷಣ ಬೆಚ್ಚಿ ಬೀಳುವಂತೆ ಮಾಡುತ್ತದೆ.

ಈಸೂರು ದಂಗೆಯಂಥ ಹೋರಾಟದಿಂದ ಹುಟ್ಟಿರುವ ಕಥೆಯೊಂದು ಬಹಳ ಸೊಗಸಾಗಿದೆ. ಕಥೆಯನ್ನು ವಿಭಿನ್ನವಾಗಿ ನಿರ್ವಹಿಸಿರುವುದು ಅಚ್ಚರಿ ತರುತ್ತದೆ. ಅಲ್ಲದೇ ಕಥೆಗಾರ ಪ್ರಕಾಶ್ ಪುಟ್ಟಪ್ಪ ಅವರು ಈ ಕಥೆಯ ಮೂಲಕ ಓದುಗರಲ್ಲಿ ಭರವಸೆಯನ್ನು ಹುಟ್ಟಿಸುತ್ತಾರೆ. ಈ ಕಥಾ ಸಂಕಲದನಲ್ಲಿರುವ ಹದಿನಾಲ್ಕು ಕಥೆಗಳು ಸರಾಗವಾಗಿ ಓದಿಸಿಕೊಂಡು ಹೋಗುತ್ತವೆ.

ಪುಟ: 128 ₹175

ಯಕ್ಷಚಂದ್ರ
ನಿರೂಪಣೆ: ರಾಘವೇಂದ್ರ ಭಟ್
ಪ್ರ: ಕೊಂಡದಕುಳಿ ಬಳಗ

ಕೊಂಡದಕುಳಿಯ ಯಕ್ಷಾನುಭವ ಕಥನ

ಹಿರಿಯ ಯಕ್ಷಗಾನ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ ಅವರ ಯಕ್ಷಾನುಭವ ಕಥನ 'ಯಕ್ಷಚಂದ್ರ'. ಅವರ ಯಕ್ಷಗಾನ ಕಲಾ ಜೀವನದ ಜೊತೆಗೆ, ಇದರಲ್ಲಿ ವಿವರಣೆಯಿರುವ ಯಕ್ಷಗಾನ ಕಲಾವಿದರ ಜೊತೆಗಿನ ಸಂಬಂಧಗಳು ಈಗ ಸಾಮಾಜಿಕ ಮಾಧ್ಯಮಗಳಲ್ಲಿ ಬಹುಚರ್ಚಿತ ವಿಷಯವಾಗಿಬಿಟ್ಟಿದೆ. ಕಥನ ನಿರೂಪಣೆಯ ಆರಂಭದಲ್ಲಿ ಅವರೇ ಹೇಳಿರುವಂತೆ, 'ಹೀಗಾಗಲಿ ಎಂದು ಬಯಸಿ ನಾನು ಯಾವುದೇ ಕೆಲಸ ಮಾಡುವುದಿಲ್ಲ. ಬಯಕೆಯೇ ಇಲ್ಲವೆಂದಾದಾಗ ನಿರಾಶೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಪಾತ್ರವಾಗಲೀ, ಬದುಕಾಗಲೀ ಯಾವುದನ್ನೂ ಬಯಸಿ ಪಡೆದದ್ದಲ್ಲ, ಎಲ್ಲವೂ ಆಕಸ್ಮಿಕ' ಎಂಬ ಮಾತುಗಳು ಈ ಗ್ರಂಥದ ಒಳನೋಟವನ್ನು ನೀಡುತ್ತದೆ.

ಇದರ ಹೊರತಾಗಿ, ವ್ಯಕ್ತಿಯೊಬ್ಬ ಯಕ್ಷಗಾನ ಕಲಾವಿದನಾಗಬೇಕೆಂದರೆ ಆ ಕಾಲದಲ್ಲಿದ್ದ ತುಡಿತ, ಕಷ್ಟ, ಶ್ರಮ, ನಿಷ್ಠೆ, ಕಲಿಕೆಯ ಆಸಕ್ತಿ ಹೇಗಿತ್ತು ಎಂಬುದನ್ನು ವಿವರಿಸುತ್ತದೆ ಈ ಕೃತಿ. ಇಷ್ಟಲ್ಲದೆ, ಯಕ್ಷಗಾನವೆಂಬ ಏಕಮಾತ್ರ ವೃತ್ತಿಯಿಂದ ಬದುಕಿಗೆ ಬೇಕಾದುದೆಲ್ಲವನ್ನೂ ಸಂಪಾದಿಸುವಷ್ಟರ ಮಟ್ಟಿಗೆ ಈ ಕಲೆಗೆ ಋಣಿಯಾಗಿರುವುದಾಗಿಯೂ ಕೊಂಡದಕುಳಿ ಹೇಳಿಕೊಂಡಿದ್ದಾರೆ. ಒಡನಾಡಿ ಕಲಾವಿದರು, ಅವರಿಂದ ಕಲಿತ ಪಾಠಗಳು, ಆ ಕಾಲದಲ್ಲಿ ಮೇಳ ತಿರುಗಾಟದ ಕಷ್ಟ ನಷ್ಟಗಳು ಎಲ್ಲವನ್ನೂ ವಿವರಿಸುವ ಅವರು, ನನಗೆ ಅನ್ನಿಸಿದ್ದನ್ನು ಪ್ರಾಮಾಣಿಕವಾಗಿ, ಧೈರ್ಯದಿಂದ ಹೇಳಿದ್ದೇನೆ. ತಪ್ಪಿದ್ದರೆ ಒಪ್ಪಿಕೊಳ್ಳುವುದಕ್ಕೆ ಸದಾ ಸಿದ್ಧನಿದ್ದೇನೆ. ಯಾವುದೂ ವಿಮರ್ಶೆಯಲ್ಲ, ನನ್ನ ಅನಿಸಿಕೆಯಷ್ಟೇ ಎಂಬ ಮಾತನ್ನೂ ಸೇರಿಸಿದ್ದಾರೆ.

ಪತ್ನಿ ವಿಯೋಗದ ನಂತರದ ದಿನಗಳಲ್ಲಿ ಮೇಳಕ್ಕೆ ಹೋಗುವುದು ಅನಿವಾರ್ಯವಾದಾಗ, ಪುಟ್ಟ ಮಗಳನ್ನು ಬೇರೊಬ್ಬರ ಮನೆಯಲ್ಲಿ ಬಿಟ್ಟು ಶಾಲೆಗೆ ಹೋಗುವಂತೆ ಮಾಡಿ, ಅವಳು ಶಾಲೆಯಿಂದ ಬರುವವರೆಗೂ ಊಟ-ತಿಂಡಿಯಿಲ್ಲದೆ ಕಳೆದ ದಿನಗಳು, ರಾತ್ರಿ ನಿದ್ದೆಗೆಡುವ ಕಲಾವಿದನೊಬ್ಬನ ಬದುಕಿನ ಮೇಲೆ ಬೆಳಕು ಚೆಲ್ಲುತ್ತದೆ. ವೇಷ ಭೂಷಣಗಳು, ರಂಗನಿರ್ದೇಶನದ ಅವಶ್ಯಕತೆ ಮತ್ತು ಅದಕ್ಕಿರುವ ತೊಡಕುಗಳ ಕುರಿತಾಗಿಯೂ ಈ ಕೃತಿಯಲ್ಲಿ ಒಳನೋಟವಿದೆ. ನಿರೂಪಕ ರಾಘವೇಂದ್ರ ಭಟ್ ಅವರು 'ಎಲ್ಲವನ್ನೂ ಹೇಳಲಾಗಿಲ್ಲ, ಕೆಲವು ರಂಗ ಸತ್ಯಗಳನ್ನು ಹೇಳುವಂತೆಯೇ ಇಲ್ಲ, ಸತ್ಯವು ಅಪ್ರಿಯವಾಗಬಹುದು' ಎಂದು ಸೂಚ್ಯವಾಗಿ ತಿಳಿಸಿದ್ದಾರೆ.

ಪುಟ: 192 ₹150

ಹ್ಯಾಷ್‌ಟ್ಯಾಗ್
ಲೇ: ಗುರುರಾಜ ಕುಲಕರ್ಣಿ
ಪ್ರ: ಛಂದ ಪ್ರಕಾಶನ
ಸಂ: 9844422782

ಮಾಹಿತಿ ತಂತುಗಳಲ್ಲಿ ಹೆಣೆದ ಕಥೆ

ಛಂದ ಪುಸ್ತಕ ಬಹುಮಾನ ಪಡೆದ ಕೃತಿ ಇದು. ಮಾಹಿತಿ ತಂತ್ರಜ್ಞಾನದ ಕೋಡ್ ಮತ್ತು ಕೋಡಗನೊಂದಿಗೆ ಪನ್ ಮಾಡುತ್ತಲೇ ಆ ಲೋಕದ ಕೋಡಗನ ಕುಣಿತವನ್ನೇ ಈ ಎಲ್ಲ ಕಥೆಗಳೂ ಬಿಚ್ಚಿಡುತ್ತವೆ.

ಸಮಕಾಲೀನ ಬದುಕನ್ನು ಹಿಡಿದಿಡುತ್ತಲೇ ಜೆನ್‌ಜೀಯೊಂದಿಗೆ ಹೆಣಗುತ್ತಿರುವ ನೂತನ ಪೋಷಕರ ತೊಳಲಾಟಗಳನ್ನೂ, ಜೆನ್ ಎಕ್ಸ್‌ಗಳ ಗೊಂದಲಗಳನ್ನೂ, ಜೆನ್ ಅಲ್ಫಾ, ಬೀಟಾಗಳೊಂದಿಗೆ ಬರುತ್ತಿರುವ ಜನರೇಷನ್ ವ್ಯತ್ಯಾಸಗಳೆಲ್ಲವನ್ನೂ ಇಲ್ಲಿಯ ಕಥೆಗಳಲ್ಲಿ ಹೆಣೆಯಲಾಗಿದೆ. ಓದುಗರ ಮನೆಯಲ್ಲಿ, ಅವರ ಸುತ್ತಲೂ ಇರುವ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಲೋಕದಲ್ಲಿ ಹೆಣಗುತ್ತಿರುವ ಯುವಜನಾಂಗಕ್ಕೆ ಸೂಕ್ತ ಪುಸ್ತಕ. ಅವರ ಒತ್ತಡ, ಅವರೊಳಗಿನ ಆತಂಕ, ಬಾಹ್ಯಜಗತ್ತಿಗೆ ಕಾಣುವ ಗಳಿಕೆ, ಆಂತರ್ಯದಲ್ಲಿ ಅನುಭವಿಸುವ ಖಾಲಿತನ, ಜೋರು ಸಂಗೀತಕ್ಕೆ ಕುಣಿಯುವ ಉತ್ಸಾಹವಿದ್ದರೂ, ಒಳಗಿನ ನೀರವ ಮೌನ ಹೊರಹಾಕುವ ಬಿಡುಗಡೆ ಈ ಅಕ್ಷರಲೋಕದಲ್ಲಿ ಕಾಣಸಿಗುತ್ತದೆ.

ಒಂದು ತಲೆಮಾರು, ಹಳೆಯ ಮತ್ತು ಹೊಸ ತಲೆಮಾರಿನೊಂದಿಗೆ ತನ್ನ ಔದ್ಯೋಗಿಕ ಪ್ರಪಂಚದ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಅವುಗಳನ್ನು ಹೊರಹಾಕುವ ಮಾರ್ಗವಾಗಿ ಕಥೆಗಳನ್ನು ಹೆಣೆಯುತ್ತ ಲೇಖಕರು ತಮ್ಮ ಲೋಕದವರಿಗೂ, ಹೊರಗಿನವರಿಗೂ ಒಳಗಿನ ತಲ್ಲಣಗಳನ್ನೂ ಹೊಸಹೊಳಹುಗಳನ್ನೂ ದಾಟಿಸುತ್ತಾರೆ. ಕಬ್ಬಿಗ ಎಐ, ನರೇಗಲ್ ಬಳಿಯ ಕೋಡಿಕೊಪ್ಪದ ಹುಚ್ಚೀರಜ್ಜರ ಮಾತು ಯಾವುದು ಹೌದು, ಅದು ಅಲ್ಲ; ಯಾವುದು ಅಲ್ಲ, ಅದು ಹೌದು ಇಡೀ ಬದುಕಿಗೆ ಅನ್ವಯವಾಗುವಂಥದ್ದು. ಅದು ನಮ್ಮ ಆಧುನಿಕ ಬದುಕಿನಲ್ಲಿ, ಒಳಧ್ವನಿ ಎಂಬುದು ಹೊರ ಗದ್ದಲದೊಳಗೆ ಕಳೆದುಹೋದ ಬಗೆಯನ್ನೇ ಎತ್ತಿ ಹಿಡಿಯುತ್ತದೆ. ಪುಸ್ತಕ ಓದಿ ಮುಗಿಸಿದ ನಂತರ, ಬದುಕಿಗೆ ಕೊನೆಗೂ ಬೇಕಿರುವುದು ಒಂದಷ್ಟು ಪ್ರೀತಿ ಮತ್ತು ನೆಮ್ಮದಿ, ಸಾಕಷ್ಟು ಸಾಕು ಎಂದೆನಿಸಿ ನಿಟ್ಟುಸಿರು ಬಿಟ್ಟಾಗಲೇ ಬದುಕಿನಲ್ಲಿ ಮತ್ತೇನೂ ಕೊರತೆ ಇದೆ ಎಂದೆನಿಸುತ್ತದೆ.

ಪುಟ: 116 ₹135

ಶಿಸ್ತು ಸಂಯಮದ ಪಾಠ ಹೇಳುವ ಮಿಜೋರಾಂ

ಮಿಜೋರಾಂ ಎಂಬ ಪುಟ್ಟ ರಾಜ್ಯದ ಜನರ ಶಿಸ್ತು, ಕಾನೂನು ಪಾಲನೆ ಹೊರಗಿನವರಿಗೆ ಬೆರಗು ಮೂಡಿಸಿದರೆ, ಅವರಿಗೆ ಅದು ಸಹಜ ಜೀವನ. ಆರ್ಥಿಕವಾಗಿ ಬಹಳ ಶ್ರೀಮಂತವಲ್ಲದ ಆದರೆ, ಶೈಕ್ಷಣಿಕವಾಗಿ ಬಹಳ ಮುಂದಿರುವ, ಇದ್ದಿದ್ದರಲ್ಲೇ ತೃಪ್ತಿ ಪಡುವ ಮಿಜೋ ಜನರ ಜೀವನಶೈಲಿಯನ್ನು ಲೇಖಕರು ಇಲ್ಲಿ ಕಟ್ಟಿಕೊಟ್ಟಿದ್ದಾರೆ


ವಾರದ ಆರು ದಿನ ಗಿಜಿಗುಡುವ ಐಜ್ವಾಲ್‌ನ ಬಾರಾ ಬಜಾರ್ ರಸ್ತೆಯು ಭಾನುವಾರ ಮಾತ್ರ ಕರ್ಫ್ಯೂ ವಿಧಿಸಿದಂತಿರುತ್ತದೆ...

• ಬಾಲಕೃಷ್ಣ ಪಿ.ಎಚ್.

ಮಿಜೋ ಜನರು ಬೆಟ್ಟದ ಮೇಲೆ ಬದುಕಲು ಇಷ್ಟಪಡುವವರು. ಅದಕ್ಕೆ ಮಿಜೋರಾಂನ ರಾಜಧಾನಿ ಐಜ್ವಾಲ್ ಕೂಡ ಬೆಟ್ಟದ ಮೇಲೆಯೇ ಇದೆ. ಬೆಟ್ಟ ಇಳಿದು ತಪ್ಪಲಿಗೆ ಬಂದ ಹಾಗೆ ಜನರ ವಾಸ ಕಡಿಮೆಯಾಗುತ್ತಾ ಹೋಗುತ್ತದೆ. ಆದರೆ, ಈ ಜನರ ಬದುಕು ಮಾತ್ರ ಬೆಟ್ಟದ ತುದಿಯಲ್ಲಿ ಇರುವುದಲ್ಲ, ಶಿಸ್ತು ಮತ್ತು ಸಂಯಮವೂ ಅಷ್ಟೇ ಎತ್ತರದಲ್ಲಿದೆ.

ವಿದೇಶಗಳಿಗೆ ಹೋಗಿ ಬಂದವರೆಲ್ಲ ಅಲ್ಲಿನ ಸಂಚಾರ ನಿಯಮ, ಶಿಸ್ತು, ಸ್ವಚ್ಛತೆಯನ್ನು ರೋಮಾಂಚನಗೊಂಡು ವಿವರಿಸುವುದು, ಭಾರತದಲ್ಲಿ ಇಂಥ ಶಿಸ್ತೇ ಇಲ್ಲ ಎಂದೋ, ಯಾವಾಗ ಈ ಶಿಸ್ತು ಬರುತ್ತದೆ ಎಂದೋ ಕರುಬುವುದು ಮಾಡುತ್ತಿರುತ್ತಾರೆ. ಅಂಥವರೊಮ್ಮೆ ಈಶಾನ್ಯ ಭಾರತದ ಪುಟ್ಟ ರಾಜ್ಯ ಮಿಜೋರಾಂಗೆ ಭೇಟಿ ನೀಡಬೇಕು. ಅಲ್ಲಿನ ಜನರ ವೈಯಕ್ತಿಕ ಬದುಕಿನಲ್ಲಿ, ಸಾರ್ವಜನಿಕ ನಡವಳಿಕೆಯಲ್ಲಿ ಅಳವಡಿಸಿಕೊಂಡಿರುವ ಶಿಸ್ತು ಅಚ್ಚರಿಗೆ ಕಾರಣವಾಗಬಹುದು. ನಿಯಮ ಉಲ್ಲಂಘಿಸುವುದನ್ನೇ, ಬೇರೆಯವರನ್ನು ವಂಚಿಸುವುದನ್ನೇ ಬುದ್ಧಿವಂತಿಕೆ ಎಂದು ತಿಳಿದವರಿಗೆ ಮಿಜೋ ಜನರ ಶಿಸ್ತು ವಿಚಿತ್ರವಾಗಿಯೂ ಕಾಣಲೂಬಹುದು.

ಐಜ್ವಾಲ್‌ನಲ್ಲಿ ಸಿವಿಲ್ ಹಾಸ್ಪಿಟಲ್ (ಸರ್ಕಾರಿ ಆಸ್ಪತ್ರೆ) ಹೊರಗೆ ಇರುವ ಮೆಡಿಕಲ್‌ಗೆ ಹೋಗುವಾಗಲೂ ಜನರು ಸರದಿಯಲ್ಲೇ ಸಾಗುತ್ತಾರೆ. ಜನ ಜಾಸ್ತಿ ಇದ್ದರೂ ಸ್ವಲ್ಪವೂ ನೂಕುನುಗ್ಗಲು ಆಗದಂತೆ ಒಬ್ಬರ ಹಿಂದೆ ಒಬ್ಬರು ನಿಂತು ಸಂಯಮದಿಂದ ವರ್ತಿಸುತ್ತಾರೆ. ಇಂಥದ್ದೇ ಶಿಸ್ತು ರಸ್ತೆ, ಮಾರುಕಟ್ಟೆ ಸಹಿತ ಎಲ್ಲ ಕಡೆಯೂ ಕಾಣಸಿಗುತ್ತದೆ.

ಮಿಜೋರಾಂನಲ್ಲಿ ಶೇಕಡ 87ರಷ್ಟು ಜನ ಕ್ರೈಸ್ತ ಧರ್ಮಕ್ಕೆ ಸೇರಿದವರು. ಹಾಗಾಗಿ ಇಲ್ಲಿ ಭಾನುವಾರ ಯಾವುದೇ ಅಂಗಡಿಗಳ ಬಾಗಿಲು ತೆರೆಯುವುದಿಲ್ಲ. ವಾಹನಗಳು ಕೂಡ ರಸ್ತೆಗೆ ಇಳಿಯುವುದಿಲ್ಲ. ಭಾನುವಾರ ಐಜ್ವಾಲ್‌ನ ರಸ್ತೆಗಳನ್ನು ಕಂಡಾಗ ಕರ್ಫ್ಯೂ ವಿಧಿಸಿದ್ದಾರೋ ಅಥವಾ ಲಾಕ್‌ಡೌನ್ ಮಾಡಿದ್ದಾರೋ ಎಂಬಂತೆ ಭಾಸವಾಗುತ್ತದೆ. ಅಲ್ಲಲ್ಲಿ ಚರ್ಚ್‌ಗಳಿರುವುದರಿಂದ ಶೇಕಡ 99 ರಷ್ಟು ಜನರು ಚರ್ಚ್‌ಗಳಿಗೆ ನಡೆದುಕೊಂಡೇ ಹೋಗುತ್ತಾರೆ. ರಸ್ತೆಯಲ್ಲಿ ವಾಹನಗಳಿಲ್ಲದೇ ಇದ್ದರೂ ಪಾದಚಾರಿ ಮಾರ್ಗದಲ್ಲೇ ಸಾಗುತ್ತಾರೆ. ಪಾದಚಾರಿ ಮಾರ್ಗ ಇಲ್ಲದ ಕಡೆಗಳಲ್ಲಿ ಮಾತ್ರ ರಸ್ತೆ ಬದಿಯಲ್ಲಿ ಸಾಗುತ್ತಾರೆ. ಸೋಮವಾರ ಬೆಳಗ್ಗಿನಿಂದ ಶನಿವಾರ ಸಂಜೆವರೆಗೆ ದುಡಿಯುವ ಇಲ್ಲಿನ ಜನರು ಶನಿವಾರ ರಾತ್ರಿಯಿಂದ ಸೋಮವಾರ ಬೆಳಿಗ್ಗಿನವರೆಗೆ ಪೂರ್ಣ ವಿಶ್ರಾಂತಿಯಲ್ಲಿರುತ್ತಾರೆ.

ಇಲ್ಲಿನ ಜನರು ಶಾಂತ ಸ್ವಭಾವದವರು. ಯಾರಾದರೂ ನಿಯಮ ಉಲ್ಲಂಘಿಸುವುದು ಕಂಡರೆ ಉಳಿದವರು ತಕ್ಷಣ ಬುದ್ಧಿ ಮಾತು ಹೇಳುತ್ತಾರೆ. ಹಾಗಾಗಿ ಪೊಲೀಸರಿಗೆ ಇಲ್ಲಿ ಕೆಲಸ ಬಹಳ ಕಡಿಮೆ. ಸಂಚಾರಿ ಪೊಲೀಸರು ಕೂಡ ಇಲ್ಲ. ನಾವು ಐಜ್ವಾಲ್‌ನಿಂದ ಸೈರಾಂಗ್‌ಗೆ ಟ್ಯಾಕ್ಸಿಯಲ್ಲಿ ಹೋಗುತ್ತಿದ್ದಾಗ ಎದುರು ಲಾರಿಯೊಂದು ಸಾಗುತ್ತಿತ್ತು. ಅದರ ಚಾಲಕ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ. ನಮ್ಮ ಚಾಲಕ ಪೇಕು ಒಂದು ಬಾರಿ ಹಾರ್ನ್ ಮಾಡಿದರು. ಆದರೂ ಲಾರಿ ಚಾಲಕ ಮೊಬೈಲ್‌ನಲ್ಲಿ ಮಾತು ಮುಂದುವರಿಸಿದ್ದ. ಲಾರಿಯನ್ನು ಓವರ್‌ಟೇಕ್ ಮಾಡಿದ ಪೇಕು ಟ್ಯಾಕ್ಸಿಯನ್ನು ಅಡ್ಡವಾಗಿ ನಿಲ್ಲಿಸಿ ಕೆಳಗಿಳಿದರು. ಲಾರಿ ಚಾಲಕನಿಗೆ ಬೈದು ಬಂದು ಟ್ಯಾಕ್ಸಿಯನ್ನು ಮುಂದಕ್ಕೆ ಚಲಾಯಿಸಿದರು. ‘ಏನಾಯಿತು’ ಎಂದು ನಾವು ಕೇಳಿದೆವು. ‘ಮೊಬೈಲ್‌ನಲ್ಲಿ ಮಾತನಾಡಿಕೊಂಡು ಒಂದೇ ಕೈಯಲ್ಲಿ ಡ್ರೈವಿಂಗ್ ಮಾಡಬಾರದು ಎಂಬುದು ಗೊತ್ತಿಲ್ವ? ಹಾರ್ನ್ ಹಾಕಿದಾಗ ಸಣ್ಣಗಾಡಿಗಳಿಗೆ ಜಾಗ ಬಿಡಬೇಕು ಎಂಬುದು ಗೊತ್ತಿಲ್ವ? ಎಂದು ಕೇಳಿದೆ. ಆತ ಕ್ಷಮೆ ಕೇಳಿದ. ಮುಂದೆ ಹೀಗೆ ಮಾಡುವುದಿಲ್ಲ ಎಂದು ಹೇಳಿದ’ ಎಂದು ಪೇಕು ವಿವರಿಸಿದರು. ಅಲ್ಲಿ ನಿಯಮ ಉಲ್ಲಂಘಿಸುವುದನ್ನು ಸಾಮಾನ್ಯ ಜನರೂ ಸಹಿಸುವುದಿಲ್ಲ.

ಕಣಿವೆ ರಾಜ್ಯದ ರಸ್ತೆಗಳೆಲ್ಲ ಇಕ್ಕಟ್ಟಾದವುಗಳು. ವಾರಾಂತ್ಯದ ದಿನಗಳನ್ನು ಹೊರತುಪಡಿಸಿ ಬೇರೆ ದಿನಗಳಲ್ಲಿ ವಾಹನ ಸಂಚಾರ ಹೆಚ್ಚಿರುತ್ತದೆ. ಆದರೆ, ಎಲ್ಲೂ ಅನಗತ್ಯವಾಗಿ ಹಾರ್ನ್ ಮಾಡುವುದಿಲ್ಲ. ಇನ್ನೊಂದು ವಾಹನಕ್ಕೆ ದಾರಿ ಮಾಡಿಕೊಡಲು ಒಂದು ವಾಹನ ನಿಂತರೆ ಹಿಂದಿನಿಂದ ಬಂದ ವಾಹನ ಯಾವ ಕಾರಣಕ್ಕೂ ಓವರ್‌ಟೇಕ್ ಮಾಡಲು ಹೋಗವುದಿಲ್ಲ. ಮುಂದೆ ನಿಂತ ವಾಹನದ ಹಿಂಭಾಗದಲ್ಲಿಯೇ ನಿಲ್ಲಿಸುತ್ತಾರೆ. ಕಾರುಗಳಷ್ಟೇ ಅಲ್ಲ, ಬೈಕ್ ಸವಾರರೂ ಕೂಡ ಇದೇ ಶಿಸ್ತನ್ನು ಪಾಲಿಸುತ್ತಾರೆ.

ಐಜ್ವಾಲ್‌ನಲ್ಲಿ ನೈಸರ್ಗಿಕ ನೀರನ್ನು ಹಿಡಿದಿಡುವ ಬಾವಿ

24X7 ಮಾರುಕಟ್ಟೆ

ಐಜ್ವಾಲ್‌ನಲ್ಲಿ ಬಾರಾ ಬಜಾರ್ ರಸ್ತೆ ಸೇರಿದಂತೆ ಕೆಲವು ಮಾರ್ಗಗಳಲ್ಲಿ ಭಾನುವಾರ ಹೊರತುಪಡಿಸಿ ಉಳಿದ ದಿನಗಳಲ್ಲಿ ರಾತ್ರಿ, ಹಗಲು ವ್ಯವಹಾರ ನಡೆಯುತ್ತದೆ. ಇದನ್ನು 24X7 ಮಾರ್ಕೆಟ್ ಎಂದು ಕರೆಯಲಾಗುತ್ತದೆ. ದಿನದ 24 ಗಂಟೆಯೂ ವ್ಯಾಪಾರ ಇರುತ್ತದೆಯಾದರೂ ಹಗಲು ಮತ್ತು ರಾತ್ರಿ ನಡೆಯುವ ವ್ಯಾಪಾರಗಳು ಒಂದೇ ಅಲ್ಲ. ಬೆಳಿಗ್ಗೆ 9 ಗಂಟೆಗೆ ಎಲ್ಲ ಅಂಗಡಿಗಳು ಬಾಗಿಲು ತೆರೆಯುತ್ತವೆ. ರಾತ್ರಿ 7 ಗಂಟೆಯವರೆಗೆ ವ್ಯಾಪಾರ ನಡೆಯುತ್ತದೆ. ಅವುಗಳ ಬಾಗಿಲು ಹಾಕುತ್ತಿದ್ದಂತೆ ಅವುಗಳ ಎದುರು ರಸ್ತೆ ಬದಿಯಲ್ಲಿ ರಾತ್ರಿ ಮಾರುಕಟ್ಟೆ ತೆರೆದುಕೊಳ್ಳುತ್ತದೆ. ತರಕಾರಿ, ಹಣ್ಣು, ಕೋಳಿ, ಮೀನು ಸಹಿತ ಎಲ್ಲವೂ ರಾತ್ರಿ ಮಾರುಕಟ್ಟೆಯಲ್ಲಿರುತ್ತವೆ. ಇದು ಮರುದಿನ ಬೆಳಿಗ್ಗೆ 9ರವರೆಗೆ ಇರುತ್ತದೆ.

ಇನ್ನೊಂದು ವಿಶೇಷವೆಂದರೆ ತರಕಾರಿ, ಕೋಳಿ, ಮೊಟ್ಟೆ ಎಂದು ಭೇದ ಮಾಡದೇ ಒಟ್ಟೊಟ್ಟಿಗೆ ಇಟ್ಟು ಮಾರಾಟ ಮಾಡಲಾಗುತ್ತದೆ. ಅಲ್ಲದೇ ಮಾಂಸದ ಅಂಗಡಿಗಳಲ್ಲಿ ದನ ಮತ್ತು ಹಂದಿ ಮಾಂಸವನ್ನು ಒಂದೇ ಕಡೆ ನೇತು ಹಾಕಿ ಮಾರಾಟ ಮಾಡಲಾಗುತ್ತದೆ. ಹಿಂದೂ, ಮುಸ್ಲಿಂ, ಬೌದ್ಧ, ಕ್ರೈಸ್ತರ ಭಾವನೆಗಳಿಗೆ ಈ ಮಾರುಕಟ್ಟೆ ಯಾವುದೇ ಧಕ್ಕೆ ತಂದಿಲ್ಲ.

ತರಕಾರಿ ಮಾರಾಟ ಮಾಡಿದಂತೆ ಏಡಿಗಳನ್ನೂ ಮಾರಾಟ ಮಾಡುತ್ತಾರೆ. ನಾವು ಹೋದಾಗ ಎಂಟು ಏಡಿಗೆ ₹ 200 ದರ ಇತ್ತು. ಜೊತೆಗೆ ಏಡಿ ಒಯ್ಯಲು ಸ್ಥಳದಲ್ಲಿಯೇ ನೇಯ್ದ ಬಿದಿರಿನ ಚೀಲ ಉಚಿತವಾಗಿತ್ತು. ಅಂದರೆ ಏಡಿ ವ್ಯಾಪಾರಿಗೆ ಏಡಿ ಹಿಡಿಯುವ ಕಲೆಯ ಜೊತೆಗೆ ಬುಟ್ಟಿ ಹೆಣೆಯುವ ಕಲೆಯೂ ಒಟ್ಟೊಟ್ಟಿಗೆ ಗೊತ್ತಿರಬೇಕು.

ವಿಶಿಷ್ಟ ಬಾವಿ

ರಸ್ತೆಯಲ್ಲಿ ಅಲ್ಲಲ್ಲಿ ಪುಟ್ಟ ಬಾವಿಗಳಿವೆ. ಇವು ಗುಡ್ಡದ ಮೇಲಿನಿಂದ ಬೀಳುವ ನೀರನ್ನು ಸಂಗ್ರಹಿಸುತ್ತವೆ. ಇದೇ ಬಾವಿಯಿಂದ ಕುಡಿಯಲು ನೀರು ಒಯ್ಯುತ್ತಾರೆ. ಅಲ್ಲೇ ಪಕ್ಕದಲ್ಲಿ ಬಟ್ಟೆ ತೊಳೆಯುತ್ತಾರೆ. ನಗರದಲ್ಲಿ ಮಾತ್ರ ಟ್ಯಾಂಕಿಗಳು ಬಂದಿವೆ. ಉಳಿದವರಿಗೆ ಇದೇ ಬಾವಿಯೇ ನೈಸರ್ಗಿಕ ಟ್ಯಾಂಕ್‌ಗಳಾಗಿವೆ.

ಆರ್ಥಿಕವಾಗಿ ಶ್ರೀಮಂತವಲ್ಲದ, ಶೈಕ್ಷಣಿಕವಾಗಿ ಮುಂದಿರುವ, ನಿಸರ್ಗದ ಮಡಿಲಲ್ಲಿ ಅರಳಿರುವ ಮಿಜೋರಾಂ ಒಂದು ವಿಸ್ಮಯ ರಾಜ್ಯ. ಅಲ್ಲಿನ ಜನರ ನಡವಳಿಕೆ ಇನ್ನೂ ದೊಡ್ಡ ವಿಸ್ಮಯ. ತಾವು ಅಳವಡಿಸಿಕೊಳ್ಳದೇ ಬೇರೆಯವರಿಗೆ ಶಿಸ್ತಿನ ಪಾಠ ಮಾಡುವವರೆಲ್ಲ ಐಜ್ವಾಲ್‌ಗೆ ಹೋಗಿ ಬರಬೇಕು. ❖

ರಸ್ತೆ ಬದಿಯಲ್ಲೇ ಮಾರಾಟಕ್ಕಿಟ್ಟಿರುವ ತರಕಾರಿ ಮತ್ತು ಏಡಿ

ಪಾಂಡವರ ಪರಂಪರೆಯ ಗಂಗಮ್ಮ

• ಮಲ್ಲಿಕಾರ್ಜುನ ಹೊಸಪಾಳ್ಯ

ದಾರಿಯ ಅಕ್ಕಪಕ್ಕದ ಹೊಲದಲ್ಲಿ ಸಜ್ಜೆ, ತೊಗರಿ, ಜೋಳದ ತೆನೆಗಳು ವಾಲಾಡುತ್ತಿದ್ದವು. ನಡುವೆ ಪದವೊಂದು ತೇಲಿ ಬರುತ್ತಿತ್ತು.

ಬಿತ್ತಾಕೂರಿಗೆ ಮುಂದೆ ಬೀಸಾದ ಪುಟ್ಟಿಂದೆ
ಸಿತ್ತಾರದೆಣ್ಣೆನಡಿ ಮುಂದೆ, ಬಿತ್ತಾಕೂರಿಗೆ//
ಬಿತ್ತಾಕೂರಿಗೊಂದಿಡಿಯೋ ಮೆಲ್ಲಾಕೊಡಿಯೋ
ಚಿತ್ತುವಾರದೆಣ್ಣೆನಡಿ ಮುಂದೆ
ಜತ್ತಿಗೆ ತೋದೆ ಮಿಣಿ ತೋದೆ, ಬಿತ್ತಾಕೂರಿಗೆ//

ಹೊಲದ ನಡುವೆ ದಾರಿ ಮಾಡಿಕೊಂಡು ನೋಡಿದರೆ ಮಹಿಳೆಯೊಬ್ಬರು ಕಲ್ಲುಬಂಡೆಯ ಮೇಲೆ ಕುಳಿತು ಈ ಪದವನ್ನು ಗುನುಗುತ್ತಿದ್ದರು. ತಲೆಗೆ ವಲ್ಲಿಬಟ್ಟೆ, ಕೈಯಲ್ಲಿ ಹಕ್ಕಿ ಓಡಿಸುವ ಕವಣೆ. ಆ ಪದಕ್ಕೆ ಅರ್ಥ ಕೇಳಿದೆ. ಹೇಳುತ್ತಾ ಹೋದರು;

‘ಗಂಡ ಗಳೆ ಹೊಡೆಯುತ್ತಿರುತ್ತಾನೆ, ಹೆಂಡತಿಯು ಅವನ ಹಿಂದೆ ಪುಟ್ಟಿ ಕಟಿಗೊಂಡು ಬಿತ್ನೆ ಮಾಡುತ್ತಿರುತ್ತಾಳೆ. ಬಿತ್ತಾ ಹೊತ್ನಾಗೆ ಮಳೆ ಬರುತ್ತೆ. ಆಗ ಎತ್ತುಗಳ ಮಿಣಿಯೂ ತೋಯುತ್ತದೆ, ಹೆಂಡತಿಯ ನೆರಿಗೆಯೂ ತೋಯುತ್ತವೆ. ಹಾಗಾಗಿ ಕೂರಿಗೆಯನ್ನು ಮೆಲ್ಲಗೆ ಹೊಡೆಯಬೇಕೆಂದು ಹೆಂಡತಿ ಹೇಳುವ ಪದ’.

ಗಂಗಮ್ಮ

ಆಕೆ ಗಂಗಮ್ಮ, ಹೊಸಪೇಟೆ ಬಳಿಯ ಇಂಗಳಗಿಯವರು. ಮಾತು ಮುಂದುವರಿಸುತ್ತಾ ಕೂರಿಗೆ ಹೊಡೆಯುವವನು ಅರ್ಜುನ, ಬಿತ್ತನೆ ಮಾಡುವ ಹೆಣ್ಣು ದ್ರೌಪದಿ ಎಂದರು. ಪಾಂಡವರ ಕುರಿತು ಅವರು ಹೇಳಿದ್ದು ಕುತೂಹಲಕರ.

‘ದರ್ಮುರು ಎಲ್ಲಾ ಬದುಕು ಮಾಡ್ಯಾರೆ, ಬಿತ್ಯಾರ, ಎಂಟೆತ್ತಿನ ಬಂಡಿ ಹೂಡ್ಯಾರ, ಹೊಲಕೆ ಬಂದು ಯವಸಾಯ ಮಾಡ್ಯಾರ. ಪುಂಡಿ ತಪ್ಪಲು, ಕಾರೆ ತಪ್ಪಲು ತಿಂದಾರ, ಅರ್ಜುನ ದ್ರೌಪದಿಗೆ ಜ್ವಾಳದ ತೆನಿ ನೋಡು, ಸಜ್ಜಿ ತೆನಿ ನೋಡು ಅಂತ ತೋರಿಸ್ಯಾನೆ. ಅವರು ಮಾಡಿರೋದ್ನೇ ನಾವು ಮುಂದರಿಸ್ತಾ ಇರೋದು’.

ಅರ್ಜುನ ನೇಗಿಲು ಹೊಡೆದು, ದ್ರೌಪದಿ ಅಕ್ಕಡಿ ಸಾಲು ಬಿತ್ತನೆ ಮಾಡುತ್ತಾ ಬೆರಕೆ ಸೊಪ್ಪಿನ ಸಾರು ಮಾಡಿಕೊಂಡು ಧರ್ಮರಾಯ, ಭೀಮ, ನಕುಲ-ಸಹದೇವರೆಲ್ಲಾ ಹೊಲದಲ್ಲಿ ಊಟ ಮಾಡುವುದನ್ನು ನೆನೆಸಿಕೊಂಡು ಮನಸ್ಸು ಉಲ್ಲಸಿತವಾಯಿತು.

ಮಾತಾಡುತ್ತಲೇ ಅಣ್ಣೆಸೊಪ್ಪು, ಅಲಸಂದೆ ತಪರನ್ನು ಕಿತ್ತು ಮಡಿಲಿಗೆ ಸೇರಿಸಿದರು. ತೊಗರಿ ಕಾಯನ್ನು ಕಿತ್ತು ಬಿಡಿಸಿ ‘ಇನ್ನೂ ಬಲಿತಿಲ್ಲ, ಎಳೆ ಸಿಬುರು’ ಎನ್ನುತ್ತಾ ಮುಂದುವರಿದು ಜೋಳದ ದಂಟಿನ ಬಳಿ ನಿಂತು ‘ಜ್ವಾಳದ ಬೆಳಸೆ ತಿಂದೀರಾ’ ಪ್ರಶ್ನೆ ಹಾಕಿದರು.

‘ಇಲ್ಲ, ನಮ್ಮ ಕಡೆ ರಾಗಿ ಬೆಳಸೆ ತಿನ್ನುತ್ತಾರೆ’ ಎನ್ನುವ ವಾಕ್ಯ ಮುಗಿಯುವ ಮೊದಲೇ ನಾಲ್ಕಾರು ಎಳೆಯ ತೆನೆಗಳನ್ನು ಸೆಳೆದುಕೊಂಡರು. ಸೌದೆಪುಳ್ಳೆಯ ಬೆಂಕಿ ಮಾಡಿ ಸುಟ್ಟು ಕಾಳು ಉದುರಿಸಿದರು. ಬೆಚ್ಚಗಿನ ಕಾಳನ್ನು ಅಗಿದು ತಿನ್ನುತ್ತಿದ್ದರೆ ಬಾಯಿತುಂಬಾ ಹಾಲು ಒಸರುತ್ತಿತ್ತು. ದೇಸಿ ಜೋಳವಾದರೆ ಹಸಿ ತೆನೆಯನ್ನೇ ತಿನ್ನಬಹುದು, ಹೈಬ್ರಿಡ್ ಜೋಳ ಅಷ್ಟು ರುಚಿ ಇರುವುದಿಲ್ಲ ಎನ್ನುತ್ತಾ ಜಗಿಯತೊಡಗಿದರು. ಕಟವಾಯಿಗಳಲ್ಲಿ ಜೋಳದ ಹಾಲು ಇಳಿಯತೊಡಗಿತು.

ಹಾಗೇ ಒಂದು ನೆನಪಿನ ಲಹರಿ ಬಿಚ್ಚಿದರು.

ಸಣ್ಣವರಿದ್ದಾಗ ಮನೆಯಲ್ಲಿ ದವಸ ಧಾನ್ಯಗಳಿಗೆ ಕೊರತೆ. ಸ್ವಂತ ಜಮೀನಿಲ್ಲ. ಇತರೆಯವರ ಹೊಲಗಳು ಕಟಾವಾದ ಬಳಿಕ ಬಿದ್ದಿರುವ ಸಜ್ಜೆ, ಜೋಳದ ತೆನೆಗಳನ್ನು ಆರಿಸಿಕೊಂಡು ಬಂದು ಕಾಳು ತೆಗೆದು ಊಟ ಮಾಡುತ್ತಿದ್ದರು. ಹಾಗೆ ತಂದ ಕಾಳುಗಳು ಹಲವು ತಿಂಗಳವರೆಗೆ ಇವರ ಹೊಟ್ಟೆ ತುಂಬಿಸುತ್ತಿದ್ದವು. ಈಗಲೂ ಎಲ್ಲಾದರೂ ತೆನೆಗಳು ಬಿದ್ದಿದ್ದರೆ ಆರಿಸಿ ಮಡಿಲಿಗೆ ಹಾಕಿಕೊಳ್ಳುತ್ತಾರೆ.

ಈಗ ಗುಡ್ಡದ ಅಂಚಿನಲ್ಲಿರುವ ಎರಡೆಕರೆ ಪರಂಬೋಕು ಜಮೀನು ಗೆಯ್ಮೆ ಮಾಡುತ್ತಿದ್ದಾರೆ. ಈ ವರ್ಷ ಬಿಳಿ ಜೋಳ, ತೊಗರಿ ಮುಖ್ಯ ಬೆಳೆ. ಸಾಲುಗಳಿಗೆ ತೊಗರಿ, ನವಣೆ, ಸಜ್ಜೆ, ಅಲಸಂದೆ ಹಾಕಿದ್ದರು. ಅಲ್ಲಲ್ಲಿ ಬೆಂಡೆ, ಮೂಲಂಗಿ, ಟೊಮೆಟೊ ಸಹ. ನವಣೆ, ಸಜ್ಜೆ ತೆನೆಗಳು ಹಣ್ಣಾಗಿದ್ದವು. ದಪ್ಪ ತೆನೆಗಳನ್ನು ಉಗುರಿನಲ್ಲಿ ಚಿವುಟಿ ಮಂಕರಿಗೆ ಹಾಕಿಕೊಂಡರು. ಇವು ಬಿತ್ತನೆಗೆ.

ಇವರ ಹೊಲ ಕಟಾವಾದ ನಂತರ ಬಿದ್ದಿರುವ ಗರಿ, ಎಲೆ, ದಂಟು ಮುಂತಾದ ಉಳಿಕೆಯನ್ನು ಕುರಿಗಾರರು ಮೇಯಿಸುತ್ತಾರೆ. ಅದಕ್ಕೆ ಪ್ರತಿಯಾಗಿ ಇಂತಿಷ್ಟು ಗೊಬ್ಬರವನ್ನು ಕೊಡಬೇಕು. ಕುರಿಗಳು ಪಿಚ್ಚಿಗೆ ಹಾಕಿ ಗೊಬ್ಬರವೂ ಆಯಿತು, ಕುರಿಗಾರರು ಕೊಡುವ ಗೊಬ್ಬರವನ್ನು ಹೊಲಕ್ಕೆ ಚೆಲ್ಲಿದರೆ ಫಲವತ್ತಾಯಿತು ಎಂದು ತಮ್ಮ ಗೊಬ್ಬರದ ‘ಎಕನಾಮಿಕ್ಸ್’ ವಿವರಿಸಿದರು.

ಬಿಸಿಲು ಹೆಚ್ಚಾಗಿದ್ದರಿಂದ ಮರದಡಿಗೆ ನಡೆದೆವು. ಮಾತು ಅವರ ಬದುಕಿನತ್ತ ತಿರುಗಿತು. ಗಂಗಮ್ಮ ಮಾದಿಗ ಸಮುದಾಯಕ್ಕೆ ಸೇರಿದವರು. ಹುಟ್ಟಿದ್ದು ಇಂಗಳಗಿ. ಬಾಲ್ಯ ಕಳೆದಿದ್ದು ಅಜ್ಜನ ಊರಾದ ಬಳ್ಳಾರಿ ಬಳಿಯ ಸುಲ್ತಾನಪುರ. ಒಂಬತ್ತನೇ ವರ್ಷಕ್ಕೆ ಮದುವೆ ಮಾಡಿಬಿಡುತ್ತಾರೆ. ಅದು ಮನೆಯ ಸಂಪ್ರದಾಯವನ್ನು ಮುಂದುವರಿಸಲು. ಸಂಪ್ರದಾಯವನ್ನು ಅರ್ಥಮಾಡಿಕೊಳ್ಳುವ ವಯಸ್ಸಿಗೆ ಸಮಯ ಮೀರಿತ್ತು. ಮೂರು ಗಂಡು ಮಕ್ಕಳಾದವು. ಕೂಲಿ ಮಾಡುತ್ತಾ, ಮಕ್ಕಳನ್ನು ಸಲಹುತ್ತಾ ಬದುಕು ಸವೆಸಿದರು. ಮೂವರಿಗೂ ಮದುವೆ ಮಾಡಿದ್ದಾರೆ. ಮಕ್ಕಳಿಗೆ ಅಮ್ಮನ ಹಿನ್ನೆಲೆ, ಅನುಭವಿಸಿದ ಕಷ್ಟಗಳೆಲ್ಲಾ ಗೊತ್ತು. ಇತ್ತೀಚೆಗೆ ಹೊಸ ಮನೆ ಕಟ್ಟಿದ್ದಾರೆ. ಎಲ್ಲರೂ ಒಟ್ಟಿಗೇ ಇದ್ದಾರೆ.

ಸಣ್ಣ ವಯಸ್ಸಿಗೆ ಮದುವೆಯಾದಾಗ ಕುಹಕದ ಮಾತುಗಳು ಬಂದಿದ್ದವು. ಕೂಲಿ ಹೋದಾಗ, ಹಬ್ಬ-ಹುಣ್ಣಿಮೆಗಳಲ್ಲಿ ಬೆನ್ನ ಹಿಂದೆ ನೂರಾರು ಮಾತುಗಳನ್ನು ಕೇಳಿದ್ದಾರೆ. ‘ಹೆರಿಗೆಯಾದ 16 ದಿವಸಕ್ಕೇ ಕೆಲಸಕ್ಕೆ ಹೋದ ಜೀವ ನಂದು, ಈ ಊರಲ್ಲಿ ನಾನು ಗಂಡಸಿನ ಥರ ಬ್ಯಾಸಾಯ ಹೊಡೆದಿವ್ನಿ, ಬಾರುಕೋಲು ಹೆಗಲ ಮೇಲೆ ಹಾಕ್ಯಂಡು ಬಂದ್ರೆ ಯಾರೂ ಕಿಮುಕ್ ಅಂತಿರ್ಲಿಲ್ಲ..’ ಎನ್ನುವ ಹೊತ್ತಿಗೆ ಮಗ ಬುತ್ತಿ ತಂದ. ರಾಗಿ ಮುದ್ದೆ ಸೊಪ್ಪಿನ ಸಾರು ಊಟ ಮಾಡುತ್ತಾ ‘ಪುಂಡೆ ಪಲ್ಯಕ್ಕೆ ಅಲಸಂದೆ ಕಾಳು ಹಾಕಿ ಬಸೀಬೇಕು. ಅವಾಗ ಸಾರು ರುಸಿ ಬರುತ್ತೆ. ಈಗ ಗ್ಯಾಸ್ ಮ್ಯಾಲೆ ಕುಕ್ಕರ್ ಇಕ್ಕಿ ಕುರ್ ಅನಿಸುತ್ತಾರೆ’ ಎಂದು ಬೇಸರಿಸಿಕೊಂಡರು.

ಈ ವರ್ಷ ಒಳ್ಳೆ ಮಳೆ ಆಗಿದೆ, ಕೈತುಂಬಾ ಬೆಳೆ ಎಂದು ಮಾತು ಮುಂದುವರಿಸಿ ‘ಎಷ್ಟೇ ಬೆಳೆ ಆಗ್ಲಿ ಒಂದು ಕಾಳು ಮಾರಾಟ ಮಾಡದಿಲ್ಲ. ಮುಂದಲ ವರ್ಸ ಮಳೆ ಕೈಕೊಟ್ರೆ …’ ಎನ್ನುತ್ತಾ ಜೋರಾಗಿ ಆಕಳಿಸಿ ಕೈಯನ್ನು ತಲದಸಿ ಇಟ್ಟುಕೊಂಡು ಮಲಗಿಯೇಬಿಟ್ಟರು.

ಅವರೊಂದಿಗಿನ ಮಾತುಕತೆಯಲ್ಲಿ ಎಲ್ಲವೂ ಅರ್ಥವಾಗಿತ್ತು. ಆದರೆ ‘ಸಾಂಪ್ರದಾಯಿಕ ಮದುವೆ’ ಎಂಬುದೇ ಸ್ವಲ್ಪ ಗೊಂದಲ. ದಾರಿಯಲ್ಲಿ ಒಬ್ಬರನ್ನು ಕೇಳಿದಾಗ ‘ದೇವದಾಸಿ ಬಿಡುವುದಕ್ಕೆ ನಮ್ಮ ಕಡೆ ಹಾಗೆ ಕರೆಯುತ್ತಾರೆ’ ಎಂದರು.

ಬೆಳಗಿನಿಂದ ನಡೆದ ಮಾತುಕತೆಯನ್ನು ಮತ್ತೊಮ್ಮೆ ನೆನಪಿಸಿಕೊಳ್ಳುತ್ತಾ ಹೋದೆ. ಬಿಂದುಗಳೆಲ್ಲಾ ಜೋಡಣೆಯಾಗಿ ಗಂಗಮ್ಮನ ಬದುಕಿನ ಒಂದು ಸ್ಪಷ್ಟ ರೂಪ ಕಣ್ಮುಂದೆ ಬಂದಿತು. ❖

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಚೆಂಡಿಗೆ ಬೆದರಿದ ಇಲಿ!

majakoora@prajavani.co.in

ಡಣ್ಣ ಚಕ್ಕು ಕಿರಿ ಚಿತ್ರ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಗಾಲ್ಫ್ ಆಡುತ್ತಿದ್ದ. ಬಹುದೂರದಲ್ಲಿದ್ದ ಗುರಿಯತ್ತ ನೋಟವಿಟ್ಟು ಚೆಂಡನ್ನು ಜೋರಾಗಿ ಹೊಡೆದ. ಆ ಚೆಂಡು ನೇರವಾಗಿ ಗುಂಡಿಯೊಳಗೆ ರಭಸದಲ್ಲೇ ಬಿತ್ತು. ಅಷ್ಟರಲ್ಲೇ ಅದರೊಳಗೆ ಅಡಗಿಕೊಂಡಿದ್ದ ಇಲಿಯೊಂದು ಹೆದರಿ ಹೊರಹಾರಿತು.



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

						=	
1	ಗವಿ	+	ಕರ	+	ಳೆ	=	
2	ಪದ	+	ಕಡ	+	ನ್ನ	=	
3	ಜಡಿ	+	ನಗೆ	+	ರಾ	=	
4	ಹಸು	+	ನಳ	+	ದಿ	=	
5	ನನ್ನ	+	ಗಡಿ	+	ಡು	=	

ಜಾಣಪದ ಆಟ

ಪದ ಹಿಗ್ಗು

1. ಇಲ್ಲಿ ಕೊಟ್ಟ ಪದಗಳಿಗೆ ಇನ್ನೊಂದು ಅಕ್ಷರ ಸೇರಿಸಿ ಮೂರಕ್ಷರದ ಪದವಾಗಿ ಹಿಗ್ಗಿಸಿ.

1	ಸಂಘ	
2	ಸಂತ	
3	ಕರ	
4	ಗರಿ	
5	ಭಾರ	
6	ಸಲ	
7	ಕೂರಿ	
8	ಮಂಗ	
9	ಕದ	
10	ಸಂಪು	

ಅಕ್ಷರ ಪಟ್ಟಿ

ಗೆ	ಟ	ಳಿ	ರ್ಷ	ಸ
ಷ್ಠ	ತ	ಗ	ಳ	ಡಿ

2. ಎರಡೂ ಪದಗಳನ್ನು ಕೂಡಿಸಿ ಊರಿನ ಹೆಸರು ಸೂಚಿಸಿ

1	ಮಡಿ + ಜಖಂ	
1	ಮರಿ + ಕೇಡಿ	
1	ಬಕ + ರವಿ	
1	ಪೂಜಾ + ರವಿ	
1	ಮೂಲ + ಗಿಡ	

ವಾರದ ಹಾಡು

ಮೊದಲನೆ ವಾರ ರವಿವಾರ
ಮಕ್ಕಳಿಗಿದುವೆ ಸವಿವಾರ
ಎರಡನೆ ವಾರ ಸೋಮವಾರ
ಬಂದನು ನೋಡಿ ಚಿನಿವಾರ
ಮೂರನೆ ವಾರ ಮಂಗಳವಾರ
ಆತನ ಊರು ಕಾರವಾರ
ನಾಲ್ಕನೆ ವಾರ ಬುಧವಾರ
ಜೊತೆಯಲಿ ಆತನ ಪರಿವಾರ
ಐದನೆ ವಾರ ಗುರುವಾರ
ಆತನ ಹೆಗಲಲ್ಲಿ ಜನಿವಾರ
ಆರನೆ ವಾರ ಶುಕ್ರವಾರ
ಹಂಚುತಲಿಹನು ಪನಿವಾರ
ಏಳನೆ ವಾರ ಶನಿವಾರ
ಇಲ್ಲಿಗೆ ಮುಗಿದವು ಒಂದುವಾರ

ಮಗ್ಗಿ ಬರೆಯುವ ಮಜಾ!

20ರೊಳಗಿನ ಯಾವುದೇ ಮಗ್ಗಿಯನ್ನು ಹೀಗೆ ಸುಲಭವಾಗಿ ಬರೆಯಬಹುದು.

ಉದಾ: 15ರ ಮಗ್ಗಿ	ಉದಾ: 18ರ ಮಗ್ಗಿ
1 + 0 5 = 15	1 + 0 8 = 18
2 + 1 0 = 30	2 + 1 6 = 36
3 + 1 5 = 45	3 + 2 4 = 54
4 + 2 0 = 60	4 + 3 2 = 72
5 + 2 5 = 75	5 + 4 0 = 90
6 + 3 0 = 90	6 + 4 8 = 108
7 + 3 5 = 105	7 + 5 6 = 126
8 + 4 0 = 120	8 + 6 4 = 144
9 + 4 5 = 135	9 + 7 2 = 162
10 + 5 0 = 150	10 + 8 0 = 180

ಹೀಗೆ ಬೇರೆ ಮಗ್ಗಿಗಳನ್ನು ಪ್ರಯತ್ನಿಸಿ ನೋಡಿ

ಪದ ರಚಿಸಿ

ಇಲ್ಲಿ ಕೊಟ್ಟಿರುವ ‘ವರ’ ಪದಕ್ಕೆ ಪದಪಟ್ಟಿಯಿಂದ ಇನ್ನೆರಡು ಅಕ್ಷರ ಸೇರಿಸಿ ನಾಲ್ಕಕ್ಷರದ ಪದ ರಚಿಸಿ

1	ವ	ರ			
2	ವ	ರ			
3	ವ	ರ			
4	ವ	ರ			
5	ವ	ರ			

ಅಕ್ಷರ ಪಟ್ಟಿ

ದಾ	ಕ	ಮಾ	ನ	ನ
ಲ	ಕ್ಷಿ	ಟ	ವಿ	ನ

ಮೋಜಿನ ಇಂಗ್ಲಿಷ್

ಒಂದು ಪದ ಹಲವು ವಿಧ

DECIMAL
CLAIMED
MEDICAL
DECLAIM

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಾಟ

ಇಲ್ಲಿರುವ ಇಂಗ್ಲಿಷ್ ಪದದ ಅಕ್ಷರಗಳಿಗೆ ಇನ್ನೊಂದು ಅಕ್ಷರ ಸೇರಿಸಿ ಅರ್ಥಬದ್ಧವಾದ ಇನ್ನೊಂದು ಪದ ಮಾಡಿ.

LOVE + S = ________

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ: 1.ಕೊಂದು 2.ಎಂದು 3.ಬೆಂದು 4.ಬಂದು 5.ಕಂದು 6.ಒಂದು 7.ಇಂದು 8.ಕೆಂದು 9.ತಿಂದು 10.ಸಂದು

1.ಉಂಡು 2.ಕಂಡು 3.ಚೆಂಡು 4.ತುಂಡು 5.ಗುಂಡು 6.ಬೆಂಡು 7.ಕಂಡು 8.ಜೊಂಡು 9.ದಂಡು 10.ಗಂಡು

ಶಬ್ದಾಟ: STORE

ಮೋಜಿನ ಇಂಗ್ಲಿಷ್: 1.SIGHT 2.RIGHT 3.FIGHT 4.LIGHT 5.TIGHT 6.EIGHT 7.MIGHT 8.NIGHT

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಜನ್ಯ ಸಾಗರ್
ಮಾವಿನಕೆರೆ

ಸಂಪದ ಸಿದ್ದಪ್ಪ ನೇಸರಗಿ
ಬೈಲಹೊಂಗಲ

ಪ್ರಯಾಗ್ ಬಿ.
ಕೋಲಾರ

ವೇದಾಂತ ಎಸ್. ಕಾಮತ್, ಅಂಕೋಲ

ಮೊಹಮ್ಮದ್ ಅಯಾನ್ ಜಿ., ಹರಪನಹಳ್ಳಿ

ಪ್ರಜ್ವಲ್ ಬಿ.
ವಿಜಯಪುರ

ಚಿಟಿಕೆ ಸುದ್ದಿ

ಬೆಂಗಳೂರು ಕಚೇರಿ ಮಾರುಕಟ್ಟೆಗೆ ವರ್ಕ್‌ಈಸಿ ಪ್ರವೇಶ

ಬೆಂಗಳೂರು: ಕಚೇರಿ ಸ್ಥಳಗಳನ್ನು ಒದಗಿಸುವ 'ವರ್ಕ್ ಈಸಿ ಸ್ಪೇಸ್ ಸಲ್ಯೂಷನ್ಸ್' ಕಂಪನಿಯು ಬೆಂಗಳೂರಿನಲ್ಲಿ ತನ್ನ ಮೊದಲ ಕೇಂದ್ರವನ್ನು ಆರಂಭಿಸಿದ್ದು, ಬೆಳ್ಳಂದೂರು ಹೊರ ವರ್ತುಲ ರಸ್ತೆಯಲ್ಲಿ ವರ್ಕ್‌ಈಸಿ ಟೆಕ್‌ಶೈರ್ ಹೆಸರಿನ ಕಟ್ಟಡದಲ್ಲಿ ಕಚೇರಿ ಸ್ಥಳದ ಸೌಲಭ್ಯಗಳನ್ನು ಕಲ್ಪಿಸಿದೆ.

ಇಲ್ಲಿ ಅಂದಾಜು 2 ಲಕ್ಷ ಚದರ ಅಡಿ ವಿಸ್ತೀರ್ಣದ ಸ್ಥಳ ಲಭ್ಯವಿದೆ. 'ಚೆನ್ನೈನಲ್ಲಿ ಕೇವಲ 1 ಲಕ್ಷ ಚದರ ಅಡಿಗಳ ಕಚೇರಿ ಸ್ಥಳದೊಂದಿಗೆ ಆರಂಭವಾದ ಕಂಪನಿಯು ಈಗ 10.25 ಲಕ್ಷ ಚದರ ಅಡಿಗಳ ಕಚೇರಿ ಸ್ಥಳವನ್ನು ಮೂರು ನಗರಗಳಲ್ಲಿ ಹೊಂದಿದೆ. ಕಂಪನಿ ಆರಂಭವಾದ ನಂತರದಲ್ಲಿ ವರ್ಷದಿಂದ ವರ್ಷಕ್ಕೆ ಶೇ 45ರಷ್ಟು ಬೆಳವಣಿಗೆ ಸಾಧಿಸಿದೆ' ಎಂದು ಕಂಪನಿಯ ಸಿಇಒ ಪ್ರತಾಪ್ ಮುರಳಿ ಹೇಳಿದ್ದಾರೆ.

ಬಿಹೈವ್, ವಿವರ್ಕ್, ಆವ್‌ಫೀಸ್‌ನಂತಹ ಕಂಪನಿಗಳು ಬೆಂಗಳೂರಿನ ಕಚೇರಿ ಸ್ಥಳ ಮಾರುಕಟ್ಟೆಯಲ್ಲಿ ಈಗಾಗಲೇ ತಮ್ಮ ಸೇವೆ ಒದಗಿಸುತ್ತಿವೆ. ಅವುಗಳ ಸಾಲಿಗೆ ಈಗ ವರ್ಕ್ ಈಸಿ ಕಂಪನಿಯೂ ಸೇರಿದೆ.

ಮುಂಬೈ ಧಾರಣೆ (ಶೇಂಗಾ)

11-10-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1400 (1400)
ಒಂದು ವಾರದ ಡೆಲಿವರಿ	1395 (1395)
ಪಾಮ್ ವಾರದ ಡೆಲಿವರಿ	1288 (1298)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1410)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,22,450 (1,20,700)
ಬೆಳ್ಳಿ ಕೆ.ಜಿಗೆ	1,68,500 (1,65,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುಡಾನ್: 60 ಸಾವು

ಪೋರ್ಟ್ ಸುಡಾನ್ (ಸುಡಾನ್) (ಎಎಫ್‌ಪಿ): ಸುಡಾನ್‌ನ ಉತ್ತರ ದಾರ್ಫುರ್ ರಾಜ್ಯದ ಅಲ್ ಫಾಶಿರ್ ನಗರದ ನಿರಾಶ್ರಿತರ ಶಿಬಿರದ ಮೇಲೆ ಸುಡಾನ್‌ನ ಅರೆಸೇನಾ ಪಡೆ ನಡೆಸಿದ ಡ್ರೋನ್ ಹಾಗೂ ಶೆಲ್ ದಾಳಿಯಲ್ಲಿ ಕನಿಷ್ಠ 60 ಮಂದಿ ಮೃತಪಟ್ಟಿದ್ದಾರೆ.

ಅಲ್ ಫಾಶಿರ್‌ನ ವಿಶ್ವವಿದ್ಯಾಲಯದ ಮೈದಾನದಲ್ಲಿ ನಿರ್ಮಿಸಿರುವ ಶಿಬಿರದ ಮೇಲೆ ದಾಳಿ ನಡೆದಿದೆ ಎಂದು ಇಲ್ಲಿನ 'ದಿ ರೆಸಿಸ್ಟೆಂಟ್ ಕಮಿಟಿ' ಶನಿವಾರ ತಿಳಿಸಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹75
ಮೈಸೂರು:	100 ಕ್ಕೆ	₹570

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹222-640
ದ್ವಿತಳಿ (ಬಿ.ವಿ)	₹370-863

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹183.50
ಆರ್‌ಎಸ್‌ಎಸ್-5	₹178.50
ಗುಡ್ ಲಾಟ್	₹165.50

ಮುದ್ರೆಮನೆ ಕಾಫಿ (50 ಕೆಜಿಗೆ)	
ಎಪಿ	₹29500
ಎಸಿ	₹15150
ಆರ್‌ಪಿ	₹20000
ಆರ್‌ಸಿ	₹11300

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1390 (1390)
ಸೋಯಾ (ರಿಫೈನ್ಡ್)	₹1280 (1290)
ಸೂರ್ಯಕಾಂತಿ (ರಿಫೈನ್ಡ್)	₹1450 (1460)
ಪಾಮೋಲಿನ್	₹1290 (1300)

ಭಾರತದ ರಫ್ತುದಾರರಿಗೆ ಲಾಭ?

ಅಮೆರಿಕ ಮತ್ತು ಚೀನಾ ನಡುವೆ ಹೆಚ್ಚಿದ ವ್ಯಾಪಾರ ಸಮರ

ನವದೆಹಲಿ (ಪಿಟಿಐ): ಅಮೆರಿಕ ಮತ್ತು ಚೀನಾ ನಡುವೆ ವ್ಯಾಪಾರ ಸಮರ ತೀವ್ರಗೊಳ್ಳುತ್ತಿರುವ ಪರಿಣಾಮವಾಗಿ ಭಾರತದ ರಫ್ತುದಾರರಿಗೆ ಪ್ರಯೋಜನವಾಗುವ ನಿರೀಕ್ಷೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಈ ಸಮರದಿಂದ ಅಮೆರಿಕದ ಮಾರುಕಟ್ಟೆಗೆ ಭಾರತದ ಸರಕುಗಳ ರಫ್ತು ಹೆಚ್ಚಾಗಲಿದ್ದು, ಭಾರತೀಯ ರಫ್ತುದಾರರಿಗೆ ಲಾಭವಾಗಬಹುದು ಎಂದು ಅವರು ಹೇಳಿದ್ದಾರೆ.

ನವೆಂಬರ್ 1ರಿಂದ ಜಾರಿಗೆ ಬರುವಂತೆ ಚೀನಾದ ಸರಕುಗಳ ಆಮದಿನ ಮೇಲೆ ಅಮೆರಿಕ ಹೆಚ್ಚುವರಿಯಾಗಿ ಶೇ 100ರಷ್ಟು ಸುಂಕ ವಿಧಿಸಿದೆ. ಇದೀಗ ಒಟ್ಟು ಸುಂಕ ಶೇ 130ರಷ್ಟಾಗಿದೆ. ಪ್ರಸ್ತುತ ಭಾರತದ ಸರಕುಗಳ ಆಮದಿನ ಮೇಲೆ ಅಮೆರಿಕ ಶೇ 50ರಷ್ಟು ಸುಂಕ ವಿಧಿಸುತ್ತಿದೆ.

'ಚೀನಾದ ಮೇಲೆ ಅಮೆರಿಕ ವಿಧಿಸಿರುವ ಅಧಿಕ ಸುಂಕದಿಂದ ಭಾರತದ ಸರಕುಗಳಿಗೆ ಬೇಡಿಕೆ ಬರಲಿದೆ. ಈ ಸಮರದಿಂದ ನಾವು ಗಳಿಕೆ ಕಾಣುವ ನಿರೀಕ್ಷೆ ಇದೆ' ಎಂದು ಭಾರತೀಯ ರಫ್ತುದಾರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಸಿ. ರಲ್ಹಾನ್ ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದಲ್ಲಿ ಅಮೆರಿಕಕ್ಕೆ ಭಾರತದಿಂದ ₹7.62 ಲಕ್ಷ ಕೋಟಿಯಷ್ಟು ಮೌಲ್ಯದ ಸರಕುಗಳು ರಫ್ತಾಗಿದ್ದವು.

ಚೀನಾದ ಸರಕುಗಳ ಮೇಲೆ ವಿಧಿಸಿರುವ ಶೇ 100ರಷ್ಟು ಹೆಚ್ಚುವರಿ ಸುಂಕವು ಭಾರತದಿಂದ ಅಮೆರಿಕಕ್ಕೆ ಅಗಾಧ ಪ್ರಮಾಣದಲ್ಲಿ ಸರಕುಗಳನ್ನು ರಫ್ತು ಮಾಡುವ ಅವಕಾಶ ಒದಗಿಸಲಿದೆ ಎಂದು ಜವಳಿ ವಲಯದ ರಫ್ತುದಾರರೊಬ್ಬರು ಹೇಳಿದ್ದಾರೆ.

ಈ ಸುಂಕ ಹೆಚ್ಚಳದ ಪರಿಣಾಮ ಚೀನಾದ ಸರಕುಗಳ ಬೆಲೆಯು ಅಮೆರಿಕದಲ್ಲಿ ಹೆಚ್ಚಳವಾಗಲಿದೆ. ಇದರಿಂದ ಸ್ಪರ್ಧಾತ್ಮಕತೆ ಕಡಿಮೆ ಆಗಲಿದೆ ಎಂದು ಹೇಳಿದ್ದಾರೆ.

ಅಮೆರಿಕ ಮತ್ತು ಚೀನಾದ ನಡುವೆ ನಡೆಯುತ್ತಿರುವ ವ್ಯಾಪಾರ ಸಮರವು, ಜಾಗತಿಕ ಮಾರುಕಟ್ಟೆಗಳಲ್ಲಿ ವಿದ್ಯುತ್ ಚಾಲಿತ ವಾಹನ, ಪವನ ವಿದ್ಯುತ್ ಉತ್ಪಾದನಾ ಯಂತ್ರ, ಸೆಮಿಕಂಡಕ್ಟರ್‌ನ ಬಿಡಿ ಭಾಗಗಳ ಬೆಲೆ ಹೆಚ್ಚಳ ಮಾಡಲಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ಹೇಳಿದೆ.

ಚೀನಾದ ಎಲೆಕ್ಟ್ರಾನಿಕ್ಸ್, ಜವಳಿ, ಪಾದರಕ್ಷೆ, ಸೌರ ಫಲಕಗಳನ್ನು ಅಮೆರಿಕ ಹೆಚ್ಚಾಗಿ ಅವಲಂಬಿಸಿದೆ ಎಂದು ಹೇಳಿದೆ.

ಸತತ ನಾಲ್ಕು ಆರ್ಥಿಕ ವರ್ಷದಿಂದ ಅಮೆರಿಕವು ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿ ಉಳಿದಿದೆ. 2024-25ರಲ್ಲಿ ದ್ವಿಪಕ್ಷೀಯ ವ್ಯಾಪಾರ ಮೌಲ್ಯ ₹11.69 ಲಕ್ಷ ಕೋಟಿಯಾಗಿದೆ. ದೇಶದ ಒಟ್ಟು ಸರಕುಗಳ ರಫ್ತಿನಲ್ಲಿ ಅಮೆರಿಕದ ಪಾಲು ಶೇ 18ರಷ್ಟಿದೆ. ಆಮದು ಶೇ 6ರಷ್ಟಿದೆ.

ಅಂಕಿ ಅಂಶಗಳು

130% ರಷ್ಟು ಸುಂಕ
ನವೆಂಬರ್ 1ರಿಂದ ಚೀನಾದ ಸರಕುಗಳ ಮೇಲೆ ಅಮೆರಿಕ ವಿಧಿಸುವ ಸುಂಕ

50% ರಷ್ಟು ಸುಂಕ
ಪ್ರಸ್ತುತ ಭಾರತದಿಂದ ರಫ್ತಾಗುವ ಸರಕುಗಳ ಮೇಲೆ ಅಮೆರಿಕ ವಿಧಿಸುತ್ತಿರುವ ಸುಂಕ

₹11.69 ಲಕ್ಷ ಕೋಟಿ
ಕಳೆದ ಆರ್ಥಿಕ ವರ್ಷದಲ್ಲಿ ಭಾರತ–ಅಮೆರಿಕದ ದ್ವಿಪಕ್ಷೀಯ ವ್ಯಾಪಾರ ಮೌಲ್ಯ

ಸುದ್ದಿ 2 ನಿಮಿಷ

ಡಿಮಾರ್ಟ್ ಲಾಭ ವೃದ್ಧಿ

ನವದೆಹಲಿ (ಪಿಟಿಐ): ಡಿಮಾರ್ಟ್ ಮಳಿಗೆಗಳ ಮಾಲೀಕತ್ವ ಹೊಂದಿರುವ ಅವೆನ್ಯು ಸೂಪರ್‌ಮಾರ್ಟ್ಸ್ ಲಿಮಿಟೆಡ್ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹684.85 ಕೋಟಿ ಲಾಭ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ ಶೇ 3.85ರಷ್ಟು ಹೆಚ್ಚು.

ಕಂಪನಿಯ ಕಾರ್ಯಾಚರಣೆ ವರಮಾನವು ಶೇ 15.45ರಷ್ಟು ಹೆಚ್ಚಾಗಿ ₹16,676 ಕೋಟಿಗೆ ತಲುಪಿದೆ. ಇದೇ ಅವಧಿಯಲ್ಲಿ ಕಂಪನಿಯ ಒಟ್ಟು ವೆಚ್ಚಗಳು ಶೇ 16ರಷ್ಟು ಹೆಚ್ಚಳ ಕಂಡಿದ್ದು, ₹15,751 ಕೋಟಿಗೆ ತಲುಪಿದೆ.

ಎರಡು ವರ್ಷ ಹಾಗೂ ಅದಕ್ಕಿಂತ ಹೆಚ್ಚು ಹಳೆಯದಾದ ಡಿಮಾರ್ಟ್ ಮಳಿಗೆಗಳು ಶೇ 6.8ರಷ್ಟು ಬೆಳವಣಿಗೆ ಸಾಧಿಸಿವೆ ಎಂದು ಕಂಪನಿಯ ನಿಯೋಜಿತ ಸಿಇಒ ಅನ್ಶುಲ್ ಅಸಾವಾ ತಿಳಿಸಿದ್ದಾರೆ.

ಸಾಧ್ಯವಿರುವ ಎಲ್ಲ ಕಡೆಯೂ ಜಿಎಸ್‌ಟಿ ದರ ಪರಿಷ್ಕರಣೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಿರುವುದಾಗಿ ಕಂಪನಿ ತಿಳಿಸಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ಎಂಟು ಹೊಸ ಡಿಮಾರ್ಟ್ ಮಳಿಗೆಗಳನ್ನು ಆರಂಭಿಸಿದೆ.

ಪಾಕ್: ಉಗ್ರರ ದಾಳಿಗೆ 23 ಸಾವು

ಪೆಶಾವರ (ಎಎಫ್‌ಪಿ): ಪಾಕಿಸ್ತಾನದ ವಾಯವ್ಯ ಭಾಗದಲ್ಲಿ ಉಗ್ರರು ನಡೆಸಿದ ದಾಳಿಯಲ್ಲಿ ಪೊಲೀಸರು, ಅರೆಸೇನಾ ಪಡೆ ಸಿಬ್ಬಂದಿ ಸೇರಿದಂತೆ 23 ಮಂದಿ ಮೃತಪಟ್ಟಿದ್ದಾರೆ.

ಅಫ್ಗಾನಿಸ್ತಾನದ ಗಡಿಗೆ ಹೊಂದಿಕೊಂಡಂತಿರುವ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಪೊಲೀಸ್ ತರಬೇತಿ ಶಾಲೆಯ ಮೇಲೆ ಆತ್ಮಾಹುತಿ ಬಾಂಬ್ ದಾಳಿ ನಡೆದಿದೆ. ತೆಹ್ರೀಕ್–ಎ–ತಾಲಿಬಾನ್ ಪಾಕಿಸ್ತಾನ ಸಂಘಟನೆಯು ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

'ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯಲ್ಲಿರುವ ಪೊಲೀಸ್ ತರಬೇತಿ ಶಾಲೆಯ ದ್ವಾರಕ್ಕೆ ಸ್ಫೋಟಕ ತುಂಬಿದ ಕಾರನ್ನು ಆತ್ಮಾಹುತಿ ಬಾಂಬರ್ ಶುಕ್ರವಾರ ಡಿಕ್ಕಿ ಹೊಡೆಸಿದ್ದರಿಂದ ಏಳು ಪೊಲೀಸರು ಮೃತಪಟ್ಟಿದ್ದು, 13 ಮಂದಿ ಗಾಯಗೊಂಡಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ಮುಹಮ್ಮದ್ ಹುಸೇನ್ ತಿಳಿಸಿದ್ದಾರೆ.

'ಸ್ಫೋಟದ ನಂತರ ನಡೆದ ಗುಂಡಿನ ಚಕಮಕಿಯಲ್ಲಿ ಆರು ಉಗ್ರರು ಹತರಾಗಿದ್ದಾರೆ' ಎಂದಿದ್ದಾರೆ.

'ಖೈಬರ್ ಜಿಲ್ಲೆಯಲ್ಲಿ ಉಗ್ರರು ನಡೆಸಿದ ದಾಳಿಯಲ್ಲಿ ಅರೆಸೇನಾ ಪಡೆಯ 11 ಸಿಬ್ಬಂದಿ ಮೃತಪಟ್ಟಿದ್ದಾರೆ' ಎಂದು ಹೇಳಿದ್ದಾರೆ.

'ಬಾಜೌರ್ ಜಿಲ್ಲೆಯಲ್ಲಿ ಭಯೋತ್ಪಾದಕರು ಮತ್ತು ಅರೆಸೇನಾ ಪಡೆಗಳ ಮಧ್ಯೆ ನಡೆದ ಪ್ರತ್ಯೇಕ ಘರ್ಷಣೆಯಲ್ಲಿ ಮೂವರು ನಾಗರಿಕರು ಸೇರಿ ಐವರು ಮೃತರಾಗಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹3 ಸಾವಿರ ದಾಟಿದ ಹಸಿಶುಂಠಿ

● ಆರ್.ಜಿತೇಂದ್ರ

ಮೈಸೂರು: ಹಸಿಶುಂಠಿ ಧಾರಣೆಯು ಈ ಹಂಗಾಮಿನಲ್ಲಿ ಮೊದಲ ಬಾರಿಗೆ ₹3 ಸಾವಿರದ ಗಡಿ ದಾಟಿದ್ದು, ರೈತರು ಅವಧಿ ಪೂರ್ವ ಕೊಯ್ಲಿಗೆ ಮುಂದಾಗಿದ್ದಾರೆ.

ಕಳೆದ ತಿಂಗಳಷ್ಟೇ ಹಸಿಶುಂಠಿ ದರ ಪ್ರತಿ ಚೀಲಕ್ಕೆ (60 ಕೆ.ಜಿ.) ₹1500-1800 ಇತ್ತು. ಶನಿವಾರ ಚೀಲಕ್ಕೆ ₹3,000-3,200ರಂತೆ ಖರೀದಿ ನಡೆಯಿತು. ಒಂದೆರಡು ವಾರದಲ್ಲೇ ಪ್ರತಿ ಚೀಲಕ್ಕೆ ಸರಾಸರಿ ₹1,000–1,500ರಷ್ಟು ಬೆಲೆ ಹೆಚ್ಚಾಗಿದೆ.

ಸಾಮಾನ್ಯವಾಗಿ ಜನವರಿ–ಫೆಬ್ರುವರಿಯಲ್ಲಿ ಶುಂಠಿ ಕೊಯ್ಲು ನಡೆಯುತ್ತದೆ. ಆದರೆ ಈ ವರ್ಷ ರೋಗಬಾಧೆಯಿಂದ ಬೆಳೆ ಒಣಗಿರುವ ಕಡೆ ಕೊಳೆಯಲು ಶುರುವಾಗಿದೆ. ಅಂತಹ ಜಮೀನುಗಳಲ್ಲಿ ಅವಧಿಪೂರ್ವ ಕೊಯ್ಲು ನಡೆದಿದೆ.

ಹಳೇ ಮೈಸೂರು ಭಾಗದ ಜಿಲ್ಲೆಗಳಲ್ಲಿ ಈಚಿನ ವರ್ಷಗಳಲ್ಲಿ ಶುಂಠಿಯನ್ನು ಪ್ರಮುಖ ವಾಣಿಜ್ಯ ಬೆಳೆಯನ್ನಾಗಿ ಬೆಳೆಯಲಾಗುತ್ತಿದೆ. ಮೈಸೂರು ಜಿಲ್ಲೆ ಒಂದರಲ್ಲಿಯೇ 8 ಸಾವಿರ ಹೆಕ್ಟೇರ್‌ಗೂ ಅಧಿಕ ಜಮೀನಿನಲ್ಲಿ ಶುಂಠಿ ಬಿತ್ತನೆಯಾಗಿದೆ.

ಆದರೆ ತೀವ್ರ ರೋಗಬಾಧೆಯ ಕಾರಣಕ್ಕೆ ಅರ್ಧದಷ್ಟು ಫಸಲು ರೈತರ ಕೈ ಸೇರಿಲ್ಲ. ಬೆಳೆಯನ್ನು ಉಳಿಸಿಕೊಳ್ಳುವುದೋ, ಸಿಕ್ಕಷ್ಟು ದರಕ್ಕೆ ಮಾರುವುದೋ ಎನ್ನುವ ಚಿಂತೆಯಲ್ಲಿದ್ದವರಿಗೆ ದರ ಏರಿಕೆಯು ಸಮಾಧಾನ ತಂದಿದೆ.

ಕೆಲವು ವರ್ಷಗಳ ಹಿಂದೆ ಶುಂಠಿಗೆ ಪ್ರತಿ ಚೀಲಕ್ಕೆ ₹5–6 ಸಾವಿರದವರೆಗೂ ದಾಖಲೆಯ ಬೆಲೆ ಸಿಕ್ಕಿತ್ತು. ರೈತರು ಇದೇ ಹುರುಪಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಿತ್ತನೆ ಮಾಡಿದ್ದರು. ಆದರೆ ಇದೇ ವರ್ಷ ಜನವರಿ–ಫೆಬ್ರುವರಿಯಲ್ಲಿ ₹1,000–1,200ಕ್ಕೆ ಧಾರಣೆ ಕುಸಿದಿತ್ತು. ಮೇನಲ್ಲಿ ಕೇಂದ್ರ ಸರ್ಕಾರವು ರೈತರಿಂದ ಪ್ರತಿ ಕ್ವಿಂಟಲ್‌ಗೆ ₹2,445ರ ದರದಲ್ಲಿ ರೈತರಿಂದ ಉತ್ಪನ್ನ ಖರೀದಿಸಿತ್ತು.

ಮೈಸೂರು ತಾಲ್ಲೂಕಿನ ಕೊಮ್ಮೇಗೌಡನಕೊಪ್ಪಲು ಗ್ರಾಮದ ಹೊಲದಲ್ಲಿ ಶುಂಠಿ ಕೊಯ್ಲಿನಲ್ಲಿ ಮಹಿಳಾ ಕಾರ್ಮಿಕರು ನಿರತರಾಗಿದ್ದರು – ಪ್ರಜಾವಾಣಿ ಚಿತ್ರ

> **ಶುಂಠಿ ಬೆಳೆಯಲು ಎಕರೆಗೆ ₹5 ಲಕ್ಷದಿಂದ ₹6 ಲಕ್ಷ ಬೇಕು. ರೋಗಬಾಧೆಯಿಂದ ಖರ್ಚು ದುಪ್ಪಟ್ಟಾಗಿದ್ದು, ಅರ್ಧದಷ್ಟು ಬೆಳೆ ನಾಶವಾಗಿದೆ**
>
> **ಉಮೇಶ್,** ರೈತ, ಕೊಮ್ಮೇಗೌಡನಕೊಪ್ಪಲು, ಮೈಸೂರು ತಾಲ್ಲೂಕು

ಕೈದಿ, ಒತ್ತೆಯಾಳುಗಳ ಬಿಡುಗಡೆಗೆ ಸಿದ್ಧತೆ

ಗಾಜಾ/ರಮಲ್ಲಾ (ವೆಸ್ಟ್ ಬ್ಯಾಂಕ್) (ಎಪಿ): ಇಸ್ರೇಲ್ ಜೈಲುಗಳಲ್ಲಿರುವ ಪ್ಯಾಲೆಸ್ಟೀನಿಯನ್ ಕೈದಿಗಳನ್ನು ಮತ್ತು ಹಮಾಸ್ ಸಂಘಟನೆಯು ತನ್ನ ಬಳಿ ಇಟ್ಟುಕೊಂಡಿರುವ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಪ್ರಕ್ರಿಯೆ ಸೋಮವಾರ ಆರಂಭಗೊಳ್ಳಲಿದೆ.

'ಕದನವಿರಾಮ ಜಾರಿಯಾಗಿದೆ. ಜೀವಂತವಾಗಿರುವ 20 ಒತ್ತೆಯಾಳುಗಳು ಸೋಮವಾರ ಬಿಡುಗಡೆಯಾಗಲಿದ್ದಾರೆ. ಮೃತಪಟ್ಟಿರಬಹುದು ಎಂದು ಅಂದುಕೊಂಡಿರುವ ಉಳಿದ 28 ಒತ್ತೆಯಾಳುಗಳ ಮೃತದೇಹಗಳ ಹಸ್ತಾಂತರ ಪ್ರಕ್ರಿಯೆಯೂ ನಡೆಯಲಿದೆ' ಎಂದು ಇಸ್ರೇಲ್ ಸೇನೆ ಹೇಳಿದೆ. 'ಶುಕ್ರವಾರದಿಂದ ಇಸ್ರೇಲ್ ಸೇನೆಯು ದಾಳಿ ನಿಲ್ಲಿಸಿದೆ' ಎಂದು ಪ್ಯಾಲೆಸ್ಟೀನಿಯನ್ನರು ಹೇಳಿದ್ದಾರೆ.

ಗಾಜಾಗೆ ನೆರವಿನ ಹರಿವು: 'ಗಾಜಾ ತಲುಪಲು 1.70 ಲಕ್ಷ ಟನ್‌ನಷ್ಟು ನೆರವಿನ ಸಾಮಾಗ್ರಿಗಳು ಈಗಾಗಲೇ ಜೋರ್ಡಾನ್ ಹಾಗೂ ಈಜಿಪ್ಟ್ ಬಂದರುಗಳಲ್ಲಿವೆ. ಇಸ್ರೇಲ್ ಸೇನೆ ಹಸಿರು ನಿಶಾನೆ ನೀಡಿದ್ದು, ಭಾನುವಾರದಿಂದ ಗಾಜಾಗೆ ಹೆಚ್ಚಿನ ನೆರವಿನ ಸಾಮಾಗ್ರಿಗಳು ತಲುಪಲಿವೆ' ಎಂದು ವಿಶ್ವ ಸಂಸ್ಥೆ ಅಧಿಕಾರಿಗಳು ಹೇಳಿದ್ದಾರೆ.

ಚೀನಾ ನಿರ್ಬಂಧಕ್ಕೆ ಪ್ರತಿಯಾಗಿ ಅಮೆರಿಕದ ಕ್ರಮ

ಚೀನಾ ಸರಕುಗಳಿಗೆ ಶೇ 100 ಹೆಚ್ಚುವರಿ ಸುಂಕ: ಟ್ರಂಪ್

ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ/ ಪಿಟಿಐ): ನವೆಂಬರ್ 1ರಿಂದ ಜಾರಿಗೆ ಬರುವಂತೆ ಚೀನಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ 100ರಷ್ಟು ಸುಂಕ ಹೇರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಹೇಳಿದ್ದಾರೆ.

ಚೀನಾವು ವಿರಳ ಲೋಹಗಳ ರಫ್ತಿನ ಮೇಲೆ ಹೇರಿರುವ ನಿರ್ಬಂಧಗಳಿಗೆ ಪ್ರತಿಯಾಗಿ ಅಮೆರಿಕವು ಹೆಚ್ಚುವರಿ ಸುಂಕದ ಬೆದರಿಕೆ ಒಡ್ಡಿದೆ.

ಅಮೆರಿಕದೊಂದಿಗಿನ ಸುಂಕ ಸಮರ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿನ ಬೆಳವಣಿಗೆಗಳಿಂದಾಗಿ ಚೀನಾ, 17ಕ್ಕೂ ಹೆಚ್ಚು ವಿರಳ ಲೋಹಗಳು ಮತ್ತು ಅವುಗಳ ಮೌಲ್ಯವರ್ಧಿತ ಉತ್ಪನ್ನಗಳ ರಫ್ತಿನ ಮೇಲೆ ಕೆಲವು ನಿರ್ಬಂಧಗಳನ್ನು ಹೇರಿದೆ. ಚೀನಾದಿಂದ ವಿರಳ ಲೋಹ ಆಮದು ಮಾಡಿಕೊಳ್ಳಲು ಕಂಪನಿಗಳು ವಿಶೇಷ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಹತಾಶೆಯಿಂದ ಪೋಸ್ಟ್ ಮಾಡಿರುವ ಟ್ರಂಪ್, 'ಚೀನಾದ ಕ್ರಮ ಆಘಾತಕಾರಿ ಮತ್ತು ಅನಿರೀಕ್ಷಿತ. ಇದು ಇತರೆ ದೇಶಗಳೊಂದಿಗೆ ಹಗೆತನಕ್ಕೆ ಕಾರಣವಾಗಿದೆ. ಮುಂಬರುವ ದಕ್ಷಿಣ ಕೊರಿಯಾ ಪ್ರವಾಸದ ವೇಳೆ, ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರನ್ನು ಭೇಟಿಯಾಗಲು ಯಾವುದೇ ಸಕಾರಣವಿಲ್ಲ' ಎಂದು ಹೇಳಿದ್ದಾರೆ.

ಅಮೆರಿಕದ ಸುಂಕ ಬೆದರಿಕೆ ಕುರಿತು, ವಾಷಿಂಗ್ಟನ್‌ನಲ್ಲಿರುವ ಚೀನಾದ ರಾಯಭಾರಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

ಜಾಗತಿಕ ಆರ್ಥಿಕ ಹಿಂಜರಿತ: ಪದೇ ಪದೇ ಸುಂಕ ವಿಧಿಸುವುದರಿಂದ ಅಮೆರಿಕದಲ್ಲಿ ಹಣದುಬ್ಬರ ದರ ಹೆಚ್ಚಿದ್ದು, ಆರ್ಥಿಕ ಅನಿಶ್ಚಿತತೆ ಮುಂದುವರಿದಿದೆ. ಇದು ಏಪ್ರಿಲ್ ವೇಳೆಗೆ ಮತ್ತೊಂದು ಸುತ್ತಿನ ಜಾಗತಿಕ ಆರ್ಥಿಕ ಹಿಂಜರಿತಕ್ಕೂ ಇದು ಕಾರಣವಾಗಬಹುದು ಎಂಬ ವಿಶ್ಲೇಷಣೆಗಳು ನಡೆಯುತ್ತಿವೆ.

'ಕಾದು ನೋಡೋಣ'

ಶನಿವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, 'ಚೀನಾದ ಸುಂಕ ಬೆದರಿಕೆಗೆ ತಡೆ ಹಾಕಲು ನಮಗೆ ಇದು ಸಕಾಲ. ಹಾಗಾಗಿಯೇ ನಾನು ಅವರಿಗೆ ಶೇ 100 ಹೆಚ್ಚುವರಿ ಸುಂಕ ಜಾರಿಗೊಳಿಸಲು ನ.1ರ ಗಡುವು ನಿಗದಿಪಡಿಸಿದ್ದೇನೆ. ಅಲ್ಲಿಯವರೆಗೆ ಏನಾಗುತ್ತದೆ ಕಾದು ನೋಡೋಣ' ಎಂದು ಹೇಳಿದ್ದಾರೆ.

ಷಿ ಜಿನ್‌ಪಿಂಗ್ ಭೇಟಿಯ ಕುರಿತು ಪ್ರಶ್ನೆ ಬಂದಾಗ, 'ಭೇಟಿಯನ್ನು ರದ್ದುಪಡಿಸಿಲ್ಲ. ಆದರೆ, ಈ ಭೇಟಿಯಿಂದ ಅಮೆರಿಕಕ್ಕೆ ಏನು ಪ್ರಯೋಜನವಾಗುತ್ತದೆ ಎನ್ನುವುದು ನನಗೆ ತಿಳಿದಿಲ್ಲ' ಎಂದಿದ್ದಾರೆ.

ಆರೋಗ್ಯ ತಪಾಸಣೆ

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆರೋಗ್ಯ ಅತ್ಯುತ್ತಮ ಮಟ್ಟದಲ್ಲಿದೆ' ಎಂದು ಅವರ ವೈದ್ಯ ಸೀನ್ ಬಾರ್ಬಬೆಲಾ ಹೇಳಿದ್ದಾರೆ.

ಟ್ರಂಪ್ ಅವರು ಶುಕ್ರವಾರ ರಾತ್ರಿ ಇಲ್ಲಿನ ವಾಲ್ಟರ್ ರೀಡ್ ನ್ಯಾಷನಲ್ ಮಿಲಿಟರಿ ಆಸ್ಪತ್ರೆಯಲ್ಲಿ ನಿಗದಿತ ಆರೋಗ್ಯ ತಪಾಸಣೆಗೆ ಒಳಗಾದರು. ಅವರಿಗೆ ಕೋವಿಡ್–19 ಬೂಸ್ಟರ್ ಲಸಿಕೆ ಮತ್ತು ವಾರ್ಷಿಕ ಜ್ವರದ ಚುಚ್ಚುಮದ್ದು ನೀಡಲಾಯಿತು ಎಂದು ಆಸ್ಪತ್ರೆ ವೈದ್ಯಕೀಯ ವರದಿ ಉಲ್ಲೇಖಿಸಿ, ಶ್ವೇತಭವನ ಪ್ರಕಟಣೆಯಲ್ಲಿ ತಿಳಿಸಿದೆ.

ಟಿಟಿಕೆ ಪ್ರೆಸ್ಟೀಜ್ ಗೌರವಾಧ್ಯಕ್ಷ ಜಗನ್ನಾಥನ್ ನಿಧನ

ನವದೆಹಲಿ (ಪಿಟಿಐ): ಅಡುಗೆ ಮನೆ ಉಪಕರಣಗಳ ತಯಾರಿಕಾ ವಲಯದಲ್ಲಿ ದೇಶದ ಅತಿದೊಡ್ಡ ಕಂಪನಿ ಟಿಟಿಕೆ ಪ್ರೆಸ್ಟೀಜ್‌ನ ಗೌರವಾಧ್ಯಕ್ಷ ಟಿ.ಟಿ. ಜಗನ್ನಾಥನ್ (77) ಅವರು ಬೆಂಗಳೂರಿನಲ್ಲಿ ಗುರುವಾರ ನಿಧನರಾದರು. ಜಗನ್ನಾಥನ್ ಅವರು 'ಅಡುಗೆ ಮನೆಯ ಸಾಮ್ರಾಟ' ಎಂದೇ ಪ್ರಸಿದ್ಧರಾಗಿದ್ದರು.

ಟಿ.ಟಿ. ಜಗನ್ನಾಥನ್

ಐಐಟಿ ಚೆನ್ನೈನಿಂದ ಚಿನ್ನದ ಪದಕ ಪಡೆದಿದ್ದ ಜಗನ್ನಾಥನ್, ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದಿದ್ದರು. ಕಳೆದ 50 ವರ್ಷದಿಂದ ಟಿಟಿಕೆ ಪ್ರೆಸ್ಟೀಜ್‌ನ ಆಡಳಿತ ಮಂಡಳಿಯಲ್ಲಿದ್ದರು. ಇವರ ಅಜ್ಜ ಹಾಗೂ ಕೇಂದ್ರ ಹಣಕಾಸು ಇಲಾಖೆಯ ಮಾಜಿ ಸಚಿವರಾಗಿದ್ದ ಟಿ.ಟಿ. ಕೃಷ್ಣಮಾಚಾರಿ 1928ರಲ್ಲಿ ಈ ಕಂಪನಿಯನ್ನು ಸ್ಥಾಪಿಸಿದ್ದರು.

1975ರಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಜಗನ್ನಾಥನ್ ಕಂಪನಿ ಸೇರಿದರು. 2000ವರೆಗೆ ಇದೇ ಹುದ್ದೆಯಲ್ಲಿ ಮುಂದುವರಿದ ಅವರು ಬಳಿಕ 19 ವರ್ಷ ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದರು. 2019ರಲ್ಲಿ ಕಾರ್ಯನಿರ್ವಾಹಕ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ಅವರು ಕಾರ್ಯನಿರ್ವಾಹಕೇತರ ನಿರ್ದೇಶಕ/ ಅಧ್ಯಕ್ಷರಾಗಿ ಮುಂದುವರಿದರು. 2025ರ ಮಾರ್ಚ್ 25ರಿಂದ ಅಧ್ಯಕ್ಷ ಸ್ಥಾನದಿಂದ ಹೊರಬಂದರು.

ಜಗನ್ನಾಥನ್ ಅವರು ಕಂಪನಿಯ ನಿರ್ದೇಶಕ/ಅಧ್ಯಕ್ಷರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದರು. ಕಂಪನಿಯು ಜಗನ್ನಾಥನ್ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸುತ್ತಿದೆ ಎಂದು ಕಂಪನಿ ತಿಳಿಸಿದೆ.

ವೈದ್ಯ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ

ಒಂದನೇ ಪುಟದಿಂದ...

ನಡೆದಿದ್ದೇನು?: 'ಕಾಲೇಜು ಕ್ಯಾಂಪಸ್ ಬಳಿಯ ಅರಣ್ಯ ಪ್ರದೇಶದಲ್ಲಿಯೇ ಘಟನೆ ನಡೆದಿದೆ. ರಾತ್ರಿ ಊಟಕ್ಕೆ ಸಂತ್ರಸ್ತೆ ಮತ್ತು ಆಕೆಯ ಸ್ನೇಹಿತ ತೆರಳುತ್ತಿದ್ದರು. ಈ ವೇಳೆ ಮೂವರು ಅಪರಿಚಿತರು ಬೈಕ್‌ನಲ್ಲಿ ಬಂದಿದ್ದಾರೆ. ಇವರು ಬರುತ್ತಿದ್ದಂತೆಯೇ ಸ್ನೇಹಿತ ಓಡಿಹೋಗಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ಅರಣ್ಯ ಪ್ರದೇಶಕ್ಕೆ ಎಳೆದುಕೊಂಡು ಹೋಗಿ ಅತ್ಯಾಚಾರ ಎಸಗಿದ ಬಳಿಕ, ಘಟನೆ ಕುರಿತು ಯಾರಿಗೂ ಹೇಳದಂತೆ ವ್ಯಕ್ತಿಗಳು ಸಂತ್ರಸ್ತೆಯನ್ನು ಬೆದರಿಸಿದ್ದಾರೆ. ಆಕೆಯ ಬಳಿ ಇದ್ದ ಮೊಬೈಲ್ ಕಿತ್ತುಕೊಂಡಿದ್ದಾರೆ. ಮೊಬೈಲ್ ನೀಡಬೇಕು ಎಂದರೆ, ಹಣ ನೀಡಬೇಕು ಎಂದೂ ಬೇಡಿಕೆ ಇಟ್ಟಿದ್ದರು' ಎಂದರು.

ಸಂತ್ರಸ್ತೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಜೊತೆಗೆ, ಘಟನೆ ಕುರಿತು ಆಕೆಯಿಂದ ಹೇಳಿಕೆಯನ್ನೂ ಪಡೆದುಕೊಳ್ಳಲಾಗಿದೆ. ವಿದ್ಯಾರ್ಥಿನಿಯ ಪೋಷಕರು ದೂರು ನೀಡಿದ್ದು, ತನಿಖೆ ನಡೆಸುತ್ತಿದ್ದೇವೆ' ಎಂದರು. ರಾಷ್ಟ್ರೀಯ ಮಹಿಳಾ ಆಯೋಗದ ತಂಡವೊಂದು ಶೀಘ್ರವೇ ಸಂತ್ರಸ್ತೆ ಮತ್ತು ಆಕೆಯ ಪೋಷಕರನ್ನು ಭೇಟಿ ಮಾಡಲಿದೆ.

ಕಳೆದ ವರ್ಷ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಪ್ರಕರಣ ಸಂಬಂಧ ದೇಶದಾದ್ಯಂತ ಭಾರಿ ಆಕ್ರೋಶ ವ್ಯಕ್ತವಾಗಿತ್ತು.

> **ಸುದ್ದಿ ಕೇಳಿ ಆಘಾತವಾಯಿತು. ಕಾನೂನು ಪ್ರಕಾರವಾಗಿ ಆರೋಪಿಗೆ ಕಠಿಣ ಶಿಕ್ಷೆ ಆಗುವ ಹಾಗೆ ಮಾಡುವಂತೆ ನಾನು ಮಮತಾ ಬ್ಯಾನರ್ಜಿ ಅವರಲ್ಲಿ ಒತ್ತಾಯಿಸುತ್ತೇನೆ**
>
> **ಮೋಹನ್ ಚರಣ್ ಮಾಂಝಿ,** ಒಡಿಶಾ ಮುಖ್ಯಮಂತ್ರಿ

> ಕೆಲವು ಕಡೆಗಳ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹ ಮಾಡಲು ಯತ್ನಿಸುತ್ತಿದ್ದೇವೆ. ಇನ್ನಷ್ಟು ಸಾಕ್ಷ್ಯ ಸಂಗ್ರಹಿಸಲು ವಿಧಿ ವಿಜ್ಞಾನ ತಂಡವು ಘಟನಾ ಸ್ಥಳಕ್ಕೆ ತೆರಳಲಿದೆ
>
> **ಪೊಲೀಸ್ ಅಧಿಕಾರಿಗಳು**

> ಪಶ್ಚಿಮ ಬಂಗಾಳದಲ್ಲಿ ಮಹಿಳೆಯರ ಮೇಲಿನ ಅಪರಾಧವು ಅಧಿಕಗೊಳ್ಳುತ್ತಿದೆ. ಇಂಥ ಪ್ರಕರಣಗಳಲ್ಲಿ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ. ಇದು ದುರದೃಷ್ಟಕರ
>
> **ಅರ್ಚನಾ ಮಜುಂದಾರ್,** ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ

> ಸಂತ್ರಸ್ತೆಯ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ. ವಾಸಿಫ್ ಅಲಿ ಎನ್ನುವ ವ್ಯಕ್ತಿ ಮತ್ತು ಆತನ ಸಹಚರರ ವಿರುದ್ಧ ಪ್ರಕರಣ ದಾಖಲಾದ ಮಾಹಿತಿ ಸಿಕ್ಕಿದೆ
>
> **ಅಮಿತ್ ಮಾಳವೀಯ,** ಬಿಜೆಪಿ ಐಟಿ ಸೆಲ್ ಮುಖ್ಯಸ್ಥ

> ಘಟನೆ ಕುರಿತು ತಕ್ಷಣವೇ ವರದಿ ನೀಡುವಂತೆ ಕಾಲೇಜಿನ ಆಡಳಿತ ಮಂಡಳಿಗೆ ಸೂಚಿಸಲಾಗಿದೆ. ವರದಿ ಬಂದ ಬಳಿಕ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು
>
> **ಹಿರಿಯ ಅಧಿಕಾರಿ,** ರಾಜ್ಯ ಆರೋಗ್ಯ ಇಲಾಖೆ

ಧಾನ್ಯ ಉತ್ಪಾದನೆಯಲ್ಲಿ ಸ್ವಾವಲಂಬನೆಗೆ ಪ್ರಧಾನಿ ಮೋದಿ ಕರೆ

ಎರಡು ಕೃಷಿ ಯೋಜನೆಗಳಿಗೆ ಚಾಲನೆ

ನವದೆಹಲಿ (ಪಿಟಿಐ): ಒಟ್ಟು ₹35,440 ಕೋಟಿ ಮೊತ್ತದ ಎರಡು ಕೃಷಿ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಚಾಲನೆ ನೀಡಿದರು. ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಉದ್ದೇಶದ ಒಂದು ಯೋಜನೆ ಕೂಡ ಇದರಲ್ಲಿ ಸೇರಿದೆ.

ಆಮದು ಮೇಲಿನ ಅವಲಂಬನೆ ಕಡಿಮೆ ಮಾಡಲು ಹಾಗೂ ಜಾಗತಿಕ ಬೇಡಿಕೆಗೆ ಸ್ಪಂದಿಸಲು ರೈತರು ಉತ್ಪಾದಕತೆಯನ್ನು ಹೆಚ್ಚಿಸಬೇಕು ಎಂದು ಮೋದಿ ಅವರು ಕರೆ ನೀಡಿದರು.

ತಮ್ಮ ನೇತೃತ್ವದ ಸರ್ಕಾರದ ಆಡಳಿತ ಅವಧಿಯನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರಗಳ ಆಡಳಿತ ಅವಧಿಯೊಂದಿಗೆ ಹೋಲಿಸಿದ ಮೋದಿ ಅವರು, 'ವಿರೋಧ ಪಕ್ಷದ ನಿರ್ಲಕ್ಷ್ಯವು ಕೃಷಿ ವ್ಯವಸ್ಥೆಯು ದುರ್ಬಲಗೊಳ್ಳಲು ಕಾರಣವಾಯಿತು. ಬೇರೆ ಬೇರೆ ಇಲಾಖೆಗಳು ಪರಸ್ಪರ ಸಮನ್ವಯವಿಲ್ಲದೆ ಬೇರೆ ಬೇರೆ ದಿಕ್ಕುಗಳಲ್ಲಿ ಕೆಲಸ ಮಾಡುತ್ತಿದ್ದವು' ಎಂದು ದೂರಿದರು.

ಪ್ರಧಾನಿಯವರು ಚಾಲನೆ ನೀಡಿದ ಎರಡೂ ಯೋಜನೆಗಳಿಗೆ ಕೇಂದ್ರ ಸಂಪುಟವು ಈಗಾಗಲೇ ಅನುಮೋದನೆ ನೀಡಿದ್ದು, ಮುಂಬರುವ ಹಿಂಗಾರು ಬಿತ್ತನೆ ಅವಧಿಯಿಂದ 2030–31ರವರೆಗೆ ಇವು ಜಾರಿಯಲ್ಲಿ ಇರಲಿವೆ. ಈ ಯೋಜನೆಗಳು ದೇಶದ ಲಕ್ಷಾಂತರ ಮಂದಿ ರೈತರ ಹಣೆಬರಹವನ್ನು ಬದಲಿಸಲಿವೆ ಎಂದು ಮೋದಿ ಹೇಳಿದ್ದಾರೆ.

ಕೃಷಿ, ಪಶು ಸಂಗೋಪನೆ, ಮೀನುಗಾರಿಕೆ, ಆಹಾರ ಸಂಸ್ಕರಣಾ ವಲಯಗಳಿಗೆ ಸೇರಿದ ಒಟ್ಟು ₹5,450 ಕೋಟಿ ಮೊತ್ತದ ವಿವಿಧ ಯೋಜನೆಗಳನ್ನು ಕೂಡ ಪ್ರಧಾನಿ ಯವರು ಇದೇ ಸಂದರ್ಭದಲ್ಲಿ ಉದ್ಘಾಟಿಸಿದರು. ₹815 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

'ಸ್ವಾತಂತ್ರ್ಯಾನಂತರ ನೀವು (ರೈತರು) ದೇಶವನ್ನು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬಿ ಆಗಿಸಿದ್ದೀರಿ. ಈಗ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸುವಲ್ಲಿ ಮಹತ್ವದ ಪಾತ್ರ ಹೊಂದಿದ್ದೀರಿ. ನಾವು ಆಹಾರ ಧಾನ್ಯಗಳನ್ನು ಜಾಗತಿಕ ಮಾರುಕಟ್ಟೆಗಾಗಿಯೂ ಉತ್ಪಾದಿಸಬೇಕಿದೆ' ಎಂದು ಮೋದಿ ಅವರು ಹೇಳಿದರು. ಜಾಗತಿಕ ಮಟ್ಟದಲ್ಲಿ ಬೇಡಿಕೆ ಇರುವ ಬೆಳೆಗಳ ಮೇಲೆ ಗಮನ ನೀಡುವಂತೆ ಅವರು ರೈತರಿಗೆ ಕರೆ ನೀಡಿದರು.

ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಜೊತೆ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

ಯೋಜನೆಗಳು

- ₹24 ಸಾವಿರ ಕೋಟಿ ಗಾತ್ರದ 'ಪ್ರಧಾನ ಮಂತ್ರಿ ಧನ ಧಾನ್ಯ ಕೃಷಿ ಯೋಜನೆ'
- ₹11,400 ಕೋಟಿ ಗಾತ್ರದ 'ದ್ವಿದಳ ಧಾನ್ಯಗಳಲ್ಲಿ ಆತ್ಮ ನಿರ್ಭರತೆಯ ಯೋಜನೆ'

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

STAR INFRATECH
A Leading Construction company in Karnataka looking for talent acquisition for the following positions

TECHNICAL
- PROJECT MANAGER — 15-20 Years' Experience (Road/Canal) - 5 Positions
- DEPUTY PROJECT MANAGER — 12-15 Years' Experience (Road/Canal) - 5 Positions
- SR. ENGINEER (QS) — 8-15 Years' Experience (Road/Canal) - 10 Positions
- SR. ENGINEER (QA/QC) — 8-12 Years' Experience (Road/Canal) - 10 Positions
- SR. ENGINEERS — 5-8 Years' Experience (Road/Canal) - 10 Positions
- ENGINEER — 3-5 Years' Experience (Road/Canal) - 20 Positions
- SURVEYORS — Above 5 years' Experience (Road/Canal) - 10 Positions

QUALIFICATION: - BE/B.TECH/DCE

NON-TECHNICAL
- SR. EXECUTIVE (ACCOUNTS) — 8-10 Years' Exp (Construction Industry) - 10 Positions
- STORE MANAGER — 10-15 Years Exp (Construction Industry)-05 Positions
- EXECUTIVE (STORES) — 6-10 Years Exp (Construction Industry)-05 Positions
- SR.SAFETY OFFICER — 8-10 Years Exp (Construction Industry)-05 Positions

Experience in handling major projects highly preferable. Location all over Karnataka.
Note: Qualification Certificates, Last Three months Salary Slip & Bank Statement.
Walk In Interview:
Date: 13.10.2025 (Timings 10.30 AM to 1 PM)
#177,6th Main, KEB Layout, Sanjay Nagar, Bangalore-560094.
Ph:+91 80 2341 2304/05
Email Id: hr.starinfratech09@gmail.com

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 8095043191

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

Teachers/ Professors

WANTED ACADEMIC Counselor, Admission Consultants for well Reputed college for BE, MBA, B.Sc Agri, M.Sc Agri(all districts of karnataka)Apply on or before 16/10/2025 avssham@yahoo.com Call:9482009262

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Tumkur

